# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಫೆಬ್ರವರಿ 26, 2025

ಸಂಪುಟ : 51 ಸಂಚಿಕೆ : 285 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## 108 ಜ್ಯೋತಿರ್ಲಿಂಗಗಳ ಬೈಕ್ ರ್‍ಯಾಲಿ

**ಇಂದು ಸದ್ಭಾವನಾ ಶಾಂತಿಯಾತ್ರೆ**

ದಾವಣಗೆರೆ, ಫೆ.25- ಮಹಾಶಿವರಾತ್ರಿ ಪ್ರಯುಕ್ತ ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ 108 ಜ್ಯೋತಿರ್ಲಿಂಗಗಳ ಮೋಟಾರ್ ಬೈಕ್ ರ್‍ಯಾಲಿಯನ್ನು ಇಂದು ನಗರದಲ್ಲಿ ನಡೆಸಲಾಯಿತು.

ಶಿವರಾತ್ರಿಯಲ್ಲಿನ 'ರಾತ್ರಿ' ಎಂಬ ಪದವು ಅಜ್ಞಾನದ ಅಂಧಕಾರ ಮತ್ತು ಅಧರ್ಮದಿಂದ ತುಂಬಿದ ಕತ್ತಲನ್ನು ಸೂಚಿಸುತ್ತದೆ. ವರ್ತಮಾನ ಸಮಯದಲ್ಲಿ ನೈತಿಕ, ಮಾನವೀಯ ಹಾಗೂ ಅಧ್ಯಾತ್ಮಿಕ ಮೌಲ್ಯಗಳ ಘೋರ ಅವಹೇಳನವಾಗುತ್ತಿದೆ. ಮನಸ್ಸು ವಿಕಾರಗಳಿಂದ ದೂಷಿತವಾಗಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ದೆಸೆಯಲ್ಲಿ ಬ್ರಹ್ಮಾಕುಮಾರೀಸ್ ಸಂಸ್ಥೆಯು ಹಮ್ಮಿಕೊಂಡಿರುವ ಶಿವರಾತ್ರಿ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಈ ರ್‍ಯಾಲಿಯನ್ನು ಆಯೋಜಿಸಲಾಗಿತ್ತು.

ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯ ಶಿವಧ್ಯಾನ ಮಂದಿರ ಆವರಣದಿಂದ ಆರಂಭಗೊಂಡ ರ್‍ಯಾಲಿಯು ನಗರಾದ್ಯಂತ ಸಂಚರಿಸಿತು. ಬಸವ ನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ನಂಜುಂಡು ಸ್ವಾಮಿ ಅವರು ರ್‍ಯಾಲಿಯನ್ನು ಉದ್ಘಾಟಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಏರ್ಪಾಡಾಗಿದ್ದ ರ್‍ಯಾಲಿಯ ಮುಂದಾಳತ್ವವನ್ನು ರಾಜಯೋಗ ಶಿಕ್ಷಕರುಗಳಾದ ಬ್ರಹ್ಮಾಕುಮಾರಿ ಶೋಭಾಜಿ, ಬ್ರಹ್ಮಾಕುಮಾರಿ ಶಾಂತಾಜಿ ಮತ್ತಿತರರು ವಹಿಸಿದ್ದರು.

ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಏರ್ಪಾಡಾಗಿದ್ದ ರ್‍ಯಾಲಿಯ ಮುಂದಾಳತ್ವವನ್ನು (5ನೇ ಪುಟಕ್ಕೆ)

# ಎಂಇಎಸ್ ಪುಂಡಾಟಿಕೆಗೆ ಆಕ್ರೋಶ

## ಬೆಳಗಾವಿಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಬಣಗಳಿಂದ ಪ್ರತ್ಯೇಕ ಪ್ರತಿಭಟನೆ

ಬೆಳಗಾವಿ, ಫೆ. 25 - ಬಸ್ ಕಂಡಕ್ಟರ್ ಮಹಾದೇವ ಹುಕ್ಕೇರಿ ಮೇಲಿನ ಹಲ್ಲೆ ಹಾಗೂ ಅವರ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿರುವುದನ್ನು ಖಂಡಿಸಿ, ಇಲ್ಲಿನ ರಾಣಿ ಚೆನ್ನಮ್ಮ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಟಿ.ಎ. ನಾರಾಯಣಗೌಡ, ಪ್ರವೀಣ ಶೆಟ್ಟಿ ಬಣಗಳ ಕಾರ್ಯಕರ್ತರು ಮಂಗಳವಾರ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ರಾಣಿ ಚನ್ನಮ್ಮ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ಕನ್ನಡ ಪರ ಕಾರ್ಯಕರ್ತರು ಕನ್ನಡ ಬಾವುಟಗಳನ್ನು ಹಿಡಿದು ಎಂಇಎಸ್, ಶಿವಸೇನೆ ವಿರುದ್ಧ ಘೋಷಣೆಗಳನ್ನು ಮೊಳಗಿಸಿದರು. ಆರಂಭದಲ್ಲಿ ಪ್ರತಿಭಟನೆಗೆ ಮುಂದಾದ ಪ್ರವೀಣ ಶೆಟ್ಟಿ ಹಾಗೂ ಅವರ ಬಣದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಬಳಿಕ ಆಗಮಿಸಿದ ಕ.ರ.ವೇ ರಾಜ್ಯಾಧ್ಯಕ್ಷ ನಾರಾಯಣ ಗೌಡ, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಂಡಕ್ಟರ್ ಮಹಾದೇವ ಹುಕ್ಕೇರಿ ಅವರನ್ನು ಭೇಟಿಯಾಗಿ, ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು. ಬಳಿಕ ರಾಣಿ ಚೆನ್ನಮ್ಮ ವೃತ್ತದಲ್ಲಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಾಳೇಕುಂದ್ರಿ ಚಲೋ ಗೆ ಮುಂದಾದ ನಾರಾಯಣಗೌಡ ಅವರನ್ನು ಬೆಳಗಾವಿ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಮನವೊಲಿಸುವಲ್ಲಿ (4ನೇ ಪುಟಕ್ಕೆ)



## ಕಂಡಕ್ಟರ್ ಮೇಲಿನ ಪೋಕ್ಸೋ ಪ್ರಕರಣ ಹಿಂದಕ್ಕೆ

ಬೆಳಗಾವಿ, ಫೆ. 25 - ಬಸ್ ಕಂಡಕ್ಟರ್ ವಿರುದ್ಧ ದಾಖಲಿಸಲಾಗಿದ್ದ ಪೋಕ್ಸೋ ದೂರನ್ನು ವಾಪಸ್ ಪಡೆಯುವುದಾಗಿ ಬಾಲಕಿಯ ಕುಟುಂಬದವರು ವಿಡಿಯೋ ಹೇಳಿಕೆ ನೀಡಿದ್ದಾರೆ.

ಮರಾಠಿ ಬರುವುದಿಲ್ಲ ಎಂಬ ಕಾರಣಕ್ಕಾಗಿ ಕಂಡಕ್ಟರ್ ಮೇಲೆ ಬಾಲಕಿಯ ಕಡೆಯವರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿತ್ತು. ಇದು ಕರ್ನಾಟಕ ಹಾಗೂ ಮಹಾರಾಷ್ಟ್ರ ನಡುವೆ ಬಿಕ್ಕಟ್ಟಿಗೆ ಕಾರಣವಾಗಿತ್ತು. ಕರ್ನಾಟಕ ಸಾರಿಗೆ ಬಸ್ ಚಾಲಕನ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿತ್ತು. ಆನಂತರ ಬಾಲಕಿಯ ಜೊತೆ ಕಂಡಕ್ಟರ್ ಲೈಂಗಿಕ ದುರ್ವರ್ತನೆ ನಡೆಸಿರುವುದಾಗಿ ಪೋಕ್ಸೋ ಕಾಯ್ದೆಯಡಿ ದೂರು ದಾಖಲಿಸಲಾಗಿತ್ತು. ಶುಕ್ರವಾರ ಮಹಾರಾಷ್ಟ್ರ ಗಡಿಯ ಬಳಿ ಈ ಘಟನೆ ನಡೆದಿತ್ತು. ನಂತರ ಎರಡೂ (4ನೇ ಪುಟಕ್ಕೆ)

## ಭ್ರಷ್ಟಾಚಾರ ವಿಚಾರಣೆ ಹೆಚ್ಡಿಕೆ ಮನವಿಗೆ ನಕಾರ



ನವದೆಹಲಿ, ಫೆ. 25 - ಡಿನೋಟಿಫಿಕೇಶನ್ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಿಸಲಾಗಿದ್ದ ಭ್ರಷ್ಟಾಚಾರ ಪ್ರಕರಣದ ವಿಚಾರಣೆಗೆ ತಡೆಯಾಜ್ಞೆ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ದಾಖಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಅಕ್ಟೋಬರ್ 9, 2020 ರಲ್ಲಿ (3ನೇ ಪುಟಕ್ಕೆ)

## ಹೋಳಿ ರದ್ದುಗೊಳಿಸಿದ್ದಕ್ಕೆ ಆಕ್ರೋಶ ಶಿಕ್ಷಕರನ್ನು ಕೂಡಿ ಹಾಕಿದ ವಿದ್ಯಾರ್ಥಿಗಳು

ಇಂದೋರ್, ಫೆ. 25 - ಹೋಳಿ ಹಬ್ಬದ ಆಚರಣೆಗೆ ಅನುಮತಿ ನಿರಾಕರಿಸಿದ ಕಾರಣ ಆಕ್ರೋಶಗೊಂಡ ವಿದ್ಯಾರ್ಥಿಗಳು, ಶಿಕ್ಷಕರನ್ನು ಕೋಣೆಯೊಂದರಲ್ಲಿ ಕೂಡಿ ಹಾಕಿ ವಿದ್ಯುತ್ ಪೂರೈಕೆ ಕಡಿತಗೊಳಿಸಿದ ಘಟನೆ ಮಧ್ಯಪ್ರದೇಶದ ಪ್ರತಿಷ್ಠಿತ ಇಂದೋರ್ ಕಾಲೇಜೊಂದರಲ್ಲಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರಿ ಹೋಳ್ಕರ್ ವಿಜ್ಞಾನ ಕಾಲೇಜಿನಲ್ಲಿ ಸೋಮವಾರ ನಡೆದ ಘಟನೆ ಬೆಳಕಿಗೆ ಬಂದಿದೆ. ಈ ಬಗ್ಗೆ ತನಿಖೆ ನಡೆಸಲು ಜಿಲ್ಲಾಡಳಿತ ಆದೇಶಿಸಿದೆ. ಕಾಲೇಜಿನ ಆಡಳಿತ ಮಂಡಳಿ ಹೋಳಿ ಆಚರಣೆಗೆ ಅನುಮತಿ ನಿರಾಕರಿಸಿತ್ತು. ಶಿಕ್ಷಕರು ಕಾಲೇಜಿನ ಕೋಣೆ ಯೊಂದರಲ್ಲಿ ಇದ್ದ ಸಂದ ರ್ಭದಲ್ಲಿ ಅವರನ್ನು ಕೂಡಿಹಾಕಿದ ವಿದ್ಯಾರ್ಥಿಗಳು, ನಂತರ ವಿದ್ಯುತ್ ಪೂರೈಕೆ ಕಡಿತಗೊಳಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸುಮಾರು (4ನೇ ಪುಟಕ್ಕೆ)

## ನಿಗೂಢ ರೋಗ : ಕಾಂಗೋದಲ್ಲಿ 50 ಸಾವು

**ರೋಗ ಲಕ್ಷಣ ಕಂಡು ಬಂದ ಕೆಲವೇ ಗಂಟೆಗಳಲ್ಲಿ ಮರಣ**

ಕಿನ್ಸಾಸ, ಫೆ. 25 – ಕಾಂಗೋ ದೇಶದ ವಾಯುವ್ಯ ಭಾಗದಲ್ಲಿ ನಿಗೂಢ ರೋಗಕ್ಕೆ 50ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಸ್ಥಳದಲ್ಲಿರುವ ವಿಶ್ವ ಆರೋಗ್ಯ ಸಂಘಟನೆಯ ವೈದ್ಯರು ತಿಳಿಸಿದ್ದಾರೆ.

ಬಹುತೇಕ ಪ್ರಕರಣಗಳಲ್ಲಿ ರೋಗಲಕ್ಷಣ ಕಾಣಿಸಿಕೊಂಡ 48 ಗಂಟೆಗಳಲ್ಲಿ ಸಾವು ಸಂಭವಿಸಿದೆ. ಇದು ನಿಜಕ್ಕೂ ಕಳವಳಕಾರಿಯಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಸರ್ಜೆ ಗಲೆಬಟೋ ಹೇಳಿದ್ದಾರೆ.

ಜನವರಿ 21ರಿಂದ ಈ ರೀತಿಯ 419 ರೋಗ ಪ್ರಕರಣಗಳು ಕಾಣಿಸಿಕೊಂಡಿವೆ. ಈ ಪೈಕಿ 53 (4ನೇ ಪುಟಕ್ಕೆ)

## 6600 ಕೋಟಿ ರೂ. ಗೈನ್‌ಬಿಟ್‌ಕಾಯಿನ್ ಹಗರಣ : ದಾಳಿ

ನವದೆಹಲಿ, ಫೆ.25 - 6600 ಕೋಟಿ ರೂ.ಗಳ ಗೈನ್‌ಬಿಟ್‌ಕಾಯಿನ್ ಕ್ರಿಪ್ಟೋಕರೆನ್ಸಿ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ದೇಶದ 60 ಕಡೆಗಳಲ್ಲಿ ದಾಳಿ ನಡೆಸಿದೆ. ನವದೆಹಲಿ, ಪುಣೆ, ಚಂಡಿಘಡ, ನಾಂದೇಡ್ ಹಾಗೂ ಬೆಂಗಳೂರು ಸೇರಿದಂತೆ ಅರವತ್ತಕ್ಕೂ ಹೆಚ್ಚು ಕಡೆ ಸಿಬಿಐ ದಾಳಿ ನಡೆಸಿದೆ.

ಈಗ ಮೃತರಾಗಿರುವ ಅಮಿತ್ ಭಾರದ್ವಾಜ್ ಹಾಗೂ ಸಹೋದರ ಅಜಯ್ ಭಾರದ್ವಾಜ್ ಈ ಹಗರಣದ ರೂವಾರಿಗಳು. ಪೊಂಜಿ ಹಗರಣದ ಮೂಲಕ ಜನರಿಗೆ ವಂಚನೆ ಮಾಡಲಾಗಿತ್ತು ಎಂದು ಸಿಬಿಐ ತಿಳಿಸಿದೆ.

2015ರಲ್ಲಿ www. gainbitcoin.com ಎಂಬ ವೆಬ್‌ಸೈಟ್ (5ನೇ ಪುಟಕ್ಕೆ)

## ನಿಟುವಳ್ಳಿ ಸಣ್ಣ ಹನುಮವ್ವನವರ ಹನುಮಂತಪ್ಪ ನಿಧನ



ದಾವಣಗೆರೆ ಸಿಟಿ ನಿಟುವಳ್ಳಿ ಉಪ್ಪಾರ್ ಬೀದಿ ನಿವಾಸಿ ಮಹಾನಗರಪಾಲಿಕೆ ಮಾಜಿ ಸದಸ್ಯರಾದ ಹೆಚ್. ಗುರುರಾಜ್ ಹಾಗೂ ಎಸ್.ಹೆಚ್. ಹನುಮಂತಪ್ಪ, ಇಂಜಿನಿಯರ್ ಇವರ ತಂದೆಯವರಾದ

**ಸಣ್ಣ ಹನುಮವ್ವನವರ ಹನುಮಂತಪ್ಪ**

ಇವರು ದಿನಾಂಕ 25.02.2025ರ ಮಂಗಳವಾರ ಸಂಜೆ 7.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅವರಿಗೆ 85 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.02.2025ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಲೋಕಿಕೆರೆ ರಸ್ತೆ, ತುರ್ಚಘಟ್ಟ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಪತ್ನಿ : ಶ್ರೀಮತಿ ರತ್ನಮ್ಮ
ಮಕ್ಕಳಾದ : ಶ್ರೀಮತಿ ಲಕ್ಷ್ಮಿದೇವಿ ಶ್ರೀ ಎಸ್.ಹೆಚ್. ಹನುಮಂತಪ್ಪ
ಶ್ರೀಮತಿ ಲಕ್ಷ್ಮಿದೇವಿ ಶ್ರೀ ಹೆಚ್. ಗುರುರಾಜ್
ಶ್ರೀಮತಿ ನೇತ್ರಾವತಿ ಶ್ರೀ ಗುರುಸ್ವಾಮಿ, ಶ್ರೀಮತಿ ಸುಜಾತ ಶ್ರೀ ಮಂಜುನಾಥ್,
ಮೊಮ್ಮಕ್ಕಳಾದ : ಪ್ರಜ್ವಲ್, ಕುಶಾಲ್, ಚಂದನ ಹಾಗೂ ಅಳಿಯಂದಿರು, ಸೊಸೆಯಂದಿರು, ಸಹೋದರರು ಮತ್ತು ಸಣ್ಣ ಹನುಮವ್ವರ ವಂಶಸ್ಥರು, ನಿಟುವಳ್ಳಿ ಹಾಗೂ ಅಪಾರ ಬಂಧು-ಬಳಗ. ಮೊ. 95353 40002, 94481 54708

## ಶ್ರೀಮತಿ ಪಿ. ಹಾಲಮ್ಮ ಕೋಂ ದಿ. ಚೂರಿ ವೀರಭದ್ರಪ್ಪ ಮಾಸ್ತರ್ ಕಂದಗಲ್ ನಿಧನ



ದಾವಣಗೆರೆ ವಿದ್ಯಾನಗರ (ವಿನಾಯಕ ಬಡಾವಣೆ 1ನೇ ಮೇನ್), ಟೀಚರ್ಸ್ ಕಾಲೋನಿ 12ನೇ ಕ್ರಾಸ್, ವಿನಾಯಕ ಬಡಾವಣೆ, 6ನೇ ಕ್ರಾಸ್ ಎದುರು, 'ವೃಷಭ', ಡೋ.ನಂ.1645/130ರ ನಿವಾಸಿ ದಿವಂಗತ ಕಂದಗಲ್ ಶ್ರೀ ಚೂರಿ ವೀರಭದ್ರಪ್ಪನವರ ಧರ್ಮಪತ್ನಿ ಹಾಗೂ ನಮ್ಮ ಮಾತೋಶ್ರೀಯವರಾದ

**ಕಂದಗಲ್ ಶ್ರೀಮತಿ ಪಿ. ಹಾಲಮ್ಮ**

ಇವರು ದಿನಾಂಕ-25-02-2025ರ ಮಂಗಳವಾರ ಮಧ್ಯಾಹ್ನ 2.45ಕ್ಕೆ ವಯೋಸಹಜ ಕಾಯಿಲೆಯಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 90 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.02.2025ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಗರದ ಗ್ಲಾಸ್ ಹೌಸ್ ಹತ್ತಿರದ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ :
ಶ್ರೀಮತಿ ಶಶಿಕಲಾ ಸಿ.ವಿ, ಶ್ರೀ ಶಿವಾನಂದಪ್ಪ ಕೆ.ಬಿ,
ನಿವೃತ್ತ ಎಇಇ ಪಿಡಬ್ಲ್ಯೂಡಿ, ದಾವಣಗೆರೆ.
ಶ್ರೀಮತಿ ಸುಧಾ ಸಿ.ವಿ, ಶ್ರೀ ನಾಗೇಶ್ ಕೆ.ಎಸ್
ಶ್ರೀಮತಿ ಲೀಲಾ ಸಿ.ವಿ, ಶ್ರೀ ಮುತ್ತಪ್ಪ ಕಾರೇರ
ಶ್ರೀಮತಿ ಉಮಾದೇವಿ, ದಿವಂಗತ ರವಿ ಸಿ.ವಿ ಮತ್ತು
ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಚೂರಿ ವಂಶಸ್ಥರು,
ಕಂದಗಲ್ಲು ಹಾಗೂ ಅಪಾರ ಬಂಧು-ಮಿತ್ರರು ದಾವಣಗೆರೆ.
ಮೊ. 8217386303, 9886738924, 8073598408




# ಹಠ ಹಿಡಿದು 5 ಸಾವಿರ ಕೋಟಿ ತರಲಿ



## ಚಿತ್ರದುರ್ಗ : ಭದ್ರಾ ಮೇಲ್ದಂಡೆ, ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಮುಖಂಡರ ಹಕ್ಕೊತ್ತಾಯ

ಚಿತ್ರದುರ್ಗ, ಫೆ.25- ಭದ್ರಾ ಮೇಲ್ದಂಡೆ ಕಾಮಗಾರಿ ಅರ್ಧಕ್ಕೆ ನಿಂತಿರುವ ಕಾರಣ ಕಾಲುವೆಗಳು ಬಿಸಿಲಿಗೆ ಬಾಯ್ತೆರೆದು ನಿಂತಿವೆ. ಶೀಘ್ರ ನೀರು ತುಂಬದಿದ್ದರೆ ಕಾಮಗಾರಿ ನಾಶವಾಗುವ ಅಪಾಯವಿದೆ. ಹೀಗಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಮುಂದಿನ ರಾಜ್ಯ ಬಜೆಟ್‌ನಲ್ಲಿ ಕಾಮಗಾರಿಗೆ ಕನಿಷ್ಠ 5,000 ಕೋಟಿ ಮೀಸಲಿಡುವಂತೆ ನೋಡಿಕೊಳ್ಳಬೇಕು ಎಂದು ನೀರಾವರಿ ಅನುಷ್ಠಾನ ಹೋರಾಟ ಸಮಿತಿ ರಾಜ್ಯ ಸರ್ಕಾರದ ಮುಂದೆ ಸೋಮವಾರ ಹಕ್ಕೊತ್ತಾಯ ಮಂಡಿಸಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸಭೆಯಲ್ಲಿ ಸಚಿವರು, ಶಾಸಕರಿಗೆ ಹಕ್ಕೊತ್ತಾಯ ಪತ್ರ ನೀಡಿದ ಅವರು, ಬೇಸಿಗೆ ಸಮೀಪಿಸುತ್ತಿದ್ದು ಭದ್ರಾ ಕಾಲುವೆಗಳು ದೀರ್ಘ ಕಾಲದವರೆಗೆ ಗುಣಮಟ್ಟ ಕಾಯ್ದುಕೊಳ್ಳಲಿವೆ ಎಂಬ ಗ್ಯಾರಂಟಿ ಇಲ್ಲ. ಯೋಜನೆ ಆರಂಭಿಸಿದಾಗ ಇದ್ದ ಉತ್ಸಾಹ ಈಗ ಉಳಿದಿಲ್ಲ. ಉತ್ಸಾಹ ಮುಂದುವರೆದಿದ್ದರೆ ಇಷ್ಟೊತ್ತಿಗೆ ಕಾಮಗಾರಿ ಪೂರ್ಣಗೊಂಡು ಬಯಲು ಸೀಮೆ ರೈತರಿಗೆ ನೀರು ದೊರೆಯಬೇಕಾಗಿತ್ತು. ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯಿಂದ ಮಹತ್ವಾಕಾಂಕ್ಷಿ ಯೋಜನೆ ನೆನೆಗುದಿಗೆ ಬಿದ್ದಿದೆ ಎಂದು ಮುಖಂಡರು ಆರೋಪಿಸಿದರು.

ಕೇಂದ್ರ ಸರ್ಕಾರ 2022–23ರ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದ 5,300 ಕೋಟಿ ಹಣದಲ್ಲಿ ಇಲ್ಲಿಯವರೆಗೆ ಒಂದು ಪೈಸೆಯೂ ಬಂದಿಲ್ಲ. ಕೇಂದ್ರದ ಅನುದಾನ ನಂಬಿಕೊಂಡು ರಾಜ್ಯ ಸರ್ಕಾರ ತನ್ನ ಪಾಲಿನ ಜವಾಬ್ದಾರಿ ಮರೆಯಬಾರದು. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಸ್ವಾಭಿಮಾನವನ್ನು ಮೆರೆಯಬೇಕು, ಬದ್ಧತೆ ತೋರಿಸಬೇಕು. ಕೇಂದ್ರ ಸರ್ಕಾರ ಅನುದಾನ ಕೊಡುತ್ತದೆ ಎಂಬ ಕಾರಣಕ್ಕೆ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ತಂದಿಲ್ಲ ಎಂಬುದನ್ನು ರಾಜ್ಯ ಸರ್ಕಾರ ಅರ್ಥ ಮಾಡಿಕೊಳ್ಳಬೇಕು ಎಂದರು.

ಭದ್ರಾ ನೀರು ನಮ್ಮ ಜಿಲ್ಲೆಯ ರೈತರಿಗೆ ಸಿಕ್ಕಿದ್ದರೆ ಅವರ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗುತ್ತಿತ್ತು. ಸರ್ಕಾರಗಳ ಇಚ್ಛಾಶಕ್ತಿ ಕೊರತೆಯ ಕಾರಣಕ್ಕೆ ಕಾಮಗಾರಿ ಸಾಕಾರಗೊಂಡಿಲ್ಲ. ಯೋಜನೆ ಘೋಷಣೆಯಾದಾಗ 21 ಸಾವಿರ ಕೋಟಿ ಖರ್ಚು ಕಾಮಗಾರಿಗೆ ತಗುಲುತ್ತಿತ್ತು. ಆದರೆ ಈಗ ದರಪಟ್ಟಿ ಪರಿಷ್ಕೃತವಾದಲ್ಲಿ ಯೋಜನಾ ವೆಚ್ಚ ದ್ವಿಗುಣವಾಗುವ ಸಾಧ್ಯತೆ ಇದೆ ಎಂದರು.

ಜಲಶಕ್ತಿ ರಾಜ್ಯ ಸಚಿವ, ನಮ್ಮವರೇ ಆದ ವಿ. ಸೋಮಣ್ಣ ಅವರಿಗೂ ಸಮಿತಿ ವತಿಯಿಂದ ಈಗಾಗಲೇ ಮನವಿ ಮಾಡಲಾಗಿತ್ತು. ಕಳೆದ ಗಾಂಧಿ ಜಯಂತಿಯಂದು ಚಿತ್ರದುರ್ಗಕ್ಕೆ ಬಂದಿದ್ದ ಸಚಿವ ವಿ.ಸೋಮಣ್ಣ ಅವರು 45 ದಿನದ ಒಳಗಾಗಿ ಮೊದಲ ಕಂತು ಬಿಡುಗಡೆ ಮಾಡಿಸುವುದಾಗಿ ಹೇಳಿ ಹೋದವರು ಮತ್ತೆ ಹಿಂತಿರುಗಿ ನೋಡಿಲ್ಲ. ಅವರು ತಮ್ಮ ಮಾತು ಉಳಿಸಿಕೊಳ್ಳಲಿಲ್ಲ. ಭದ್ರಾ ಮೇಲ್ದಂಡೆ ಯೋಜನೆ ಪದೇ ಪದೇ ವಂಚನೆ, ದ್ರೋಹಕ್ಕೆ ಒಳಗಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಟಿ.ರಘುಮೂರ್ತಿ ಮಾತನಾಡಿ 'ಭದ್ರಾ ಮೇಲ್ದಂಡೆ ಕಾಮಗಾರಿ ಇನ್ನೆರಡು ವರ್ಷದ ಒಳಗೆ ಪೂರ್ಣಗೊಳಿಸುವುದಾಗಿ ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ರಾಜ್ಯ ಸರ್ಕಾರ ಅನುದಾನ ಬಿಡುಗಡೆ ವಿಚಾರದಲ್ಲಿ ತನ್ನ ಬದ್ಧತೆ ಪ್ರದರ್ಶಿಸಲಿದೆ. ಅದೇ ರೀತಿ ಕೇಂದ್ರ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿ' ಎಂದರು.

ಶಾಸಕ ಕೆ.ಸಿ.ವೀರೇಂದ್ರ ಮಾತನಾಡಿ, ಈ ಭಾಗದ ರೈತರಿಗೆ ಭದ್ರಾ ಮೇಲ್ದಂಡೆ ಯೋಜನೆ ಅವಶ್ಯಕವಾಗಿದ್ದು ಆದಷ್ಟು ಶೀಘ್ರ ಕಾಮಗಾರಿ ಪೂರ್ಣಗೊಳ್ಳಬೇಕು. ಈ ವೇಳೆಗಾಗಲೇ ಯೋಜನೆ ಸಾಕಾರಗೊಳ್ಳಬೇಕಾಗಿತ್ತು. ಕೇಂದ್ರ ಸರ್ಕಾರ ಕೂಡ ತನ್ನ ಪಾಲಿನ ಹಣ ನೀಡಲು ನಿರ್ಲಕ್ಷ್ಯ ವಹಿಸಿದೆ ಎಂದರು.

ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಬಿ.ಎ.ಲಿಂಗಾರೆಡ್ಡಿ, ಮುಖಂಡರಾದ ಜೆ. ಯಾದವ ರೆಡ್ಡಿ, ಸಂಗೇನಹಳ್ಳಿ ಅಶೋಕ್ ಕುಮಾರ್, ಲಕ್ಷ್ಮಣ ರೆಡ್ಡಿ, ಅನಂತರೆಡ್ಡಿ, ಸುರೇಶ್ ಬಾಬು, ಬಸವರಾಜಪ್ಪ, ಕೆ.ಪಿ.ಭೂತಯ್ಯ,ಕೆ.ಸಿ. ಹೊರಕೇರಪ್ಪ, ಹಂಪಯ್ಯನಮಾಳಿಗೆ ಧನಂಜಯ, ಬಸ್ತಿಹಳ್ಳಿ ಸುರೇಶ್ ಬಾಬು, ಚಿಕ್ಕಪ್ಪನಹಳ್ಳಿ ರುದ್ರಸ್ವಾಮಿ, ಮಲ್ಲಾಪುರ ತಿಪ್ಪೇಸ್ವಾಮಿ, ಚಿಕ್ಕಪ್ಪನಹಳ್ಳಿ ಷಣ್ಮುಖ ಇದ್ದರು.

# ಬಂಗಾರದ ಶೌಚಾಲಯ ಕದಿಯಲು ಕಳ್ಳರ 'ಉದ್ಧಟತನದ ದಾಳಿ'

## ಕಳುವಿನ ವೇಳೆ ಬ್ರಿಟನ್ ಅರಮನೆಗೆ ತೀವ್ರ ಹಾನಿ

ಲಂಡನ್, ಫೆ. 25 - ಬಂಗಾರದ ಕಳ್ಳತನ ವಿಶ್ವದಾದ್ಯಂತ ಸಾಮಾನ್ಯ. ಆದರೆ ಬ್ರಿಟನ್ ಅರಮನೆಯಿಂದ ಕಳ್ಳರು ಬಂಗಾರದ ಶೌಚಾಲಯ ಪೀಠವನ್ನು ಕದ್ದಿದ್ದಾರೆ. ಇದರ ಮೌಲ್ಯ ಬಂಗಾರಕ್ಕಿಂತಲೂ ಹೆಚ್ಚಾಗಿದೆ. ಅಷ್ಟೇ ಅಲ್ಲದೆ ಇದರ ಕಳುವಿನ ವೇಳೆ ಐತಿಹಾಸಿಕ ಅರಮನೆಗೆ ತೀವ್ರ ಹಾನಿಯನ್ನು ಮಾಡಿದ್ದಾರೆ.

ಬ್ರಿಟನ್‌ನ ಬ್ಲೆನ್‌ಹೀಮ್ ಅರಮನೆಯಲ್ಲಿ ಕಳ್ಳರು ಐದೇ ನಿಮಿಷಗಳಲ್ಲಿ ಶೌಚಾಲಯ ಪೀಠವನ್ನು ಕಳುವು ಮಾಡಿದ್ದರು. ಸೆಪ್ಟೆಂಬರ್ 14, 2019ರಲ್ಲಿ ಈ ಕಳ್ಳತನ ನಡೆದಿತ್ತು.

ಈ ಕೃತ್ಯದ ಬಗ್ಗೆ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕ್ಸ್‌ಫರ್ಡ್ ಗ್ರೌಂಡ್ ನ್ಯಾಯಾಲಯದಲ್ಲಿ ವಾದ ಮಂಡಿಸಿರುವ ಅಟಾರ್ನಿ ಜನರಲ್ ಕ್ರಿಸ್ಟೋಫರ್ ಜೂಲಿಯನ್ ಕ್ರಿಸ್ಟೋಫರ್, ಇದು 'ಉದ್ಧಟತನದ ದಾಳಿ'ಯಾಗಿದೆ. ಪ್ರಕರಣದಲ್ಲಿ ಬಂಧಿತ ಮೂವರ ಪೈಕಿ ಓರ್ವ ಕಳ್ಳತನದಲ್ಲಿ ಭಾಗಿಯಾಗಿದ್ದಾನೆ ಹಾಗೂ ಇನ್ನಿಬ್ಬರು ಮಾರಾಟದಲ್ಲಿ ಭಾಗಿಯಾಗಿದ್ದಾರೆ ಎಂದಿದ್ದಾರೆ.

ಬಂಗಾರದ ಶೌಚಾಲಯವನ್ನು ವಶಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಇದನ್ನು ತುಂಡು ತುಂಡಾಗಿ ಕತ್ತರಿಸಿ ಮಾರಾಟ ಮಾಡಲಾಗಿದೆ ಎನ್ನಲಾಗುತ್ತಿದೆ.

ಈ ಬಂಗಾರದ ಶೌಚಾಲಯ ಪೀಠದ ತೂಕ 98 ಕೆಜಿ ಆಗಿತ್ತು. ಇದಕ್ಕೆ ಆರು ದಶಲಕ್ಷ ಡಾಲರ್‌ಗಳ ವಿಮೆ ಮಾಡಲಾಗಿತ್ತು. ಕಳ್ಳತನ ನಡೆದ ಸಂದರ್ಭದಲ್ಲಿ ಇದರ ಮೌಲ್ಯ 3.5 ದಶಲಕ್ಷ ಡಾಲರ್ ಎಂದು ಅಂದಾಜಿಸಲಾಗಿತ್ತು.

ಬಂಗಾರದ ಈ ಶೌಚಾಲಯ ಪೀಠವನ್ನು ಒಂದೊಮ್ಮೆ ನ್ಯೂಯಾರ್ಕ್‌ನ ಡಿ ಗುಗನ್‌ಹಿಮ್ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು. ಬ್ಲೆನ್‌ಹೀಮ್ ಅರಮನೆಯಲ್ಲಿ ಹಣ ಪಾವತಿಸಿ ಈ ಶೌಚಾಲಯವನ್ನು ಮೂರು ನಿಮಿಷಗಳ ಕಾಲ ಬಳಸಬಹುದಿತ್ತು. ಆರೋಪಿಗಳಲ್ಲಿ ಓರ್ವನಾದ ಮೈಕಲ್ ಜೋನ್ಸ್ ಕಳ್ಳತನಕ್ಕೆ ಮುಂಚೆ ಎರಡು ಬಾರಿ ಈ ಶೌಚಾಲಯ ಬಳಸಿದ್ದ.

ಜೋನ್ಸ್ ಸೇರಿದಂತೆ ಐವರು ನಂತರ ಅರಮನೆಯ ಬಾಗಿಲನ್ನು ಮುರಿದು ಕಳ್ಳತನ ಮಾಡಲಾಗಿದ್ದ ಎರಡು ವಾಹನಗಳನ್ನು ಬಳಸಿ ಬಂಗಾರದ ಶೌಚಾಲಯ ಪೀಠ ಹೊತ್ತುಕೊಂಡು ಹೋಗಿದ್ದರು.

ಈ ರೀತಿ ಕಳ್ಳತನ ಮಾಡುವಾಗ ಶೌಚಾಲಯದ ಪೈಪುಗಳು ಒಡೆದಿದ್ದವು. ಇದರಿಂದಾಗಿ ನೀರು ನುಗ್ಗಿ 18ನೇ ಶತಮಾನದ ಅರಮನೆಗೆ ತೀವ್ರ ಹಾನಿಯಾಗಿತ್ತು. ಈ ಅರಮನೆಯನ್ನು ಯುನೆಸ್ಕೋದ ವಿಶ್ವ ಪರಂಪರೆಯ ತಾಣ ಎಂದು ಗುರುತಿಸಲಾಗಿದೆ.

ಜೋನ್ಸ್ ಹಾಗೂ ಜೇಮ್ಸ್ ಶೀನ್ ಎಂಬುವವರು ಈ ಶೌಚಾಲಯವನ್ನು ಕದ್ದಿದ್ದರು. ನಂತರ ಇನ್ನು ಮೂವರ ಜೊತೆ ಸೇರಿಕೊಂಡು ಬಂಗಾರದ ಶೌಚಾಲಯ ಒಡೆದು ಮಾರಾಟ ಮಾಡಿದ್ದಾರೆ ಎಂದು ಪ್ರಕರಣ ದಾಖಲಿಸಲಾಗಿತ್ತು.

# ಅಂಬೇಡ್ಕರ್, ಭಗತ್ ಸಿಂಗ್ ಚಿತ್ರಗಳ ಬಗ್ಗೆ ಜಟಾಪಟಿ

ನವದೆಹಲಿ, ಫೆ. 25 - ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ದೆಹಲಿ ವಿಧಾನಸಭಾ ಅಧಿವೇಶನದ ಉದ್ಘಾಟನಾ ಭಾಷಣ ಮಾಡುವ ವೇಳೆ ಅಡ್ಡಿಪಡಿಸಿದ ಕಾರಣಕ್ಕಾಗಿ ಪ್ರತಿಪಕ್ಷವಾದ ಎ.ಎ.ಪಿ.ಯ 21 ಶಾಸಕರನ್ನು ಅಮಾನತ್ತುಗೊಳಿಸಲಾಗಿದೆ.

## ದೆಹಲಿಯಲ್ಲಿ 21 ಎಎಪಿ ಶಾಸಕರು ಅಮಾನತ್ತು

ದೆಹಲಿ ಲೋಕೋಪಯೋಗಿ ಇಲಾಖೆ ಸಚಿವ ಪರ್ವೇಶ್ ವರ್ಮ ಅವರು ಶಾಸಕರನ್ನು ಅಮಾನತ್ತುಗೋಳಿಸುವ ಪ್ರಸ್ತಾವನೆ ಮಂಡಿಸಿದರು. ನಂತರ ಶಾಸಕರನ್ನು ಫೆಬ್ರವರಿ 28 ರವರೆಗೆ ಅಮಾನತ್ತುಗೊಳಿಸುವ ನಿರ್ಣಯ ಅಂಗೀಕರಿಸಲಾಗಿದೆ.

ಮಂಗಳವಾರ ವಿಧಾನಸಭೆಯ ಕಲಾಪ ಆರಂಭವಾದಾಗ ಪ್ರತಿಪಕ್ಷದ ನಾಯಕಿ ಆತಿಶಿ ಸೇರಿದಂತೆ ಶಾಸಕರು ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿ ಕಚೇರಿಯಿಂದ ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಹಾಗೂ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಚಿತ್ರಗಳನ್ನು ತೆಗೆದುಹಾಕಲಾಗಿದೆ ಎಂದು ಆರೋಪಿಸಿದರು.

ಕಲಾಪಕ್ಕೆ ಅಡ್ಡಿಪಡಿಸಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ವಿಧಾನಸಭಾಧ್ಯಕ್ಷ ವಿಜಯೇಂದ್ರ ಗುಪ್ತ, ಅಭಿವೃದ್ಧಿಗಾಗಿ ಆಡಳಿತಾರೂಢ ಹಾಗೂ ವಿರೋಧ ಪಕ್ಷದ ಸದಸ್ಯರು ಜೊತೆಯಾಗಿ ಕಾರ್ಯನಿರ್ವಹಿಸಬೇಕು. ಇಂದಿನ ಚರ್ಚೆ ಪ್ರಾಮುಖ್ಯತೆ ಪಡೆದಿದೆ ಎಂದರು.

ಆದರೆ ಆಮ್ ಆದ್ಮಿ ಪಾರ್ಟಿ ಶಾಸಕರು ಗದ್ದಲ ಮುಂದುವರೆಸಿದರು. ಎಎಪಿ 22 ಶಾಸಕರನ್ನು ಹೊಂದಿದೆ. ಆದರೆ ಶಾಸಕ ಅಮಾನತ್‌ವುಲ್ಲಾ ಖಾನ್ ಅವರು ಸದನಕ್ಕೆ ಗೈರಾಗಿರುವ ಕಾರಣ ಅಮಾನತ್ತಿಗೆ ಗುರಿಯಾಗಿದ್ದಾರೆ. ಉಳಿದ 21 ಶಾಸಕರನ್ನು ಮಂಗಳವಾರ ಅಮಾನತ್ತುಗೊಳಿಸಲಾಗಿದೆ.

ಮುಖ್ಯಮಂತ್ರಿ ಕಚೇರಿಯಿಂದ ಭಗತ್ ಸಿಂಗ್ ಹಾಗೂ ಅಂಬೇಡ್ಕರ್ ಅವರ ಚಿತ್ರಗಳನ್ನು ತೆಗೆದುಹಾಕಿಲ್ಲ ಎಂದು ಬಿಜೆಪಿ ತಿಳಿಸಿದೆ.

ಮುಖ್ಯಮಂತ್ರಿ ಕಚೇರಿಯಲ್ಲಿ ಮಹಾತ್ಮ ಗಾಂಧಿ, ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್, ಭಗತ್ ಸಿಂಗ್, ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಭಾವಚಿತ್ರಗಳಿರುವ ಚಿತ್ರಗಳನ್ನು ಬಿಜೆಪಿ ಹಂಚಿಕೊಂಡಿದೆ.

# ಹರಿಹರದಲ್ಲಿ ಇಂದು ಮಹಾರುದ್ರಾಭಿಷೇಕ, ಸಪ್ತ ದೇವತೆಗಳಿಗೆ ಪಂಚಾಮೃತ ಅಭಿಷೇಕ



ಭರಂಪುರ 108 ಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಮಹಾರುದ್ರಾಭಿಷೇಕ ಹಾಗೂ ಸಪ್ತ ದೇವತೆಗಳ ಪಂಚಾಮೃತ ಅಭಿಷೇಕ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಬಸವೇಶ್ವರ ಹಾಗೂ 108 ಲಿಂಗೇಶ್ವರ ಕಮಿಟಿ ತಿಳಿಸಿದೆ.

ಶ್ರೀ ಡಾ. ಶರಣ ಬಸವಲಿಂಗ ಶಿವಯೋಗಿಗಳವರ ನೇತೃತ್ವದಲ್ಲಿ ಇಂದು ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ ಮಹಾರುದ್ರಾಭಿಷೇಕ ಹಾಗೂ ಪಂಚಾಮೃತ ಅಭಿಷೇಕ ಬಿಲ್ವಾರ್ಚನೆ, ಭಸ್ಮಾರ್ಚನೆ ನಡೆಯುತ್ತದೆ.

ನಂತರ ಭಕ್ತರಿಗೆ ದೇವರ ದರ್ಶನದ ಮೂಲಕ ಮಹಾಶಿವರಾತ್ರಿಯ ಜಾಗರಣೆ ಆಚರಣೆ ಮಾಡಲಾಗುವುದು. ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಇದೇ ವೇಳೆ ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ತೆರಳಿದ ಪತ್ರಕರ್ತರಾದ ಶೇಖರಗೌಡ ಪಾಟೀಲ್, ಪ್ರವೀಣ್ ಹನಗವಾಡಿ ಅವರು ತ್ರಿವೇಣಿ ಸಂಗಮದ ಗಂಗಾ, ಯಮುನಾ, ಸರಸ್ವತಿ ನದಿಯ ಜಲವನ್ನು ಶ್ರೀ 108 ಲಿಂಗೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕಕ್ಕೆ ಡಾ. ಶರಣ ಬಸವಲಿಂಗ ಶಿವಯೋಗಿಗಳು ಮತ್ತು ದೇವಸ್ಥಾನ ಸಮಿತಿಯ ಮುಖಂಡರ ಸಮ್ಮುಖದಲ್ಲಿ ವಿತರಣೆ ಮಾಡಲಾಯಿತು.

ಈ ವೇಳೆ ದೇವಸ್ಥಾನ ಸಮಿತಿಯ ಖಜಾಂಚಿ ಬೆಣ್ಣೆ ಸಿದ್ದೇಶ್, ಸದಸ್ಯರಾದ ಗಜೇಂದ್ರ, ಮಾಕನೂರು ರೇವಣಸಿದ್ದಪ್ಪ, ಕೊಟ್ರೇಶಪ್ಪ ಹಾದಿಮನಿ, ಚಂದ್ರಪ್ಪ ಮಜೀಗಿ, ಭೇಟಪ್ಪ, ದಯಾನಂದ, ಭೀಮ್‌ಸೇನ್, ಸೇರಿದಂತೆ ಇತರರಿದ್ದರು.


# ನಾಳೆ ಗೋವಿನಕೋವಿ ಶ್ರೀಗಳ ಪ್ರಥಮ ವರ್ಧಂತ್ಯೋತ್ಸವ



ನ್ಯಾಮತಿ, ಫೆ. 25 - ತಾಲ್ಲೂಕಿನ ಗೋವಿನಕೋವಿ ಶ್ರೀ ಹಾಲಸ್ವಾಮಿ ಬೃಹನ್ಮಠದಲ್ಲಿ ನಾಡಿದ್ದು ದಿನಾಂಕ 27 ಮತ್ತು 28 ರಂದು ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಹಾಲಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ಶ್ರೀ ಸದ್ಗುರು ಶಿವಯೋಗಿ ವಿಶ್ವಾರಾಧ್ಯ ಮಹಾಲಿಂಗ ಹಾಲಸ್ವಾಮಿಗಳವರ ಪಟ್ಟಾಧಿಕಾರದ ಪ್ರಥಮ ವರ್ಷದ ವರ್ಧಂತ್ಯೋತ್ಸವ ನಡೆಯಲಿದೆ.

ದಿನಾಂಕ 27ರ ಸಂಜೆ ದುರ್ಗಾ ಹೋಮ, ಮಹಾ ಮಂಗಳಾರತಿ, ಧರ್ಮ ಸಭೆ ನಡೆಯಲಿದೆ. ದಿನಾಂಕ 28ರ ಬೆಳಗ್ಗೆ ಪಲ್ಲಕ್ಕಿ ಉತ್ಸವ, ತೇಜಿ ಉತ್ಸವ ನಂತರ ರಕ್ತದಾನ ಶಿಬಿರ ನಡೆಯಲಿದೆ.

# ಮಾವಿನಹೊಳೆ ಶ್ರೀ ಮಹಾರುದ್ರಸ್ವಾಮಿ ಶಿವರಾತ್ರಿ ಮಹೋತ್ಸವ



ಚನ್ನಗಿರಿ ತಾಲ್ಲೂಕು ಸುಕ್ಷೇತ್ರ ಮಾವಿನಹೊಳೆ ಶ್ರೀ ಗುರು ಮಹಾರುದ್ರಸ್ವಾಮಿ ಮಹಾಶಿವರಾತ್ರಿ ಮಹೋತ್ಸವ ಕಾರ್ಯಕ್ರಮವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ರಾತ್ರಿ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ ತಾವರಗೆರೆ, ಶಿಲಾಮಠಾಧ್ಯಕ್ಷರು ಅವರ ಸಾನ್ನಿಧ್ಯದಲ್ಲಿ ಶ್ರೀ ಗುರುಮಹಾರುದ್ರಸ್ವಾಮಿ, ಅಡ್ಡಪಲ್ಲಕ್ಕಿ ಉತ್ಸವವು ಶ್ರೀ ಮಠಕ್ಕೆ ಆಗಮಿಸುವುದು. ನಂತರ ಬೆಳಗಿನ ಜಾವ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ಮಹಾ ರುದ್ರಾಭಿಷೇಕ, ಅಷ್ಟೋತ್ತರ, ಸಹಸ್ರ ಬಿಲ್ವಾರ್ಚನೆ ಪಾದ ಪೂಜೆ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯುವವು.

ನಾಳೆ ಗುರುವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಗುರು ಮಹಾರುದ್ರಸ್ವಾಮಿ ಅಭಿಷೇಕ, ಮಹಾಪೂಜೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಜರುಗುವವು. ದಿನಾಂಕ 28ರ ಶುಕ್ರವಾರ ಬೆಳಿಗ್ಗೆ 11.30 ರಿಂದ ಭದ್ರಕಾಳಿ ಅಮ್ಮನವರ ಜಾತ್ರೆ ಮತ್ತು ಪ್ರಸಾದ ವಿನಿಯೋಗವಿರುತ್ತದೆ.

# ಮಲೇಬೆನ್ನೂರು : 'ಕಲಿಕಾ ಹಬ್ಬ' ಮಕ್ಕಳ ಅಭಿವೃದ್ಧಿಯ ಮುನ್ನುಡಿ

ಮಲೇಬೆನ್ನೂರು, ಫೆ.25- ಮಕ್ಕಳ ಕಲಿಕೆಗೆ ಭದ್ರಬುನಾದಿ ಹಾಗೂ ಮಕ್ಕಳ ಅಭಿವೃದ್ಧಿಯ ಮುನ್ನುಡಿ ಈ ಕಲಿಕಾ ಹಬ್ಬವಾಗಿದೆ ಎಂದು ಗೋವಿನಹಾಳ್ ಗ್ರಾಮದ ಹಿರಿಯ ಮುಖಂಡ ಜಿ. ಮಲ್ಲನಗೌಡ್ರು ಹೇಳಿದರು.

ಗೋವಿನಹಾಳ್ ಗ್ರಾಮದ ಸ.ಹಿ.ಪ್ರಾ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೊಕ್ಕನೂರು ಕ್ಲಸ್ಟರ್ ಮಟ್ಟದ ಎಫ್.ಎಲ್.ಎನ್ 'ಕಲಿಕಾ ಹಬ್ಬ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದು, ಅದರ ಸದುಪಯೋಗವಾಗಬೇಕೆಂದರು.



ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಮಾತನಾಡಿ, ಪ್ರತಿಯೊಂದು ಮಗುವಿನಲ್ಲೂ ವಿಶೇಷ ಸಾಮರ್ಥ್ಯವಿರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸೋಣ ಎಂದರು.

ಕಾರ್ಯಕ್ರಮದ ಆರಂಭಕ್ಕೂ ಮೊದಲಿಗೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಡೊಳ್ಳು, ಬ್ಯಾಂಡ್, ವಾದ್ಯಗಳು ಹಾಗೂ ಕುಂಭಮೇಳದೊಂದಿಗೆ ಚಕ್ಕಡಿ ಗಾಡಿ ಮತ್ತು ಟ್ರಾಕ್ಟರ್‌ಗಳಲ್ಲಿ ಛದ್ಮ ವೇಷ ಒಳಗೊಂಡಂತೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮವನ್ನು ಸಾಂಪ್ರದಾಯಿಕ ದೀಪ ಬೆಳಗಿಸಿ, ಮಣಿಗಳನ್ನು ಚದುರಿಸಿ ಕಲಿಕಾ ಹಬ್ಬ ಎಂದು ಪ್ರದರ್ಶಿಸಿ, ಕಲಿಕಾ ಹಬ್ಬದ ವಿಶೇಷ ಬ್ಯಾನರ್ ಪ್ರದರ್ಶಿಸುವ ಮೂಲಕ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಚಂದ್ರಪ್ಪ, ಉಪಾಧ್ಯಕ್ಷ ಕರಿಬಸಪ್ಪ ಕುಪ್ಪೇಲೂರು, ನಿರ್ದೇಶಕರಾದ ಶ್ರೀಮತಿ ಸುಮಂಗಲ, ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ದೇವೇಂದ್ರಪ್ಪ, ಶಾಲೆಯ ಮುಖ್ಯ ಶಿಕ್ಷಕ ಸಿದ್ದಪ್ಪ ಸಂಗಣ್ಣನವರ್, ತಾಲ್ಲೂಕು ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಆರ್. ಆರ್.ಮಠ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಟಿ. ಮಂಜಪ್ಪ, ಕಾರ್ಯದರ್ಶಿ ತಿಪ್ಪೇಶ್ ರೆಡ್ಡಿ, ಖಜಾಂಚಿ ಬಸವನಗೌಡ, ಇಸಿಒಗಳಾದ ತೀರ್ಥಪ್ಪ, ಹರೀಶ್ ನೋಟಗಾರ್, ಹೆಚ್.ಬಿ.ಬಸವರಾಜ್, ಅಶೋಕ್ ಕುಮಾರ್ ಹಾಗೂ ಬಿ.ಆರ್.ಪಿ ಗಳಾದ ವೀರಪ್ಪ, ಭಾಗ್ಯಲಕ್ಷ್ಮಿ, ಸಿ.ಕೆ.ಮಹೇಶ್, ಸಿ.ಆರ್.ಪಿ ಗಳಾದ ಕೆ.ಬಸವರಾಜಯ್ಯ, ಎಂ.ಎಸ್. ರಮೇಶ್, ಸಿ.ನಂಜುಂಡಪ್ಪ, ಚನ್ನಕೇಶವ ಕಟ್ಟಿ, ಶಿವಪ್ಪ ಬಡಿಗೇರ್, ರೂಪ, ಚನ್ನಮ್ಮ ತಡಕನಹಳ್ಳಿ, ಸುನಿತಾ, ಶಿಕ್ಷಕರುಗಳಾದ ಗೋವಿಂದಪ್ಪ, ಅಮಿತ್, ನಿಜಾಮುದ್ದೀನ್, ಪ್ರಭು ಪ್ರಸಾದ್, ದಿವಾಕರ್, ಕರಿಬಸಪ್ಪ, ತಿಮ್ಮರಾಜ್, ದೇವರಾಜ್, ಶಾಂತರಾಜ್, ಬಸವರಾಜ್, ಮಂಜಣ್ಣ, ರಾಜಪ್ಪ, ಶಾಲೆಯ ಸಿಬ್ಬಂದಿ ವರ್ಗದವರಾದ ಗೋಣಿ ರಾಮಪ್ಪ, ಗಜರಾಜ, ನಾಯಕ್, ಅಂಜಿನಪ್ಪ ಹಾಗೂ ಪೋಷಕರು ಭಾಗವಹಿಸಿದ್ದರು.

ಶಾಲಾ ಮುಖ್ಯ ಶಿಕ್ಷಕ ಸಿದ್ದಪ್ಪ ಸಂಗಣ್ಣನವರ್ ಸ್ವಾಗತಿಸಿದರು. ಶಾಲಾ ಶಿಕ್ಷಕಿ ನೇತ್ರಾವತಿ ಕಾರ್ಯಕ್ರಮವನ್ನು ನಿರೂಪಿಸಿದರು.

# ಎಲೆಬೇತೂರಿನಲ್ಲಿ ಇಂದು ಶಿವರಾತ್ರಿ

ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಈಶ್ವರ ಮತ್ತು ಶ್ರೀ ಬಸವೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಶ್ರೀ ಸವಗದ್ದಿಗೆ ಸಂಗಮೇಶ್ವರ ದೇವಸ್ಥಾನದಲ್ಲಿ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿಗೆ ಸಂಜೆ 6 ಗಂಟೆಗೆ ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಶ್ರೀ ನಂದಿ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ನಂದಿ ಬಸವೇಶ್ವರ ಸ್ವಾಮಿಗೆ ರಾತ್ರಿ 8.30ಕ್ಕೆ ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ.

# ಚಾಂಪಿಯನ್ಸ್ ಟ್ರೋಫಿ : ಪಾಕ್‌ಗೆ ಬ್ರಾಂಡ್, ಹಣದ ಚಿಂತೆ

## ಪಂದ್ಯಾವಳಿಯಿಂದ ಹೊರ ಬಿದ್ದ ಪಾಕಿಸ್ತಾನ ತಂಡದ ಬ್ರಾಂಡ್ ಮೌಲ್ಯಕ್ಕೆ ಭಾರೀ ಹೊಡೆತ

ಕರಾಚಿ, ಫೆ. 25 - ಚಾಂಪಿಯನ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಪ್ರಮುಖ ತಂಡಗಳು ಆಟದ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿವೆ. ಆದರೆ ಪಂದ್ಯಾವಳಿಯ ಆತಿಥೇಯ ದೇಶವಾದ ಪಾಕಿಸ್ತಾನ ಪಂದ್ಯಾವಳಿಯಿಂದ ನಿರ್ಗಮಿಸಿದ್ದು, ತಂಡಕ್ಕೆ ಪ್ರಾಯೋಜಕರನ್ನು ಹುಡುಕುವುದು ಹೇಗೆ? ಎಂಬ ಚಿಂತೆಯಲ್ಲಿ ತೊಡಗಿದೆ.

ಭಾನುವಾರ ಭಾರತದ ವಿರುದ್ಧ ನಡೆದ ಪಂದ್ಯದಲ್ಲಿ ಪಾಕಿಸ್ತಾನ ಆರು ವಿಕೆಟ್‌ಗಳ ಹೀನಾಯ ಸೋಲು ಕಂಡಿತ್ತು. ಇದರೊಂದಿಗೆ ಪಾಕ್ ಪಂದ್ಯಾವಳಿಯಿಂದ ಹೊರ ಬಿದ್ದಿತ್ತು. ಪಂದ್ಯಾವಳಿ ಆರಂಭವಾದ ನಾಲ್ಕೇ ದಿನಗಳಲ್ಲಿ ಆತಿಥೇಯ ತಂಡ ಹೊರ ಬಿದ್ದಿದೆ.

ಇದಕ್ಕೂ ಮುಂಚೆ ಗಡಾಫಿಯಲ್ಲಿ ನಡೆದ ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ನಡುವಿನ ಪಂದ್ಯ ವೀಕ್ಷಣೆಗೆ ದೊಡ್ಡ ಸಂಖ್ಯೆಯಲ್ಲಿ ಜನರು ಬಂದಿದ್ದರು. ಈ ಹಿನ್ನೆಲೆಯಲ್ಲಿ ಪಂದ್ಯಾವಳಿ ಹೆಚ್ಚಿನ ಯಶಸ್ಸು ಕಾಣಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿ.ಸಿ.ಬಿ.) ಆಶಾಭಾವನೆ ಹೊಂದಿತ್ತು. ಆದರೆ, ಈಗ ಪಾಕಿಸ್ತಾನವೇ ಪಂದ್ಯಾವಳಿಯಿಂದ ಹೊರ ಬಿದ್ದ ನಂತರ ಜನರು ಉಳಿದ ಪಂದ್ಯಗಳ ಬಗ್ಗೆ ಎಷ್ಟರ ಮಟ್ಟಿಗೆ ಆಸಕ್ತಿ ಉಳಿಸಿಕೊಳ್ಳಲಿದ್ದಾರೆ ಎಂಬ ಚಿಂತೆ ಪಿ.ಸಿ.ಬಿ.ಗೆ ಕಾಡುತ್ತಿದೆ.

29 ವರ್ಷಗಳ ನಂತರ ಮೊದಲ ಬಾರಿಗೆ ಪಾಕಿಸ್ತಾನದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಪ್ರಮುಖ ಪಂದ್ಯಾವಳಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪಂದ್ಯಾವಳಿ ಕುರಿತು ಪಿ.ಸಿ.ಬಿ. ಹಾಗೂ ಅಲ್ಲಿನ ಸರ್ಕಾರ ಅಪಾರ ಆಸಕ್ತಿ ಹೊಂದಿತ್ತು.

ಈ ಹಿಂದೆ 1996ರಲ್ಲಿ ವಿಶ್ವಕಪ್ ನಡೆದ ನಂತರ ಐ.ಸಿ.ಸಿ.ಯ ಯಾವುದೇ ಪಂದ್ಯಾವಳಿ ಪಾಕಿಸ್ತಾನದಲ್ಲಿ ನಡೆದಿರಲಿಲ್ಲ. ಈ ಬಾರಿ ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಪಾಕಿಸ್ತಾನ ಉತ್ತಮ ಸಾಧನೆ ಮಾಡಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ನ್ಯೂಜಿಲೆಂಡ್ ಹಾಗೂ ಭಾರತದ ವಿರುದ್ಧ ಪಾಕಿಸ್ತಾನ ಕಹಿ ಸೋಲು ಕಂಡಿದೆ. ಸೋಮವಾರ ಬಾಂಗ್ಲಾದೇಶದ ವಿರುದ್ಧ ನಡೆದ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ಗೆದ್ದ ನಂತರ ಪಾಕ್ ಮುಂದಿನ ಹಂತ ಪ್ರವೇಶಿಸಲು ಇದ್ದ ಕ್ಷೀಣ ಆಸೆ ಸಹ ಬತ್ತಿ ಹೋಗಿದೆ.

ಪಾಕಿಸ್ತಾನ ಸೆಮಿ ಫೈನಲ್ ಹಂತಕ್ಕೆ ಪ್ರವೇಶಿಸಲು ಸಾಧ್ಯವಾಗದಿದ್ದರೂ, ಪಿ.ಸಿ.ಬಿ. ಆದಾಯಕ್ಕೆ ಹೆಚ್ಚು ಹೊರೆಯಾಗುವುದಿಲ್ಲ. ಕ್ರೀಡಾಕೂಟಕ್ಕೆ ಬರುವ ಜನರಿಂದ ಸಿಗುವ ಶುಲ್ಕ ಹಾಗೂ ಕ್ರೀಡಾಂಗಣದ ಇತರೆ ಆದಾಯದ ಮೇಲೆ ಮಾತ್ರ ಪರಿಣಾಮವಾಗಲಿದೆ ಎಂದು ಪಾಕ್ ಕ್ರಿಕೆಟ್ ಮಂಡಳಿ ಮೂಲಗಳು ತಿಳಿಸಿವೆ.

ಆದರೆ ಪಂದ್ಯಾವಳಿಯಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡ ತೀವ್ರ ಮುಖಭಂಗಕ್ಕೆ ಗುರಿಯಾಗಿರುವುದರಿಂದ ಆ ತಂಡದ ಬ್ರಾಂಡ್ ಮೌಲ್ಯ ಕುಸಿಯಲಿದೆ.

ಆತಿಥೇಯ ದೇಶವಾಗಿ ನಮಗೆ ಗ್ಯಾರಂಟಿ ಶುಲ್ಕ ಲಭ್ಯವಿದೆ. ಟಿಕೆಟ್ ಮಾರಾಟ ಸೇರಿದಂತೆ ಐಸಿಸಿ ಪಡೆಯುವ ಆದಾಯದಲ್ಲಿ ಪಾಲು ಸಿಗಲಿದೆ. ಆದರೆ ಬೃಹತ್ ಪಂದ್ಯಾವಳಿಯ ಬಗ್ಗೆ ಜನರು ಆಸಕ್ತಿ ಕಳೆದುಕೊಳ್ಳಲಿದ್ದಾರೆ. ನೇರ ಪ್ರಸಾರದ ವೇಳೆ ಅರೆಬರೆ ತುಂಬಿದ ಕ್ರೀಡಾಂಗಣವನ್ನು ಜನರು ನೋಡಲಿದ್ದಾರೆ. ಪಾಕ್‌ನಲ್ಲಿ ಕ್ರಿಕೆಟ್ ಅಭಿಮಾನ ಹೆಚ್ಚಾಗಿದೆ. ಇಷ್ಟಾದರೂ ಮುಂದಿನ ಪಂದ್ಯಗಳಲ್ಲಿ ಹೆಚ್ಚಿನ ಜನರು ಕ್ರೀಡಾಂಗಣಕ್ಕೆ ಬರುವುದಿಲ್ಲ ಎಂದು ಪಿ.ಸಿ.ಬಿ. ಮೂಲಗಳು ಹೇಳಿವೆ.

ಭಾರತದ ವಿರುದ್ಧ ಪಾಕಿಸ್ತಾನ ಸೋತ ನಂತರ ಆಟಗಾರರು ಹಾಗೂ ಆಡಳಿತ ಮಂಡಳಿ ಬಗ್ಗೆ ಅಲ್ಲಿನ ಜನರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಗೃಹ ಸಚಿವರೂ ಆಗಿರುವ ಪಿಸಿಬಿ ಅಧ್ಯಕ್ಷ ಮೊಹಸೀನ್ ನಕ್ವಿ ವಿರುದ್ಧವು ಆಕ್ರೋಶ ವ್ಯಕ್ತವಾಗಿದೆ. ಬಹುತೇಕ ಮಾಜಿ ಆಟಗಾರರು ಅಧ್ಯಕ್ಷ ನಕ್ವಿ ವಿರುದ್ಧ ನೇರವಾಗಿ ಟೀಕಿಸಿಲ್ಲ. ಆದರೆ ಸಾಮಾಜಿಕ ಮಾಧ್ಯಮ ಹಾಗೂ ಯೂಟ್ಯೂಬ್ ಗಳಲ್ಲಿ ನಕ್ವಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ನಾಯಕ ಹಾಗೂ ಆಟಗಾರರ ಆಯ್ಕೆ ವಿಷಯದಲ್ಲಿ ನಕ್ವಿ ಎಡವಿದ್ದಾರೆ ಎಂದು ಟೀಕಿಸಲಾಗುತ್ತಿದೆ.

ಕರಾಚಿ, ಲಾಹೋರ್ ಹಾಗೂ ರಾವಲ್‌ಪಿಂಡಿ ಕ್ರೀಡಾಂಗಣಗಳ ಉನ್ನತೀಕರಣದ ಬಗ್ಗೆಯೇ ನಕ್ವಿ ಹೆಚ್ಚು ಗಮನ ಹರಿಸಿದ್ದರು. ಪಾಕ್ ಕ್ರಿಕೆಟ್ ತಂಡ ಪಂದ್ಯಾವಳಿಯ ಅಂತಿಮ ಹಂತಕ್ಕೆ ಬರುವಂತೆ ಮಾಡಲು ಅಗತ್ಯ ಕ್ರಮಗಳ ಬಗ್ಗೆ ಹೆಚ್ಚು ಗಮನ ಹರಿಸಿರಲಿಲ್ಲ ಎಂದು ಟೀಕೆಗಳು ಕೇಳಿ ಬರುತ್ತಿವೆ.

ಕ್ರೀಡಾಂಗಣಗಳ ಉನ್ನತೀಕರಣಕ್ಕೆ 180 ಕೋಟಿ ರೂ. ವೆಚ್ಚ ಮಾಡಲಾಗಿದೆ ಎನ್ನಲಾಗುತ್ತಿದೆ. ಇದು ಪಾಕ್ ಕ್ರಿಕೆಟ್‌ಗೆ ನೆರವಾಗಲಿದೆ. ಆದರೆ ಪ್ರೇಕ್ಷಕರು ಪಾಕ್ ತಂಡದ ಜೊತೆ ಗುರುತಿಸಿಕೊಳ್ಳುವಂತೆ ಮಾಡುವುದು ದೊಡ್ಡ ಸವಾಲಾಗಿದೆ ಎಂದು ಜಾಹೀರಾತು ಪರಿಣಿತ ತಾಹಿರ್ ರೆಜಾ ಹೇಳಿದ್ದಾರೆ.

ಪಾಕಿಸ್ತಾನದಲ್ಲಿ ಕ್ರಿಕೆಟ್ ತನ್ನ ಹೆಸರಿನಿಂದಲೇ ಆದಾಯ ತರುತ್ತದೆ ಎಂದು ಹೇಳುವುದು ಸುಲಭ. ಆದರೆ ಈ ರೀತಿಯ ಕಳಪೆ ಪ್ರದರ್ಶನ ನೀಡಿದಾಗ ಅಭಿಮಾನಿಗಳು, ಪ್ರಾಯೋಜಕರು, ಜಾಹೀರಾತುದಾರರು, ಪ್ರಸಾರಕರು ಹಾಗೂ ಸಂಬಂಧಿಸಿದ ಎಲ್ಲರೂ ತಮ್ಮ ಹೂಡಿಕೆಗೆ ತಕ್ಕ ಪ್ರತಿಫಲ ಸಿಗುತ್ತದೆಯೇ ಎಂಬ ಬಗ್ಗೆ ಯೋಚಿಸುತ್ತಾರೆ ಎಂದು ತಾಹಿರ್ ಹೇಳಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ರೀತಿಯ ಪಂದ್ಯಾವಳಿಯಲ್ಲಿ ಪಾಕ್ ಕ್ರಿಕೆಟ್ ತಂಡ ಉತ್ತಮ ಸಾಧನೆ ತೋರಿಲ್ಲ ಎನ್ನುವುದಾದರೆ, ಹೂಡಿಕೆದಾರರು ಬೇರೆ ವಲಯಗಳ ಕಡೆ ಗಮನಹರಿಸುತ್ತಾರೆ ಎಂದವರು ಹೇಳಿದ್ದಾರೆ.

ಶೀಘ್ರದಲ್ಲೇ ಪಾಕಿಸ್ತಾನ ಸೂಪರ್ ಲೀಗ್ ಹತ್ತನೇ ಪಂದ್ಯಾವಳಿ ನಡೆಯಲಿದೆ. ಚಾಂಪಿಯನ್ಸ್ ಟ್ರೋಫಿ ಕಾರಣದಿಂದ ಹಣಕಾಸಿನ ಮೇಲೆ ಯಾವ ಪರಿಣಾಮವಾಗಿದೆ ಎಂಬುದು ಆ ಸಂದರ್ಭದಲ್ಲಿ ಸ್ಪಷ್ಟವಾಗಲಿದೆ ಎಂದು ತಾಹಿರ್ ತಿಳಿಸಿದ್ದಾರೆ.

# ಶಿಷ್ಯವೇತನ ಇಳಿಕೆ : ಕೇಂದ್ರ ಸರ್ಕಾರಕ್ಕೆ ಖರ್ಗೆ ತರಾಟೆ

ನವದೆಹಲಿ, ಫೆ.25 – ಪರಿಶಿಷ್ಟರು, ಒಬಿಸಿ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳ ಶಿಷ್ಯ ವೇತನವನ್ನು ಕೇಂದ್ರ ಸರ್ಕಾರ ಕಿತ್ತುಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ದೇಶದ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ಅವಕಾಶ ನೀಡದೇ ಹೋದರೆ ಹಾಗೂ ಅವರ ಕೌಶಲ್ಯಗಳಿಗೆ ಉತ್ತೇಜನ ನೀಡದೇ ಇದ್ದರೆ ಯುವಕರ ಉದ್ಯೋಗಾವಕಾಶ ಹೆಚ್ಚಿಸಲು ಹೇಗೆ ಸಾಧ್ಯ? ಎಂದು ಖರ್ಗೆ ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರ ಎಲ್ಲಾ ಶಿಷ್ಯ ವೇತನಗಳ ಪ್ರಮಾಣ ಕಡಿಮೆ ಮಾಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶಿಷ್ಯವೇತನದ ಪ್ರಮಾಣ ಶೇ.25 ರಷ್ಟು ಕಡಿಮೆಯಾಗಿದೆ ಎಂದು ಖರ್ಗೆ ಹೇಳಿದ್ದಾರೆ.

ಪರಿಶಿಷ್ಟರು, ಒಬಿಸಿ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಶಿಷ್ಯವೇತನ ಪ್ರಮಾಣ ಕಡಿಮೆಯಾಗಿರುವ ಬಗ್ಗೆ ಖರ್ಗೆ ದಾಖಲೆ ಒಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಘೋಷಣೆ ಮಾಡುತ್ತಾರೆ. ಆದರೆ ಈ ರೀತಿ ಶಿಷ್ಯವೇತನ ಕಡಿತಗೊಳಿಸುವ ಮೂಲಕ ದುರ್ಬಲ ವರ್ಗದವರ ಆಶಯಗಳಿಗೆ ಅಣಕ ಮಾಡುತ್ತಿದ್ದಾರೆ ಎಂದು ಖರ್ಗೆ ಟೀಕಿಸಿದ್ದಾರೆ.

# ಮಹಾಕುಂಭಮೇಳದಲ್ಲಿ ದಿನೇಶ್ ಕೆ.ಶೆಟ್ಟಿ



ದಾವಣಗೆರೆ, ಫೆ.25- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ ಅವರು ಮಹಾ ಕುಂಭಮೇಳದಲ್ಲಿ ಕುಟುಂಬ ಸಮೇತರಾಗಿ ಭಾಗವಹಿಸಿದ್ದರು.

# ಬುಕರ್ ಆಯ್ಕೆಪಟ್ಟಿಯಲ್ಲಿ ಬಾನು ಮುಷ್ತಾಕ್ ಕೃತಿ

ಲಂಡನ್, ಫೆ. 25 - ಕರ್ನಾಟಕದ ಲೇಖಕಿ, ಕಾರ್ಯಕರ್ತೆ ಹಾಗೂ ವಕೀಲೆ ಬಾನು ಮುಷ್ತಾಕ್ ಅವರ ಸಣ್ಣ ಕಥೆಗಳ ಅನುವಾದವಾದ 'ಹಾರ್ಟ್ ಲ್ಯಾಂಪ್' ಬುಕರ್ ಪ್ರಶಸ್ತಿ ಸ್ಪರ್ಧೆಯಲ್ಲಿದೆ. ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರೆ ಕಥೆಗಳು' ಕಥಾ ಸಂಕಲನವನ್ನು ದೀಪ ಭಸ್ತಿ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದರು. ಮುಷ್ತಾಕ್ ಅವರ ಕೃತಿ ಸೇರಿದಂತೆ 13 ಕೃತಿಗಳು ಈಗ ಬುಕರ್ ಪ್ರಶಸ್ತಿ ಸ್ಪರ್ಧೆಯಲ್ಲಿವೆ. ಬುಕರ್ ಪ್ರಶಸ್ತಿ ಪರಿಗಣನೆಗೆ ಕನ್ನಡದ ಕೃತಿಯಂದು ಆಯ್ಕೆ ಆಗಿರುವುದು ಇದೇ ಮೊದಲು. ಮುಸ್ಲಿಂ ಸಮುದಾಯಗಳ ಜೀವನವನ್ನು ಬಿಂಬಿಸುವ ಕಥೆಗಳ ಸಂಕಲನ ಈಗ ಜಾಗತಿಕ ಸಾಹಿತಿಗಳ ಕೃತಿಗಳ ಜೊತೆ ಸ್ಪರ್ಧೆ ನಡೆಸಿದೆ.

# ಶಿವರಾತ್ರಿ ಒಂದು ದಿನದ ಸಾಧನೆ ಅಲ್ಲ



ಶಿವಾನುಭವ ಆಗಬೇಕಾದರೆ ಶಿವರಾತ್ರಿ ಒಂದು ದಿನದ ಸಾಧನೆ ಅಲ್ಲ. ನಿತ್ಯ ನಿತ್ಯವೂ ಶಿವರಾತ್ರಿ ಆದಾಗ ಶಿವಾನುಭವ ಆಗಲು ಸಾಧ್ಯ.

ನಮ್ಮೊಳಗಿರುವ ಅಜ್ಞಾನದ ಕತ್ತಲು ಕಳೆದು, ಜ್ಞಾನದ ಬೆಳಕು ಮೂಡಿದಾಗಲೇ ನಮ್ಮಲ್ಲಿ ಸುಖ, ಶಾಂತಿ, ನೆಮ್ಮದಿಯನ್ನು ಕಾಣಲು ಸಾಧ್ಯವಾಗುತ್ತದೆ. ನಮ್ಮಲ್ಲಿ ಜ್ಞಾನದ ಬೆಳಕು ಮೂಡಬೇಕಾದರೆ, ನಮ್ಮ ಜೀವ ಜೀವನ ಶಿವಮಯ ಆಗಬೇಕು. ಅಹಂಕಾರ ಅಳಿದು; ಅಂಗ ಲಿಂಗಾಂಗವಾಗಬೇಕು. ಶಿವಯೋಗವು ; ಅಂಗವು ಲಿಂಗಾಂಗವಾಗುವಂತಹ ಶಿವಾನುಭವದ ಪ್ರಕ್ರಿಯೆಯನ್ನು ತಿಳಿಸಿಕೊಡುವ ಸಾಧನವಾಗಿದೆ.

ಈ ಶಿವಾನುಭವವನ್ನು ಕೇವಲ ಒಂದು ದಿನ ಶಿವರಾತ್ರಿಯಲ್ಲಿ ಮಾಡಿ ಅನುಭವಿಸಲು ಸಾಧ್ಯವಿಲ್ಲ. ಹಾಗಾಗಿ ಬಸವಾದಿ ಶರಣರು ಶಿವರಾತ್ರಿ, ನವರಾತ್ರಿ ಎಂದು, ಹಬ್ಬ ವಿಶೇಷತೆಗಳು ಎಂದು ಪ್ರಾಮುಖ್ಯತೆ ಕೊಡುವುದಿಲ್ಲ. ಪ್ರತಿದಿನ, ಪ್ರತಿ ಕ್ಷಣವನ್ನು ಶಿವರಾತ್ರಿ ಎಂದು ನೋಡುತ್ತಾರೆ.

ಶರಣರ ನಡೆ ನುಡಿ ಕೆಲವರಿಗೆ ವಿಚಿತ್ರವಾಗಿ ಕಂಡರೂ ಆಲೋಚಿಸಿ ಅನುಭವಿಸಿ ನೋಡಿದಾಗ ಸತ್ಯದ ದರ್ಶನ ಆಗುತ್ತದೆ. "ಹಾವಿನ ಡೊಂಕು ಹುತ್ತಕ್ಕೆ ಸಸಿನ, ನದಿಯ ಡೊಂಕು ಸಮುದ್ರಕ್ಕೆ ಸಸಿನ, ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ " ಎನ್ನುವಂತೆ ದೇವರನ್ನು ಮೆಚ್ಚಿಸಲು ಶರಣರ ನಡೆ ನುಡಿಗಳು ಪ್ರಿಯವಾಗಿರುತ್ತವೆ.

ಸಾಮಾನ್ಯರ ಜೀವನ ಕ್ರಮ ಮತ್ತು ಶರಣರ ಜೀವನ ಕ್ರಮವು ಒಂದೇ ತರಹ ಇರುವುದಿಲ್ಲ. ಬೇರೆ ಬೇರೆಯೇ ಆಗಿರುತ್ತದೆ. ಏಕೆಂದರೆ ಸಾಮಾನ್ಯರ ಮನಸ್ಥಿತಿಯೇ ಬೇರೆ, ಶರಣರ ಮನಸ್ಥಿತಿಯೇ ಬೇರೆ.

ಸಾಮಾನ್ಯರಿಗೆ ಹಬ್ಬ, ತೇರು, ಜಾತ್ರೆಗಳು ವಿಶೇಷ ಆಗಿರುತ್ತವೆ. ಆದರೆ ಶರಣರ ದೃಷ್ಟಿಕೋನದಲ್ಲಿ ಹಬ್ಬ, ಜಾತ್ರೆಗಳು ವಿಶೇಷವಲ್ಲ. ಎಲ್ಲಾ ಕಾಲವನ್ನು, ಎಲ್ಲರನ್ನು, ಒಂದೇ ರೀತಿಯಾಗಿ, ಸಮತ್ವದ ದೃಷ್ಟಿಯಲ್ಲಿ ನೋಡುತ್ತಾರೆ. ಏಕೆಂದರೆ ಶರಣರು ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಂಡು, ಜೀವ, ಜೀವನವನ್ನು ಶಿವಮಯ ಮಾಡಿಕೊಂಡು, ಸತ್‌ಚಿತ್ ಆನಂದದಲ್ಲಿ ಇರುವಂತವರು.

ಏಕೆಂದರೆ ಬಸವಾದಿ ಶರಣರು ನಿತ್ಯ ಶುದ್ಧ, ನಿತ್ಯಮುಕ್ತರು. ಅವರ ಜೀವ, ಜೀವನವೇ ಶಿವಮಯವಾಗಿರುತ್ತದೆ. ಆದ್ದರಿಂದ ಬಸವಣ್ಣನವರು " ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ,ಶರಣ ನಿದ್ದೆಗೈದರೆ ಜಪ ಕಾಣಿರೋ" ಎಂದಿದ್ದಾರೆ.

"ಶಿವ ಶರಣರು ನಿದ್ದೆಗೈದಡೆ ಜಪ ಕಾಣಿರಣ್ಣ, ಶಿವಶರಣರು ಎದ್ದಿದ್ದರೆ ಶಿವರಾತ್ರಿ ಕಾಣಿರಣ್ಣ, ಶಿವಶರಣರು ನೋಡಿದರೆ ಪಾಪಕ್ಷಯ ಕಾಣಿರಣ್ಣ, ಶಿವ ಶರಣರು ನಡೆದುದೇ ಪಾವನ ಕಾಣಿರಣ್ಣ, ಶಿವ ಶರಣರು ನುಡಿದುದೇ ಶಿವತತ್ವ, ಶಿವಮಂತ್ರ ಕಾಣಿರಣ್ಣ, ಶಿವ ಶರಣರು ಮುಟ್ಟಿದುದೇ ಸರ್ವ ಸಿದ್ದಿ ಕಾಣಿರಣ್ಣ, ಶಿವ ಶರಣರ ಮನವೇ ಲಿಂಗ ಕಾಣಿರಣ್ಣ ಶಿವ ಶರಣರ ಕಾಯವೇ ಕೈಲಾಸ ಕಾಣಿರಣ್ಣ ಗುಹೇಶ್ವರಾ ನಿಮ್ಮ ಶರಣನ ಚಾರಿತ್ರವು ವಿಪರೀತವು." ಎಂದು ಅನುಭಾವಿ ಅಲ್ಲಮಪ್ರಭುಗಳು ಹೇಳಿದ್ದಾರೆ.

ನಾವು ಇಂತಹ ಹಂತ ತಲುಪಲು, ಜೀವ, ಜೀವನ ಶಿವಮಯವಾಗಲು, ಅಂಗ ಸರ್ವಾಂಗ ಲಿಂಗವಾಗಲು ಅನೇಕ ಶಿವರಾತ್ರಿಗಳನ್ನು ಮಾಡಬೇಕು.

ನಾವು ಆಚರಿಸುವ ಶಿವರಾತ್ರಿ ; ಒಂದು ದಿವಸದ ಉಪವಾಸ ಜಾಗರಣೆ ಆಗಿದೆ. ಶರಣರು ಮಾಡುವ ಶಿವರಾತ್ರಿ ನಿತ್ಯ ನಿತ್ಯವಾಗಿರುತ್ತದೆ.

ನಾವು ಉಪವಾಸದ ಹೆಸರಲ್ಲಿ ; ಹೊಟ್ಟೆ ಬಿರಿಯುವಂತೆ ಹಣ್ಣು ಮತ್ತು ಉಪಹಾರವನ್ನು ಸೇವಿಸುತ್ತೇವೆ. ಜಾಗರಣೆಯ ಹೆಸರಲ್ಲಿ ಟಿ.ವಿ. ಮೊಬೈಲ್ ನೋಡುತ್ತಾ , ಆಟ ಆಡಿಕೊಂಡು ಜಾಗರಣೆ ಮಾಡುತ್ತೇವೆ. ಹಾಗಾಗಿ ನಮ್ಮಸ್ಥಿತಿ ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ,

ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ ಎಂದು ಹೇಳುವಂತೆ ಆಗಿದೆ.

"ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ,ಮಾಡುವ ನೀಡುವ ನಿಜಗುಣವುಳ್ಳೆಡೆ ಕೂಡಿಕೊಂಬ ನಮ್ಮಕೂಡಲಸಂಗಮದೇವ " ಎಂದು ಹೇಳುವಂತೆ; ನಾವುಗಳು ಭಕ್ತಿಯನ್ನು ಮಾಡುತ್ತೇವೆ, ಸೇವೆಯನ್ನು ಮಾಡುತ್ತೇವೆ, ಆದರೆ ಅದರ ನಿಜವನ್ನು, ಮರ್ಮವನ್ನು ಅರಿಯದೇ ಮಾಡುತ್ತಿದ್ದೇವೆ.

ನಾವು ಹಬ್ಬದ ಆಚರಣೆಗಳ ಮೂಲಗಳನ್ನು ಅರಿತು ಆಚರಿಸಿದ್ದೇ ಆದರೆ ನಮಗೆ ಶಿವಾನುಭವದ ಸತ್ಯದರ್ಶನವಾಗುತ್ತದೆ.

**- ಶಿವಪ್ರಸಾದ ಕರ್ಜಗಿ,** ದಾವಣಗೆರೆ.

# ಶಿವರಾತ್ರಿ ಏಕೆ ? ಆಚರಣೆ ಹೇಗೆ ?



ಕೈಲಾಸ ವಾಸನಾದ ಸದಾ ಧ್ಯಾನದಲ್ಲಿರುವ ವಿರಕ್ತಮೂರ್ತಿ ಪರಶಿವನ ಹಬ್ಬ ಎಂದರೆ ಅದು ಶಿವರಾತ್ರಿ. ಯಾವ ಆಡಂಬರವೂ ಬೇಡದ, ಯಾವ ಅಲಂಕಾರವು ಮಾಡಿಕೊಳ್ಳದೆ ಕೇವಲ ಭಸ್ಮಧಾರಿಯಾಗಿರುವ, ಶರೀರ ನಶ್ವರ ಎಂದು ತನ್ನ ಸ್ವರೂಪದಿಂದಲೇ ಸಾರುತ್ತಿರುವ, ಸದಾ ಧ್ಯಾನದಲ್ಲಿದ್ದು ತನ್ನಂತೆ ಅಂತರ್ಮುಖಿಗಳಾಗಿ ಎಂದು ಜನರಿಗೆ ತಿಳಿ ಹೇಳುವ, ಅಜ್ಞಾನವನ್ನು ತೊಳೆಯುವ ಜ್ಯೋತಿ ಸ್ವರೂಪಿಯಾಗಿರುವ ಪರಶಿವನ ಹಬ್ಬದಲ್ಲಿ, ನಾವು ಮಾಡಬೇಕಾಗಿರುವುದು ಉಪವಾಸ ಎಂದರೆ ಆ ಭಗವಂತನ ಬಗ್ಗೆ ಚಿಂತನೆ ಮಾಡುತ್ತಾ, ಬೇರೆ ಎಲ್ಲ ಯೋಚನೆಗಳನ್ನು ಅನ್ನ ಆಹಾರದ ಬಯಕೆಗಳನ್ನು ತ್ಯಜಿಸುವುದು. ಅಜ್ಞಾನದ ಧ್ಯೋತಕವಾದ ಕತ್ತಲಿನಲ್ಲಿ, ತಮೋ ಗುಣ ಪೂರ್ಣವಾದ ನಿದ್ರೆ ಮಾಡದೆ, ಭಗವಂತನಾದ ಶಿವನ ಪೂಜೆ ಮಾಡುತ್ತಾ, ಅವನ ನಾಮ ಸ್ಮರಣೆ ಮಾಡುತ್ತಾ ಜಾಗರಣೆ ಮಾಡುವುದು.

ಜಾಗರಣೆ ಎಂದರೆ ಜಾಗೃತರಾಗುವುದು, ನಮ್ಮ ಅಸ್ತಿತ್ವ ಏನು? ನಾವು ಈ ಭೂಮಿಗೆ ಬಂದಿರುವ ಉದ್ದೇಶವೇನು? ಎಂದು ಆಲೋಚಿಸಿ, ಪರಮಾತ್ಮನ ಸಾಕ್ಷಾತ್ಕಾರವಾಗಲು ಬೇಕಾಗಿರುವಂತಹ ಧ್ಯಾನ, ಜಪ, ಭಜನೆ, ನೇಮ ಆಚರಿಸುವುದು. ಹೃದಯದ ಆಕಾರದಲ್ಲಿರುವ ಬಿಲ್ವಪತ್ರವು ಜೀವನನ್ನು ಸಂಕೇತಿಸಿದರೆ ಲಿಂಗಾಕಾರದ ಶಿವಲಿಂಗವು ಭಗವಂತನನ್ನು ಸಂಕೇತಿಸುತ್ತದೆ. ಬಿಲ್ವಪತ್ರೆ ಶಿವಲಿಂಗದ ಮೇಲೆ ಬಿದ್ದಾಗ ಜೀವ ಪರಮಾತ್ಮರ ಐಕ್ಯತೆಯ ಸೂಚಕವಾಗಿರುತ್ತದೆ.

ಈ ಶಿವರಾತ್ರಿಯ ವಿಶೇಷತೆಗೆ ಕಾರಣಗಳು ಅನೇಕ. ಲಿಂಗ ಪುರಾಣ, ಶಿವ ಪುರಾಣ, ಸ್ಕಂದ ಪುರಾಣದ ಪ್ರಕಾರ, ಶಿವನು ಒಂದು ಕಂಬ ರೂಪದಲ್ಲಿ ನಿಂತು, ಅದರ ತುದಿ ಮೊದಲುಗಳನ್ನು ಹುಡುಕಲು ಬ್ರಹ್ಮ ಮತ್ತು ವಿಷ್ಣುವಿಗೆ ಹೇಳಿದಾಗ, ಅವರು ಅದನ್ನು ಹುಡುಕಲಾಗದೆ ಹಿಂದಿರುಗಿದಾಗ ಶಿವನು ಲಿಂಗಾಕಾರವಾಗಿ ಈ ದಿನ ನಿಂತನು ಎಂಬ ಕತೆ ಇದೆ.

ಈ ಶಿವರತ್ರಿಯ ದಿನದಂದೇ ಸಮುದ್ರ ಮಥನ ಕಾಲದಲ್ಲಿ ಬಂದಂತಹ ಹಾಲಾಹಲವನ್ನು ಶಿವ ಸ್ವೀಕರಿಸಿದ, ಅದು ಅವನ ಒಳಗೆ ಹೋಗದಂತೆ ಪಾರ್ವತಿ ಗಂಟಲಿನಲ್ಲೇ ಅದನ್ನು ಹಿಡಿದಾಗ, ಪರಶಿವನನ್ನು ದೇವಾನು ದೇವತೆಗಳು ರಾತ್ರಿಯಲ್ಲ ಬಿಲ್ವ ಪೂಜೆ ಮಾಡುತ್ತಾ, ಅಭಿಷೇಕ ಮಾಡುತ್ತಾ ಪೂಜಿಸಿದರು ಎಂಬ ಕಥೆ ಇದೆ.

ಇದಲ್ಲದೆ ಪಾರ್ವತಿಯು ಶಿವರಾತ್ರಿಯಂದು ಶಿವನನ್ನು ರಾತ್ರಿ ಎಲ್ಲಾ ಪೂಜಿಸಿದ್ದರಿಂದ ಶಿವನನ್ನು ಒಲಿಸಿಕೊಂಡು ಅವನನ್ನು ವಿವಾಹವಾದಳು ಎಂಬ ಕಥೆ ಇದೆ.

ಭಗೀರಥನು ಶಿವನ ಜಟೆಯಲ್ಲಿದ್ದ ಗಂಗೆಯನ್ನು ಧರೆಗೆ ಕಳುಹಿಸು ಎಂದು ಪ್ರಾರ್ಥಿಸಿದಾಗ ಶಿವರಾತ್ರಿಯಂದೇ ಗಂಗೆಯನ್ನು ಶಿವನು ಭೂಮಿಗೆ ಬಿಟ್ಟನು ಎಂಬ ಕಥೆಯು ಇದೆ. ವೈಜ್ಞಾನಿಕವಾಗಿ, ಅತ್ಯಂತ ಚಳಿಯ ಕಾಲ ಮುಗಿದು ಬೇಸಿಗೆ ಕಾಲ ಪ್ರಾರಂಭವಾಗುವ ಈ ಪರ್ವಕಾಲದಲ್ಲಿ, ಉಪವಾಸ ಮತ್ತು ಜಾಗರಣೆಯು ದೇಹದ ಆರೋಗ್ಯವನ್ನು ಹೆಚ್ಚಿಸುತ್ತದೆ. ಬಿಲ್ವಪತ್ರೆಯ ಸುವಾಸನೆಯೂ ಉಸಿರಾಟದ ಶಕ್ತಿಯನ್ನು ಹೆಚ್ಚಿಸುತ್ತದೆ, ಬಿಲ್ವಾರ್ಚನೆಯನ್ನು ಶಿವನಿಗೆ ಮಾಡುವ ಸಲುವಾಗಿ ಬಿಲ್ವಪತ್ರೆಯ ವಾಸನೆಯನ್ನು ಜನರು ಸೇವಿಸಿ ಆರೋಗ್ಯವಂತರಾಗಲಿ ಎಂಬ ಉದ್ದೇಶವಿದೆ. ಉಪವಾಸವನ್ನು ದೇಹಕ್ಕೆ ಅತ್ಯಂತ ಮುಖ್ಯ ಎಂದು ಅನೇಕ ಸಂಶೋಧನೆಗಳು ಸಾಬೀತು ಪಡಿಸಿವೆ.

ಭಗವಂತನ ಸಾಕ್ಷಾತ್ಕಾರವಾಗಬೇಕಾದರೆ ಮನೋ ನಿಗ್ರಹ ಬೇಕು. ದೇಹದ ಸಹಜ ಕ್ರಿಯೆಗಳಾದ ಹಸಿವು ಮತ್ತು ನಿದ್ರೆಗಳನ್ನು ತಡೆದು ಎಚ್ಚರವಾಗಿರಬೇಕೆಂದರೆ ಮನೋಬಲ ಬಹಳ ಬೇಕು. ಹಬ್ಬ ಹರಿದಿನಗಳ ಸರಿಯಾದ ಆಚರಣೆ ಯಿಂದ ಮನುಷ್ಯನ ಮನೋಬಲ ಹೆಚ್ಚುತ್ತದೆ. ಮನಸ್ಸಿದ್ದರೆ ಮಾರ್ಗ ಎಂಬ ನಾಣ್ನುಡಿಯಂತೆ, ಮನಸ್ಸು ಗಟ್ಟಿಯಾಗಿರುವವನು ಏನನ್ನು ಬೇಕಾದರೂ ಸಾಧಿಸಬಹುದು, ಅದು ಆತ್ಮ ಬಲವನ್ನು ಹೆಚ್ಚಿಸುತ್ತದೆ.

ಈ ಶಿವರಾತ್ರಿ ಯಂದು ನಾಲ್ಕು ಯಾಮ ಗಳಲ್ಲೂ ರುದ್ರಾಭಿಷೇಕವನ್ನು ಮಾಡುತ್ತಾ ರುದ್ರ ಮತ್ತು ಚಮಕ ಎಂಬ ಮಂತ್ರಗಳನ್ನು ಪಠಿಸುತ್ತಾ ಶಿವನಿಗೆ ನೀರು, ಹಾಲು, ತುಪ್ಪ, ಜೇನುತುಪ್ಪ, ಎಳೆನೀರು ಮುಂತಾದ ಪದಾರ್ಥಗ ಳಿಂದ ಅಭಿಷೇಕ ಮಾಡಲಾಗುತ್ತದೆ. ಈ ಮಂತ್ರ ಪಠಣವೂ ಕೂಡ ಹೃದಯವನ್ನು ಗಟ್ಟಿ ಮಾಡುತ್ತದೆ. ಕೇಳುಗರಿಗೆ ಶಾಂತಿ ಸಮಾಧಾನ, ಆತ್ಮಾನಂದವನ್ನು ನೀಡುತ್ತದೆ.

ಅನೇಕ ದೇವಸ್ಥಾನಗಳಲ್ಲಿ ನಾಲ್ಕು ಜಾವದ ಪೂಜೆಗಳನ್ನು ಮಾಡಲಾಗುತ್ತದೆ. ದೇವಸ್ಥಾನಗಳನ್ನು ಸರಿಯಾದ ರೀತಿಯಲ್ಲಿ ನಿರ್ಮಿಸಿರುತ್ತಾರೆ. ಅಲ್ಲಿ ಸಕಾರಾತ್ಮಕ ಶಕ್ತಿ ಹೆಚ್ಚಿರುತ್ತದೆ. ಅಂತಹ ಜಾಗಗಳಲ್ಲಿ ಇರುವುದರಿಂದಲೇ ನಮ್ಮದೇಹ, ಮನಸ್ಸು ಮತ್ತು ಆತ್ಮನೆಮ್ಮದಿ ಮತ್ತು ಶಾಂತಿಗಳನ್ನು ಪಡೆಯುತ್ತದೆ.

ಸುಖ, ಸಂತೋಷ, ನೆಮ್ಮದಿ ಎಲ್ಲವೂ ನಮ್ಮೊಳಗೆ ಇದೆ. ಹೊರಗಿನ ಯಾವ ವಸ್ತುವು ಇದನ್ನು ಕೊಡಲು ಸಾಧ್ಯವಿಲ್ಲ. ಆ ನಮ್ಮೊಳಗೆ ನಾವು ನೋಡಿಕೊಳ್ಳಬೇಕಾದರೆ ಧ್ಯಾನಸ್ಥ ಸ್ಥಿತಿಯಲ್ಲಿ ಮಾತ್ರ ಸಾಧ್ಯ. ಇದನ್ನೇ ಕಣ್ಣು ಮುಚ್ಚಿ ಧ್ಯಾನ ಮಾಡುವ ಪರಶಿವ ಎಲ್ಲರಿಗೂ ಹೇಳುತ್ತಿದ್ದಾನೆ. ಯಾವ ಒಡವೆ, ವಸ್ತ್ರ, ಹೊರಗಿನ ಯಾವುದನ್ನೂ ಬಯಸದ ಪರಮಾತ್ಮನಾದ ಪರಶಿವನನ್ನು ಸಂತೋಷಗೊಳಿಸುವುದು ಕೇವಲ ಅನನ್ಯವಾದ ಭಕ್ತಿಯೊಂದೇ

ಇದನ್ನು ಬೇಡರ ಕಣ್ಣಪ್ಪನ ಕಥೆ ನಮಗೆ ತೋರಿಸುತ್ತದೆ. ಅದು ತನ್ನ ಎರಡೂ ಕಣ್ಣನ್ನೂ ಕಿತ್ತು ಕೊಡಲೂ ಸಿದ್ಧನಾದ ಮುಗ್ಧನ ಭಕ್ತಿಯ ಶ್ರೇಷ್ಠತೆ ತಿಳಿಸುತ್ತದೆ. ಜಾತಿ, ಮತ, ಬೇಧ ಯಾವುದು ಇಲ್ಲದೆ, ಭಕ್ತಿ ಮಾಡುವ ಅಸುರರಿಗೂ ಕೂಡ ಬೇಕಾದ ವರಗಳನ್ನು ಧಾರಾಳವಾಗಿ ಕೊಡುವಂತಹ ಬೋಲೇಶಂಕರ ತನ್ನ ಭಕ್ತರನೆಲ್ಲ ಕಾಪಾಡಿಯೇ ಕಾಪಾಡುತ್ತಾನೆ.

ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿ ಯಂದು ಬರುವ ಶಿವರಾತ್ರಿಯ ಈ ವಿಶೇಷ ಪರ್ವಕಾಲದಲ್ಲಿ, ಶಿವನ ಪಾದಾರವಿಂದವನ್ನು ನಾವು ಹಿಡಿಯೋಣ. ಆತ್ಮೋದ್ಧಾರದ ಮಾರ್ಗದಲ್ಲಿ ಮುನ್ನಡೆಯೋಣ, ಜ್ಞಾನ ಭಕ್ತಿ, ವೈರಾಗ್ಯಗಳನ್ನು ನೀಡೆಂದು ಬೇಡಿ ಶರಣಾಗೋಣ.

**- ಡಾ. ರೂಪಶ್ರೀ ಶಶಿಕಾಂತ್,** ದಾವಣಗೆರೆ.

## ಪಾರ್ವತಿ ಕಲ್ಯಾಣ

ಗಿರಿರಾಜನ ಮಗಳು ಅತಿ ಸುಂದರಿ
ಸಿರಿಯಂತೆ ವೈಭವದಿ ಮೆರೆಯುತ್ತಾ
ಸಿರಿಹರಿಯ ಕೃಪೆಯಿಂದ ಭುವಿಗೆ
ವರಿಸಲು ಹರನ ಪಾರ್ವತಿಯು

ಅತಿಜಾಣೆ ಕಡು ಚೆಲುವೇ
ಅತಿ ಬಲವಂತ ದಕ್ಷನ ಮಗಳಾಗಿ
ಅತಿ ಪುಣ್ಯದಿಂದ ದಾಕ್ಷಾಯಿಣಿ
ಪ್ರೀತಿಯಲಿ ಬಂದು ಧರೆಯಲಿ

ಸಕಲ ಲೋಕದ ತಂದೆ ಶಿವನ
ಭಕ್ತಿಯಿಂದ ಹೊರಟಳು ಅರಣ್ಯಕೆ
ಕಕ್ಕುಲಾತಿಯಲಿ ಬೆಳೆಸಿದ ಮಗಳನು
ಅಕ್ಕರೆಯ ಬದಿಗೊತ್ತಿ ಕಳಿಸಿದ ದಕ್ಷನು

ನಾರುಸೀರೆಯುಟ್ಟ ಪಾರ್ವತಿ
ಧರಿಸಿ ರುದ್ರಾಕ್ಷಿ ವಿಭೂತಿ
ಹರನ ವರಿಸಲು ಕಾನನಕೆ
ಸುಂದರಿ ನಡೆದಳು ತಪಕೆ

ನೋಡಿ ಅಸುರನು ಚೆಲುವೆಯ
ಬಂದನು ತಪ ಭಂಗ ಮಾಡಲು
ಬೂದಿ ಆದನು ಶಿವೆಯ
ದೃಷ್ಟಿಯೋಲು
ನಿಂದಳು ಪಾರ್ವತಿ ತಪಗೈಯ್ಯುತ

ಯಾರೂ ಬಂದರು ವನಕೆ
ನೀರೆಯಾಗುವಂತೆ ಶಪಿಸುತ್ತ
ಹರನೊಬ್ಬನುಳಿದು ಅನ್ಯರಾರು
ಬರಲಾರರು ವನಕೆ ತಪೋಭಂಗಕೆ

ವಿಪ್ರವೇಶದಿ ಶಿವನು ಪರೀಕ್ಷಿಸಲು
ತಪ ಮಾಡಲೇಕೆ ಬಾಲೆ ಎ ನಲು
ಪತಿಯಾಗಬೇಕು ಚಂದ್ರಶೇಖರನು
ಪತಿತ ಪಾವನೆ ಗೌರಿ ನುಡಿದಳು

ಹರ ಮುದುಕ ಸಿರಿವಂತನಲ್ಲ
ಸುರ ಸುಂದರಾಂಗ ಅವನಲ್ಲ
ಮರುಳೆ ನೀನ್ಯಾಕೆ ಅವನ ಒಲಿವೆ
ಮರಳಿ ಹೋಗು ಚೆಲುವೇ

ದೂರದಿರು ಶಿವನ ಪೂಜ್ಯನವನು
ಸುರರಿಂದ ವಂದ್ಯ ನವನು
ಶಿವೆಯ ಭಕ್ತಿಗೆ ಮರುಳಾದ ಶಿವನು
ನಿಜರೂಪ ತೋರಿ ಕೈ ಹಿಡಿದನು

ಎಡದಲ್ಲಿ ಬ್ರಹ್ಮ ಬಲದಲ್ಲಿ ವಿಷ್ಣು
ಅಂತೂಕಾಂತ ಕಾಂತೆಯ ಕೈ ಹಿಡಿದ
ಗಿರಿರಾಜನ ಕರೆಸಿ ಪಾರ್ವತಿಯ
ವರಿಸಿದ

ಶಿವನು ಗೌರಿಗೆ ಮಾಂಗಲ್ಯ ಧಾರಣೆ
ದೇವತೆಗಳು ಹೂ ಮಳೆ ಸುರಿಸಿದರು
ಶಿವ ಪಾರ್ವತಿ ವೈಭವದ ಕಲ್ಯಾಣ

ಇದ ಹೇಳಿ ಕೇಳಿದವಗೆ
ಮಂಗಳ ಶುಭ ಮಂಗಳ
ಹರ ಹರ ಮಹಾದೇವ
ಹರ ಪಾರ್ವತಿ ನಮೋ ನಮಃ

**- ಕೋಮಲ ವಿ. ಕುಮಾರ್,**
ದಾವಣಗೆರೆ.

## ಗೌರಿ ಶಂಕರ

ಜೈ ಶಂಭೋ.....ಜೈ ಶಂಭೋ........
ಹರ,ಹರ ,ಶಿವ,ಶಿವ ಜೈ ಶಂಭೋ...
ಗಂಗ ಜಟಾಧರ ಗೌರಿ ಮನೋಹರ
ನಾಟ್ಯ ಕಲಾದರ ಜೈ ಶಂಭೋ.......

ತ್ರಿನೇತ್ರಧಾರನೇ ನಾಗ ಭೂಷಣನೇ
ಗಜ ಚರ್ಮಾಂಭರಧಾರಿ ಈಶ್ವರನೇ
ಢಮಢಮ ಢಮರುಗ ತ್ರಿಶೂಲಧಾರಿ
ಭಸ್ಮಪ್ರಿಯಪರಮೇಶ್ವರಗೆಜೈಶಂಭೋ

ಚಂದ್ರ ಕಲಾಧರ ಸಾಂಭ ಸದಾಶಿವ
ನೀಲಕಂಠೇಶ್ವರ ಸುಂದರ ಪರಶಿವನೇ
ಅರ್ಧನಾರಿಶ್ವರ, ಓಂಕಾರೇಶ್ವರನಿಗೆ

ಮೃತ್ಯುಂಜಯ,
ರುದ್ರಗೆ ಜೈ ಜೈಶಂಭೋ

ಪುರಾಣ ಪುರುಷ ವಿಶ್ವ ಸ್ವರೂಪನೆ
ಪಾರ್ವತಿ ರಮಣ ಮಹಾ ದೇವನೇ
ಬಿಲ್ವದಳಪ್ರಿಯ ಜಲ ಶಿವಶಂಕರಗೆ
ಕೈಲಾಸ ವಾಸಿ ಈಶ್ವರಗೆ ಜೈ ಶಂಭೋ

ಜೈ ಶಂಭೋ.......ಜೈ ಶಂಭೋ......
ಶಿವ ಹರ, ಹರ ಶಿವ ಜೈ ಶಂಭೋ....
ಕಾಶಿ ವಿಶ್ವೇಶ್ವರ, ಮಹಾಕಾಳೇಶ್ವರ...
ಗೋಕರ್ಣೇಶ್ವರನಿಗೆ ಜೈ ಶಂಭೋ....

**- ವೀಣಾ ಕೃಷ್ಣಮೂರ್ತಿ,** ದಾವಣಗೆರೆ

# 'ಮಹಾಶಿವರಾತ್ರಿ ಸ್ವಾರಸ್ಯಕರ ಹಿನ್ನೆಲೆ'

ಮಹಾಶಿವರಾತ್ರಿ ಹಿನ್ನೆಲೆ ಕುರಿತು ಅನೇಕ ಕಥೆಗಳಿವೆ. ಶಿವನು ಪಾರ್ವತಿಯನ್ನು ವಿವಾಹವಾದ ದಿನವೆಂದು, ಅದು ರಾತ್ರಿಯ ಮುಹೂರ್ತವಾಗಿತ್ತೆಂದೂ, ಈ ಗಿರಿಜಾ ಕಲ್ಯಾಣವನ್ನು ದೇವಾನುದೇವತೆಗಳು ನಿದ್ದೆಮಾಡದೇ ಆನಂದದಿಂದ ವೀಕ್ಷಿಸಿದರೆಂದು ಒಂದು ಕಡೆ ಹೇಳಿದರೆ, ಭಗೀರಥನ ಪ್ರಯತ್ನದಿಂದಾಗಿ ಗಂಗೆ ಭೂಮಿಗೆ ಇಳಿಯುವ ಪೂರ್ವದಲ್ಲಿ ಆಕೆಯನ್ನು ತನ್ನ ಜಟೆಯಲ್ಲಿ ನಿಗ್ರಹಿಸಿದ ಶಿವ ಅಲ್ಲೇ ಉಳಿಸಿಕೊಂಡಾಗ ಪುನಃ ಭಗೀರಥನು ಶಿವನನ್ನು ಒಲಿಸಿದಾಗ ಶಿವನು ಗಂಗೆಯನ್ನು ಭೂಮಿಗೆ ಕೊಟ್ಟ ದಿನವೇ ಮಹಾಶಿವರಾತ್ರಿಯೆಂದು ಮತ್ತೊಂದು ಕತೆಯಿದೆ.



ಪರಶಿವನ ಆದಿ ಅಂತ್ಯವನ್ನು ಪತ್ತೆ ಮಾಡಲು ಹೋದ ಬ್ರಹ್ಮ ಮತ್ತು ವಿಷ್ಣುವಿಗೆ ಶಿವನು ಲಿಂಗ ರೂಪದಲ್ಲಿ ಪ್ರಕಟವಾದ ದಿನವೆಂದು ಮತ್ತೊಂದು ಕತೆ ಹೇಳಿದರೆ, ಕಾಳಹಸ್ತಿ ಮಹಾತ್ಮೆ ಬೇಡರ ಕಣ್ಣಪ್ಪನವರೆಗೂ ಶಿವರಾತ್ರಿಯ ಹಿನ್ನೆಲೆ ಬಹುವಿಧವಾಗಿ ಹೇಳಲ್ಪಡುತ್ತಿದೆ.

ಆದರೆ, ಇವೆಲ್ಲಕ್ಕಿಂತ ಮಗದೊಂದು ಕಥೆ ಶಿವರಾತ್ರಿಯ ಹಿನ್ನೆಲೆಗೆ ಹೆಚ್ಚು ಹೊಂದಿಕೆಯಾಗುತ್ತದೆ. ಅದೇನೆಂದರೆ ಅಮೃತ ಪ್ರಾಪ್ತಿಗಾಗಿ ದೇವ ದಾನವರು ಸಮುದ್ರ ಮಥನ ಮಾಡುವಾಗ ಮೊದಲು ಬಂದ ಹಾಲಾಹಲ ಎಂದರೆ ವಿಷವನ್ನು ಶಿವ ಕುಡಿದಾಗ ಅದು ಶಿವನ ಹೊಟ್ಟೆಗೆ ಹೋಗದಂತೆ ಪಾರ್ವತಿಯು ಶಿವನ ಗಂಟಲನ್ನು ಒತ್ತಿ ತಡೆದಾಗ ಶಿವನ ಗಂಟಲು ನೀಲಿಯಾಗಿ ಶಿವ ನೀಲಕಂಠನಾದರೂ ವಿಷಪ್ರಾಶನ ಮಾಡಿದ ಶಿವನು ನಿದ್ದೆ ಹೋದಲ್ಲಿ ವಿಷವೇರಿ ಅಪಾಯವಾಗಬಹುದೆಂದು ಅಹೋರಾತ್ರಿ ಶಿವನನ್ನು ಎಚ್ಚರದಿಂದ ಇರಿಸಲಿಕ್ಕಾಗಿ ದೇವತೆಗಳು ಮತ್ತು ರಾಕ್ಷಸರು ಶಿವಧ್ಯಾನ, ಶಿವನಾಮ ಸಂಕೀರ್ತನೆ, ನೃತ್ಯಾದಿಗಳನ್ನು ಮಾಡುತ್ತಾ ಶಿವನನ್ನು ಎಚ್ಚರದಲ್ಲೇ ಇರಿಸಿದರೆಂದೂ, ಈ ನಿರಂತರ ಪ್ರಕ್ರಿಯೆಯಲ್ಲಿ ಅವರು ಆಹಾರವನ್ನು ಸಹಾ ಸ್ವೀಕರಿಸದೇ ತೊಡಗಿಕೊಂಡಿದ್ದರೆಂದೂ, ಇದನ್ನೇ ಶಿವರಾತ್ರಿ ಜಾಗರಣೆ ಮತ್ತು ಉಪವಾಸವಾಗಿ ಆಚರಿಸಲಾಗುತ್ತಿದೆ ಎಂದೂ ಹೇಳಲಾಗುತ್ತಿದೆ. ಈಗಿನ ವೈದ್ಯವಿಜ್ಞಾನವು ಸಹಾ ಹಾವಿನ ಕಡಿತಕ್ಕೆ ಒಳಗಾದವರನ್ನು ನಿದ್ದೆ ಮಾಡಲು ಬಿಡದೇ ಎಚ್ಚರದಲ್ಲಿಟ್ಟುಕೊಂಡೇ ಕರೆತನ್ನಿ ಎಂದು ಹೇಳುವುದುಂಟು.

ದೇವತೆಗಳ ಒಂದು ದಿವಸವೆಂದರೆ ಮಾನವರಿಗೆ ಅದು ಒಂದು ವರ್ಷವಾಗುತ್ತದೆ. ಹಾಗಾಗಿ ವರ್ಷಕ್ಕೊಮ್ಮೆ ನಾವು ಮಹಾಶಿವರಾತ್ರಿಯನ್ನೂ, ತಿಂಗಳಿಗೊಮ್ಮೆ ಮಾಸ ಶಿವರಾತ್ರಿಯನ್ನೂ ಆಚರಿಸುವುದು ರೂಢಿಗೆ ಬಂದಿತೆಂದು ಹೇಳಲಾಗುತ್ತಿದೆ.

ಅದೇನೇ ಇರಲಿ, ಆಗಾಗ ಉಪವಾಸ ಮಾಡುತ್ತಿರುವುದು ಆರೋಗ್ಯ ದೃಷ್ಟಿಯಿಂದ ಒಳ್ಳೆಯದು ಅಷ್ಟೇ ಅಲ್ಲ, ಹೊಟ್ಟೆ ತುಂಬಾ ತಿನ್ನುವವರು ಒಮ್ಮೆ ಉಪವಾಸ ಮಾಡಿದಾಗ ಮಾತ್ರ ಹೊಟ್ಟೆಗಿಲ್ಲದೇ ಹಸಿದವರ ಸ್ಥಿತಿ ಏನೆಂಬುದರ ಅರಿವಾಗುತ್ತದೆ. ಅಲ್ಲದೇ ಜಾಗರಣೆ ಮಾಡಿದಾಗ ನಿದ್ದೆ ಸಹ ಮಾಡದೇ ದೇಶ ರಕ್ಷಣೆ ಮಾಡುವ ಸೈನಿಕರ ಕಷ್ಟ ಏನೆಂಬುದು, ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವವರ, ಕೆಲಸ ಮಾಡುವವರ ಕಷ್ಟ ಏನೆಂಬುದು ಮನದಟ್ಟಾಗುತ್ತದೆ.

**- ಹೆಚ್.ಬಿ.ಮಂಜುನಾಥ,**
ದಾವಣಗೆರೆ.

## ಭ್ರಷ್ಟಾಚಾರ ವಿಚಾರಣೆ ಹೆಚ್ಡಿಕೆ ಮನವಿಗೆ ನಕಾರ

**(1ನೇ ಪುಟದಿಂದ)** ಕರ್ನಾಟಕ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, ಕುಮಾರಸ್ವಾಮಿ ಮನವಿ ಸಲ್ಲಿಸಿದ್ದರು. ಆದರೆ, ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ರಾಜೇಶ್ ಬಿಂದಲ್ ಅವರನ್ನು ಒಳ ಗೊಂಡ ಪೀಠ ಮನವಿಯನ್ನು ತಳ್ಳಿ ಹಾಕಿದೆ.

ಎರಡು ಜಮೀನುಗಳ ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿ ಹಾಗೂ ಇತರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಎಂ.ಎಸ್. ಮಹದೇವಸ್ವಾಮಿ ಎಂಬುವವರು ಖಾಸಗಿ ದೂರು ದಾಖಲಿಸಿದ್ದರು.

ಕುಮಾರಸ್ವಾಮಿ ಅವರು 2006ರ ವೇಳೆ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಉತ್ತರಹಳ್ಳಿಯಲ್ಲಿ ಎರಡು ಜಮೀನುಗಳನ್ನು ಅಕ್ರಮವಾಗಿ ಡಿನೋಟಿಫಿಕೇಷನ್ ಮಾಡಿದ್ದರು ಎಂದು ದೂರಿನಲ್ಲಿ ಹೇಳಲಾಗಿತ್ತು.

ಕುಮಾರಸ್ವಾಮಿ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಾಕಷ್ಟು ಸಾಕ್ಷಿಗಳಿವೆ. ಅವರ ವಿರುದ್ಧ ದುರುದ್ದೇಶದಿಂದ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂಬುದಕ್ಕೆ ಯಾವುದೇ ಸಾಕ್ಷಿಗಳಿಲ್ಲ ಎಂದು ಹೈಕೋರ್ಟ್ ಹೇಳಿತ್ತು.

# ಓಂಕಾರ ಮಂತ್ರ ವಿಶಿಷ್ಟತೆ



ಭೂಮಿ ಹುಟ್ಟುವ ಮೊದಲು ಮತ್ತು ಭೂಮಿ ಹುಟ್ಟಿದ ನಂತರ ಬಂದ ಮೊದಲನೆಯ ಶಬ್ಧ ಓಂಕಾರ ನಾದ. ಇದನ್ನು ಕಾಸ್ಮಿಕ್ ಸೌಂಡ್ ಅಂತಾನು ಕರೆಯಲ್ಪಡುತ್ತಾರೆ. ಇದರ ಸೃಷ್ಟಿಯ ಮೂಲ ದೇವರು ಒಬ್ಬನೇ ಬೇರೆ ಮತ್ತೊಂದು ಇಲ್ಲ. ಆದ ಕಾರಣ ನಾನು ಎಲ್ಲರ ಮನಸಿನಲ್ಲಿ ನೆಲಸಬೇಕು ಅಂತ ಈ ಓಂಕಾರ ನಾದ ವಿಶ್ವದ ಎಲ್ಲಾ ಕಡೆ ಹರಡಿದೆ. ಈ ಓಂಕಾರ ಮಂತ್ರಕ್ಕೆ ವಿಶಿಷ್ಟತೆ ಇದೆ. ಏನೆಂದರೆ, ನಮ್ಮ ಹಿಂದೂ ಧರ್ಮದಲ್ಲಿ ಮಂತ್ರಗಳಲ್ಲಿ ಈ ಓಂಕಾರ ಶಬ್ದ ಇಲ್ಲದೆ ಯಾವ ಮಂತ್ರನು ಇಲ್ಲಾ. ಆದಕಾರಣ ಈ ಮಂತ್ರಕ್ಕೆ ತುಂಬಾನೆ ಶ್ರೇಷ್ಠತೆ ಇದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಈ ಓಂಕಾರ ಮಂತ್ರಕ್ಕೆ ಇರುವ ಶಕ್ತಿ.

1) ನಮ್ಮ ಉಸಿರಿಗೂ ಮತ್ತು ಮನಸ್ಸಿಗೂ ಸಂಪರ್ಕವಿದೆ. ನಾವು ದೀರ್ಘವಾಗಿ ನಾಭಿಯಿಂದ ಉಸಿರನ್ನು ತೆಗೆದುಕೊಂಡು ಮತ್ತು ಉಸಿರನ್ನು ಬಿಡುವಾಗ ಈ ಓಂಕಾರ ಮಂತ್ರ ಉಚ್ಛಾರಣೆ ಮಾಡುವುದರಿಂದ ನಮ್ಮ ದೇಹದಲ್ಲಿರುವ ಸ್ವಾದಿಷ್ಟಾನ, ಮಣಿಪುರ ಅನಾಹತ, ಆಗ್ನೇಯ, ವಿಷುದ್ಧಿ ಚಕ್ರಗಳು ಚಾಲನೆ ಆಗುತ್ತವೆ.

2) ನಮ್ಮ ಮನಸ್ಸು ಶಾಂತ ಆಗುತ್ತದೆ ಮತ್ತು ನಮ್ಮ ಮೆದುಳಿನಲ್ಲಿರುವ ಅಲ್ಫಾ ಸ್ಥಿತಿಗೆ ನಾವು ರೀಚ್ ಆಗುತ್ತೀವಿ. ಇದರಿಂದ ನಮ್ಮ ಮನಸ್ಸಿಗೆ ಶಾಂತಿ ಸಿಗುತ್ತದೆ. ಯೂರೋಪ್ ಮತ್ತು ವೆಸ್ಟನ್ ಕಂಟ್ರಿ ವಿಜ್ಞಾನಿಗಳು ಈ ಮಂತ್ರದ ಪ್ರಸಿದ್ಧತೆಯನ್ನು ತಿಳಿದು ಇದರ ಬಗ್ಗೆ ಸಂಶೋಧನೆ ಮಾಡಿದ ಮೇಲೆ ಅವರಿಗೆ ಗೊತ್ತಾದ ಅಂಶ ಏನೆಂದರೆ ಈ ಓಂಕಾರ ಮಂತ್ರ ಪಠಣದಿಂದ ನಮಗೆ ಸಿಗುವ ಲಾಭಗಳು.

ಅ) ಏಕಾಗ್ರತೆ ಹೆಚ್ಚುತ್ತದೆ
ಆ) ರಕ್ತದೊತ್ತಡ ಉತ್ತಮವಾಗಿರುತ್ತದೆ.
ಇ) ಮನಸ್ಸು ತುಂಬಾ ಶಾಂತತೆಯಿಂದಿರುತ್ತದೆ
ಈ) ದೇಹದಲ್ಲಿ ಇರುವ ಪ್ರತಿಯೊಂದು ನರ, ನಾಡಿಗಳು ಚಾಲನೆಯಲ್ಲಿರುತ್ತವೆ.
ಉ) ನಮ್ಮ ದೇಹಕ್ಕೆ ತುಂಬಾ ಶಕ್ತಿದಾಯಕ ಭಾವನೆವುಂಟಾಗುತ್ತದೆ.

ಅಷ್ಟು ಶಕ್ತಿ ಇದೆ ಈ ಓಂಕಾರ ಮಂತ್ರಕ್ಕೆ
ಈ ಓಂಕಾರ ಮಂತ್ರವನ್ನು ಉಚ್ಛರಿಸುವ ಸರಿಯಾದ ವಿಧಾನ
**ಅ ಕಾರ, ಊ ಕಾರ, ಮ ಕಾರ (1: 2: 3:) (ಓಂ)**

ನಮ್ಮ ಮನಸ್ಸಿನಲ್ಲಿ ಉಂಟಾಗುವ ನಕಾರಾತ್ಮಕ ಭಾವನೆಗಳು ಭಯ, ಭೀತಿ, ಆತಂಕ, ಖಿನ್ನತೆಯನ್ನು ನಿಯಂತ್ರಣ ಮಾಡಿ ಸಕಾರಾತ್ಮಕವಾಗಿ ಪರಿವರ್ತಿಸಲು ಈ ಓಂ ಮಂತ್ರ ಪಠಣೆ ರಾಮ ಬಾಣ. ನಮ್ಮ ಮೆದುಳಿನಲ್ಲಿ 4 ತರಹದ ತರಂಗಗಳು ಅಲ್ಫಾ, ಬೀಟಾ, ಗಾಮ, ತೀಟಾ ಸ್ಟೇಟ್ ಆಫ್ ಮೈಂಡ್ ಇದೆ. ಯಾವಾಗ ನಾವು ಈ ಓಂ ಮಂತ್ರ ಉಚ್ಛಾರಣೆ ಮಾಡುತ್ತೇವೋ ನಮ್ಮ ಮನಸ್ಸು ಅಲ್ಫಾ ಸ್ಟೇಟ್ ಆಫ್ ಮೈಂಡ್ ತಲುಪುತ್ತದೆ. ಆವಾಗ ನಮ್ಮ ಮನಸ್ಸು ಶಾಂತವಾಗುತ್ತದೆ. ಈ ಅಲ್ಫಾ ಸ್ಟೇಟ್ ಆಫ್ ಮೈಂಡ್‌ನಲ್ಲಿ ಧನಾತ್ಮಕ ದೃಢೀಕರಣಗಳನ್ನು ಹೇಳುವುದರಿಂದ ತುಂಬಾನೇ ಉಪಯೋಗ ಆಗುತ್ತದೆ.

ಉದಾ : 1) ನಾನು ಆತ್ಮವಿಶ್ವಾಸದ ವ್ಯಕ್ತಿ ಆಗಿದ್ದೇನೆ.
2) ನಾನು ಬಹಳಷ್ಟು ಹಣವನ್ನು ಹೊಂದಿದ್ದೇನೆ.
3) ನಾನು ತುಂಬಾನೆ ಆರೋಗ್ಯವಾಗಿ ಇದ್ದೇನೆ.

ಸತತ ಪ್ರತಿದಿನ ಈ ಓಂಕಾರ ಮಂತ್ರ ಪಠಣೆಯಿಂದ ಹೆಚ್ಚು ಲಾಭವನ್ನು ನಾವು ಪಡೆದುಕೊಳ್ಳಬಹುದು.

**- ಎಸ್. ಪ್ರಭು,** ಮನಃಶಾಸ್ತ್ರಜ್ಞರು, ದಾವಣಗೆರೆ. 96636 66478

## ನಗರದ ಇಂದು ಬಂಬೂಬಜಾರ್‌ನ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ಮಹಾಶಿವರಾತ್ರಿ ಮತ್ತು ರಥೋತ್ಸವದ ಅಂಗವಾಗಿ ಬಂಬೂ ಬಂಜಾರ್‌ನ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಇಂದು ರುದ್ರಾಭಿಷೇಕ ಮತ್ತು ಭಕ್ತಾದಿಗಳಿಂದ ಅಖಂಡ ಭಜನಾ ಕಾರ್ಯಕ್ರಮ ಆಯೋಜಿಸಿದೆ.

ನಾಳೆ ಗುರುವಾರ ಸಂಜೆ 5 ಗಂಟೆಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ನಡೆಯಲಿದ್ದು, ಶಿವಶರಣ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ, ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖದಲ್ಲಿ ಮಹಾಸ್ವಾಮಿಯ ರಥೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ.

ರಥವು ಬಂಬೂಬಜಾರ್‌ನ ಮುಖ್ಯ ರಸ್ತೆಯಲ್ಲಿ ಚಲಿಸಿ ಮರಳಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ಬಂದು ತಲುಪಲಿದೆ. ಭಕ್ತಾದಿಗಳಿಗೆ ಅನ್ನಸಂತರ್ಪಣೆ ಇರುತ್ತದೆ ಎಂದು ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಹಾಗೂ ಮೇದಾರ ಗಿರಿಜನ ಅಭ್ಯುದಯ ಸೇವಾ ಸಂಘ ತಿಳಿಸಿದೆ.

## ನಗರದ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಮಹಾಶಿವರಾತ್ರಿ

ಕೆಟಿಜೆ ನಗರ 2ನೇ ಮುಖ್ಯ ರಸ್ತೆ 14ನೇ ತಿರುವಿನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಮಹಾಶಿವರಾತ್ರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಜೆ 6.30ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯಲಿದೆ. ನಾಳೆ ದಿನಾಂಕ 27ರ ಗುರುವಾರ ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶ್ರೀ ಕುರುಹಿನಶೆಟ್ಟಿ ನೇಕಾರ ಸಮಾಜದ ಸಂಘದ ಪದಾಧಿಕಾರಿಗಳು ಕೋರಿದ್ದಾರೆ.

## ಸಾರ್ವಜನಿಕ ತಿಳುವಳಿಕೆ ನೋಟಿಸ್

ನನ್ನ ಕಕ್ಷಿದಾರರಾದ ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಕಂಚಿಕೆರೆ ಗ್ರಾಮದ ವಾಸಿಯಾದ ದಿ|| ಶ್ರೀಮತಿ ಲಲಿತಮ್ಮ ಕೋಂ ಲೇಟ್ ಎಂ.ಎಂ. ಗುರುಶಾಂತಯ್ಯ ಇವರ ಮಕ್ಕಳಾದ 1) ಶ್ರೀ ಎಂ. ಎಂ. ಕೊಟ್ರೇಶ, 2) ಶ್ರೀ ರಾಜಯ್ಯ ಎಂ. ಎಂ. 3) ಶ್ರೀ ಎಂ. ಎಂ. ಮಂಜಯ್ಯ, 4) ಶ್ರೀ ಎಂ. ಎಂ. ವೀರಯ್ಯ, 5) ಶ್ರೀ ಎಂ. ಎಂ. ವಿನಾಯಕ, 6) ಶ್ರೀ ಎಂ. ಎಂ. ಸಿದ್ದೇಶ ಆದ ಇವರುಗಳ ಮಾಹಿತಿ ಮೇರೆಗೆ ಈ ಮೂಲಕ ನೀಡಿದ ಸಾರ್ವಜನಿಕ ತಿಳುವಳಿಕೆ ನೋಟಿಸ್ ಏನೆಂದರೆ,

ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಮಾರಾಟ, ವಗೈರೆಗಳನ್ನು ಮಾಡಲು ದಾವಣಗೆರೆ ಸಿಟಿ ವಾಸ: 13ನೇ ಕ್ರಾಸ್, ರಜಾವುಲ್ ಮುಸ್ತಫಾ ನಗರ ವಾಸಿಯಾದ ಶ್ರೀ ಮಹಮ್ಮದ್ ಸಾಕೀಬ್ ಬಿನ್ ಶಬೀರ್ ಸಾಬ್, ಆದ ಇವರಿಗೆ ನನ್ನ ಕಕ್ಷಿದಾರರ ತಾಯಿಯವರಾದ ದಿ|| ಲಲಿತಮ್ಮ ಕೋಂ ಎಂ. ಎಂ. ಗುರುಶಾಂತಯ್ಯ ಹಾಗೂ ಎಂ. ಎಂ. ಕೊಟ್ರೇಶ ಮತ್ತು ಎಂ. ಎಂ. ರಾಜಯ್ಯ ಇವರುಗಳು ಸೇರಿ ತಮ್ಮ ಪರವಾಗಿ ದಿನಾಂಕ: 21.03.2019ರಂದು ದಾವಣಗೆರೆ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿತವಾದ ಜನರಲ್ ಪವರ್ ಆಟಾರ್ನಿ ಮೂಲಕ ಸದರಿ ಜನರಲ್ ಪವರ್ ಆಫ್ ಅಟಾರ್ನಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಲು ಹಾಗೂ ಮಾರಾಟ ಇತ್ಯಾದಿಗಳನ್ನು ಮಾಡಲು ಪವರ್ ಆಫ್ ಅಟಾರ್ನಿಯನ್ನು ನೀಡಿದ್ದರು. ಈಗ ಮೇಲ್ಕಂಡ ಶ್ರೀಮತಿ ಲಲಿತಮ್ಮ ಇವರು ದಿನಾಂಕ:21.12.2021 ರಂದು ಮರಣ ಹೊಂದಿರುವ ಪ್ರಯುಕ್ತ ಹಾಗೂ ಸದರಿ ಮೇಲ್ಕಂಡ ಜನರಲ್ ಪವರ್ ಆಫ್ ಅಟಾರ್ನಿ ಪತ್ರಕ್ಕೆ ಸಹಿ ಹಾಕಿರುವ ಮೇಲ್ಕಂಡ ಕೊಟ್ರೇಶ ಹಾಗೂ ರಾಜಯ್ಯ ಇವರುಗಳು ಮೇಲ್ಕಂಡ ಜನರಲ್ ಪವರ್ ಆಫ್ ಅಟಾರ್ನಿ ಈ ಮೂಲಕ ರದ್ದು ಮಾಡಿರುತ್ತಾರೆ ಹಾಗೂ ಸದರಿ ಮೇಲ್ಕಂಡ ಅಂಶವನ್ನು ಜನರಲ್ ಪವರ್ ಆಫ್ ಅಟಾರ್ನಿ ಹೊಂದಿರುವ ಮೇಲ್ಕಂಡ ಶ್ರೀ ಮಹಮ್ಮದ್ ಸಾಕೀಬ್ ಬಿನ್' ಶಬೀರ್ ಸಾಬ್, ಇವರಿಗೂ ಸಹ ನೋಟಿಸ್ ಮೂಲಕ ತಿಳಿಯಪಡಿಸಲಾಗಿದೆ. ಆದ್ದರಿಂದ ಸದರಿ ಮೇಲ್ಕಂಡ ಮಹಮ್ಮದ್ ಸಾಕೀಬ್ ಬಿನ್' ಶಬೀರ್ ಸಾಬ್ ಇವರೊಂದಿಗೆ ಷೆಡ್ಯೂಲ್ ಸ್ವತ್ತಿನ ವಿಷಯವಾಗಿ ಸಾರ್ವಜನಿಕರು ಯಾವುದೇ ರೀತಿಯ ವ್ಯವಹಾರವನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಹಾಗೊಂದು ವೇಳೆ ಯಾರಾದರೂ ಷೆಡ್ಯೂಲ್ ಸ್ವತ್ತಿನ ಬಗ್ಗೆ ಮೇಲ್ಕಂಡ ಮಹಮ್ಮದ್ ಸಾಕೀಬ್ ಬಿನ್ ಶಬ್ಬೀರ್ ಸಾಬ್ ಇವರೊಂದಿಗೆ ವ್ಯವಹರಿಸಿದ ಪಕ್ಷದಲ್ಲಿ ಅದಕ್ಕೆ ಅವರುಗಳೇ ಬಾಧ್ಯಸ್ಥರಾಗಿರುತ್ತಾರೆ.

ಆ ರೀತಿಯ ಯಾವುದೇ ವ್ಯವಹಾರಗಳು ನನ್ನ ಕಕ್ಷಿದಾರರ ಹಕ್ಕುಗಳಿಗೆ ಬಾಧಕವಾಗಿರುವುದಿಲ್ಲ. ಅದಕ್ಕೆ ಮೇಲ್ಕಂಡ ಮಹಮ್ಮದ್ ಸಾಕೀಬ್ ಬಿನ್ ಶಬೀರ್ ಸಾಬ್, ಇವರೇ ಜವಾಬ್ದಾರರಾಗಿರುತ್ತಾರೆ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು ಹಿರಿಯ ಉಪ ನೋಂದಣಾಧಿಕಾರಿಗಳವರ ಕಛೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಶಾಬನೂರು ಗ್ರಾಮದ ರಿ.ಸ.ನಂ:156/1ಎ1ಸಿ2, ಹಾಲಿ ಸರ್ವೆ ನಂ:156/4 ರಲ್ಲಿ ನಮ್ಮಗಳ ಪೈಕಿ ಶ್ರೀಮತಿ ಲಲಿತಮ್ಮ ಕೋಂ ಲೇಟ್ ಎಂ.ಎಂ. ಗುರುಶಾಂತಯ್ಯ ಇವರ ಹೆಸರಿಗೆ ಖಾತೆ ಇರತಕ್ಕ ಜಮೀನಿನ ವಿಸ್ತೀರ್ಣ ಎಕರೆ-ಇಲ್ಲಾ, ಗುಂಟೆ- ಒಂದು (0-01) ಆಕಾರ ರೂ.0-03 ಪೈಸೆ ವುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಬಾವಿಕಟ್ಟೆ ದೇವೇದ್ರಪ್ಪ ನವರ ಸೊತ್ತು, ಪಶ್ಚಿಮಕ್ಕೆ: ಬಾವಿಕಟ್ಟೆ ದೇವೇಂದ್ರಪ್ಪ ನವರ ಸೊತ್ತು, ಉತ್ತರಕ್ಕೆ: ಶಿವಲಿಂಗಪ್ಪನವರ ಬಾಬ್ತು ಸೊತ್ತು, ದಕ್ಷಿಣಕ್ಕೆ: ನಿಟ್ಟುವಳ್ಳಿ ಹನುಮಂತಪ್ಪ ನವರ ಸೊತ್ತು,

**ಸಹಿ/- ವಕೀಲರು, ಜಕಣಾಚಾರಿ, ಬಿ.ಕಾಂ., ಎಲ್.ಎಲ್.ಬಿ. ವಕೀಲರು ಹಾಗೂ ಗೌರವ ಪಂಚಾಯಿತಿದಾರರು, #1725/1, ಶ್ರೀ ವೆಂಕಟೇಶ್ವರ ರೆಸಿಡೆನ್ಸಿ C1 ಅಜ್ಜಂಪುರ ಶೆಟ್ರು ಕಾಂಪೌಂಡ್ 3ನೇ ಅಂತಸ್ತು, ಕೆನರಾ ಬ್ಯಾಂಕ್ ಹಿಂಭಾಗ, ಕೆ.ಬಿ. ಬಡಾವಣೆ, ದಾವಣಗೆರೆ-2 ಮೊ.: 8867813895**

## ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಫ್ಯಾಕ್ಸ್: 08192-237488 | ದೂರವಾಣಿ: 08192-256107, 08192-255909

ಆಡಳಿತ ಕಛೇರಿ: ಅಂಚೆ ಪೆಟ್ಟಿಗೆ ನಂ. 48, ಹಳೆ ಆಸ್ಪತ್ರೆ ರಸ್ತೆ, ದಾವಣಗೆರೆ-577001.
ಇಮೇಲ್: shivabank@rediffmail.com

**ನಿಯಮ 8(1) ಪರಿಶಿಷ್ಟ IV**
**ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

ಕೆಳಸಹಿದಾರರು **ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ** ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [4][ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [5][ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ **ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.** ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

| ಕ್ರಮ ಸಂಖ್ಯೆ | ಸಾಲಗಾರರ ಹೆಸರು | ಸ್ಥಿರಾಸ್ತಿ ವಿವರ | ಡಿಮ್ಯಾಂಡ್ ನೋಟೀಸ್ ದಿನಾಂಕ | ಸ್ವಾಧೀನ ಪಡಿಸಿಕೊಂಡಿರುವ ದಿನಾಂಕ | ಬಾಕಿ ಇರುವ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1. | **ಶ್ರೀ ಬಸವರೆಡ್ಡಿ ಆರ್. ಬಿನ್ ಹನುಮಂತಪ್ಪ ಆರ್.** ನಂ.1821/87, ವಿನಾಯಕನಗರ, ಸಂವೇದಿ ಸ್ಕೂಲ್ ಹತ್ತಿರ, ನಿಟ್ಟುವಳ್ಳಿ, ದಾವಣಗೆರೆ. | ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ನಗರಸಭೆ ಸರಹದ್ದಿಗೆ ಸೇರಿದ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಿಟುವಳ್ಳಿ ಗ್ರಾಮದ ಪುನರ್ ಸರ್ವೆ ನಂ.22/ಪಿ, ಒಟ್ಟು ವಿಸ್ತೀರ್ಣ: ಎಕರೆ ಹದಿಮೂರು, ಗುಂಟೆ ಎರಡು (13-02) ಉಳ್ಳ ಜಮೀನುಗಳು ಈ ಹಿಂದೆ ದಿನಾಂಕ 22.09.1995 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳವರಿಂದ ನಂ.ಎ.ಎಲ್.ಎನ್. ಎಸ್.ಆರ್. 40/95-96ರ ಆದೇಶದ ಪ್ರಕಾರ ಮತ್ತು ನಂ. ಎಎಲ್‌ಎನ್‌ಎಸ್‌ಆರ್. 17/95-96 ದಿನಾಂಕ. 31.07.1996 ರ ಆದೇಶದ ಪ್ರಕಾರ ವಾಸೋಪಯೋಗಕ್ಕಾಗಿ ಪರಿವರ್ತನೆಯಾಗಿದ್ದು, ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟ್‌ಗಳ ಬಗ್ಗೆ ತಯಾರು ಮಾಡಿರುವ ಸೈಟ್ ಪ್ಲಾನ್ ಸಹ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಂ.ಡಿಯುಡಿಎ/ಟಿಪಿಎಂ/ಪಿಆರ್‌ಎಲ್‌ಪಿ/5090/96-97, ದಿನಾಂಕ 06.06.1997 ರ ಪ್ರಕಾರ ನಕ್ಷೆ ಅಂಗೀಕೃತವಾಗಿದ್ದು, ನಂತರ ನಿಟುವಳ್ಳಿ, ಗ್ರಾಮ ಪಂಚಾಯಿತಿಗೆ ಅಭಿವೃದ್ಧಿ ಶುಲ್ಕ ಪಾವತಿ ಮಾಡಿ, ಮನೆ ನಂಬರ್ ಸಹ ಪಡೆದುಕೊಂಡಿದ್ದು, ಇತ್ತೀಚೆಗೆ ದಾವಣಗೆರೆ ನಗರಸಭೆಗೆ ಸೇರ್ಪಡೆಯಾಗಿರುವ ನಿವೇಶನಗಳ ಪೈಕಿ ನಿವೇಶನ ಸಂಖ್ಯೆ 87 (ಎಂಭತ್ತೇಳು) ಇದರ ಚಾಲ್ತಿ ಮುನ್ಸಿಪಲ್ ಮನೆ ನಂ. 1821/87, ವಿಸ್ತೀರ್ಣ: 30 X 50 ಅಡಿಯ ನೆಲ ಅಂತಸ್ತು, ಮೊದಲನೇ ಅಂತಸ್ತು ಮತ್ತು ಎರಡನೇ ಅಂತಸ್ತು ಉಳ್ಳ ಕಟ್ಟಡ. **ಚಕ್ಕುಬಂಧಿ: ಪೂರ್ವಕ್ಕೆ:** ಸೈಟ್ ನಂಬರ್ 88, **ಪಶ್ಚಿಮಕ್ಕೆ:** 30 ಅಡಿ ಅಗಲ ರಸ್ತೆ, **ಉತ್ತರಕ್ಕೆ:** ಮರು ಸರ್ವೇ ನಂಬರ್ 21 ರ ಜಮೀನು, **ದಕ್ಷಿಣಕ್ಕೆ:** 30 ಅಡಿ ಅಗಲ ರಸ್ತೆ. | 23.04.2024<br>ಎನ್‌ಪಿಎ ದಿನಾಂಕ 28.02.2023 | 21.02.2025 | ಖಾತೆ ಸಂಖ್ಯೆ HP-07<br>ರೂ.61,57,654.61<br>+<br>ದಿನಾಂಕ 31.03.2024 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ. |

ದಿನಾಂಕ: 26.02.2025
ಸ್ಥಳ: ದಾವಣಗೆರೆ

ಸಹಿ/- ಅಧಿಕೃತ ಅಧಿಕಾರಿ
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ

# ಶರಣಧರ್ಮ ವಚನ ಸಾಹಿತ್ಯ ಸಂರಕ್ಷಣಾ ಹುತಾತ್ಮ ಶರಣ ಡೋಹರ ಕಕ್ಕಯ್ಯ

## ಇಂದು ಶಿವಶರಣ ಡೋಹರ ಕಕ್ಕಯ್ಯನವರ ಜಯಂತಿ

12ನೇ ಶತಮಾನ ಮಾನವ ಕುಲದ ಇತಿಹಾಸ ಪುಟಗಳಲ್ಲಿ ವೈಚಾರಿಕ ಪ್ರಜ್ಞೆಯ ಮೂಲಕ ವೈಯಕ್ತಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಷ್ಟ್ರೀಯ ರಾಜಕೀಯ ಕ್ಷೇತ್ರದಲ್ಲಿ ಜಾಗೃತಿಯನ್ನುಂಟು ಮಾಡಿದ ಕಾಲ. ಮಹಾ ಮಾನವತಾವಾದಿ ಬಸವಣ್ಣ ಮತ್ತು ಜಾತಿ, ಮತ, ಕುಲಗೋತ್ರ, ಮೇಲು-ಕೀಳು ಭೇದ-ಭಾವಗಳನ್ನು ಭೇದಿಸಿ ಹೊರಬಂದ ಶ್ರಮಜೀವಿಗಳು, ಶೂದ್ರ, ಶ್ರಮಿಕ ವರ್ಗದ ಜನಸಾಮಾನ್ಯರು ಪ್ರಪಂಚದಲ್ಲಿಯೇ ಪ್ರಪ್ರಥಮ ಬಾರಿಗೆ ಮಾನವತಾವಾದ (Humanism) ವನ್ನು ಪ್ರತಿಪಾದಿಸಿ, ತಮ್ಮ ನಡೆ-ನುಡಿಗಳೊಂದಿಗೆ ಅನುಷ್ಠಾನಗೊಳಿಸಿ, ಶಿವಶರಣರೆಂದು ಚರಿತ್ರೆಯಲ್ಲಿ ದಾಖಲಾದರು. ಕೀಳು ಕುಲ ಜಾತಿಗೆ ಸೇರಿದ್ದ, ಚರ್ಮ ಹದ ಮಾಡುವ ಕಾಯಕ ಸ್ವೀಕರಿಸಿದ್ದ ಡೋಹರ ಕಕ್ಕಯ್ಯ ಮಹಾನುಭಾವಿ ಶಿವಶರಣನಾಗಿದ್ದು, ಆ ಕಾಲದ ಮಾನವತಾವಾದಕ್ಕೆ ಸಿಕ್ಕ ಐತಿಹಾಸಿಕ ಮಾದರಿ ವಿಜಯವಾಗಿದೆ.

**ಶರಣ ಧರ್ಮದಲ್ಲಿಯೇ ಜೀವಿಸಿದ ಡೋಹರ ಕಕ್ಕಯ್ಯ :** ಧರ್ಮಗುರು ಬಸವಣ್ಣನ ನೇತೃತ್ವದ ಶರಣ ಧರ್ಮ ಮತ್ತು ಸಂಸ್ಕೃತಿ ಅಸ್ತಿತ್ವದಲ್ಲಿದ್ದ ಜಾತಿ, ಕುಲ, ಗೋತ್ರ, ಜಾತೀಯತೆ, ಅಸ್ಪೃಶ್ಯತೆ, ನೀಚಕುಲ, ಸಾಮಾಜಿಕ ಮೇಲು-ಕೀಳು ಮುಂತಾದ ಅಮಾನವೀಯ ಹೀನ ಗುಣಗಳನ್ನು ಮೀರಿ; ಮಾನವೀಯತೆ, ಸಾಮಾಜಿಕ ಸಮಾನತೆ, ವೈಯಕ್ತಿಕ ಸಮಾನ ಧಾರ್ಮಿಕ ಪೂಜಾವಿಧಾನ, ಸಾಮಾಜಿಕ ಧಾರ್ಮಿಕ ಹಕ್ಕುಗಳನ್ನು ನೀಡಿ, ವಿಶ್ವ ಸಹೋದರತೆಯನ್ನು ಮೈಗೂಡಿಸಿಕೊಂಡು ವಿಶ್ವಧರ್ಮವಾಗಿ ಇವನಾರವ; ಇವನಾರವ ಎನ್ನದೇ, ಇವ ನಮ್ಮವ ಇವ ನಮ್ಮವ ಎನ್ನುವ ಸಾಮಾಜಿಕ ಸಮಾನತೆಯನ್ನು ಸರ್ವರಿಗೂ ನೀಡಿತು. ಇದರ ಕೀರ್ತಿಯಿಂದ ಪ್ರಭಾವಿತರಾದ ಚರ್ಮ ಹದ ಮಾಡುವ ಚಮ್ಮಾರ ಕಾಯಕದ ಡೋಹರ ಕಕ್ಕಯ್ಯ ಮತ್ತು ಪತ್ನಿ ಮಲ್ಲಮ್ಮ ದಂಪತಿ ಕಲ್ಯಾಣಕ್ಕೆ ಆಗಮಿಸಿ, ಶರಣ ಧರ್ಮ ದೀಕ್ಷೆ ಸ್ವೀಕರಿಸಿದರು. ಬಸವಣ್ಣನಿಗಿಂತ ವಯಸ್ಸಿನಲ್ಲಿ ಹಿರಿಯರಾದ ಡೋಹರ ಕಕ್ಕಯ್ಯ ದಂಪತಿಯನ್ನು ಶರಣ ಸಂಕುಲ ಹರ್ಷೋದ್ಗಾರಗಳಿಂದ ಸ್ವಾಗತಿಸಿತು. ಬಸವಣ್ಣ, ದೇವರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಕಾಯಕಯೋಗಿ ಸಿದ್ಧರಾಮ, ಮಡಿವಾಳ ಮಾಚಿದೇವ, ಬಸವೋತ್ತರ ಯುಗದ ಷಣ್ಮುಖಸ್ವಾಮಿ ಮುಂತಾದವರು ತಮ್ಮ ವಚನಗಳಲ್ಲಿ ಇವರನ್ನು ಸ್ಮರಿಸಿದ್ದಾರೆ. ಡೋಹರ ಕಕ್ಕಯ್ಯನೂ ವಚನಕಾರನಾಗಿದ್ದು ಜಾತಿ ವ್ಯವಸ್ಥೆ, ಸಾಮಾಜಿಕ ಅಸಮಾನತೆ, ಅನ್ಯಾಯದ ಧರ್ಮಾಚರಣೆಗಳು, ಅಧರ್ಮದ ಸಂಪಾದನೆ, ಇತ್ಯಾದಿಗಳನ್ನು ಖಂಡಿಸಿ ವಚನಗಳನ್ನು ರಚಿಸಿದ್ದಾನೆ. ಈತನ ವಚನಗಳು ಸಮಗ್ರ ವಚನ ಸಂಪುಟದಲ್ಲಿ ಪ್ರಕಟಗೊಂಡಿವೆ.

**ಡೋಹರ ಕಕ್ಕಯ್ಯನ ಮೂಲ ಮತ್ತು ಕಲ್ಯಾಣಕ್ಕೆ ಆಗಮನ :** ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳಸ್ತರಕ್ಕೆ ಸೇರಿದ ಶೂದ್ರಾತಿಶೂದ್ರ, ಅಂತ್ಯಜ, ಶ್ವಪಚ, ಅಸ್ಪೃಶ್ಯ, ಕೀಳು ಜಾತಿ ಎನಿಸಿಕೊಂಡ ಡೋಹರ ಕುಲದಲ್ಲಿ ಚರ್ಮ ಹದ ಮಾಡಿ ಪಾದರಕ್ಷೆ ಇತರೆ ಸಾಮಗ್ರಿಗಳನ್ನು ಸಿದ್ಧಪಡಿಸಿ ಜೀವನ ಮಾಡುವ ಚಮ್ಮಾರ ಕುಟುಂಬದಲ್ಲಿ ಕಕ್ಕಯ್ಯ ಜನಿಸಿದನು. ಮಾಳ್ವ ದೇಶದ ಬೆಜವಾಡ ಈತನ ಮೂಲ ಸ್ಥಳ. ಈತನ ಪೂರ್ವಜರ ಕುರಿತು ಹೆಚ್ಚೇನೂ ತಿಳಿದಿಲ್ಲ. ಮರಾಠ ಪ್ರಾಂತ್ಯದವನು ಎಂಬ ಅಭಿಪ್ರಾಯಗಳೂ ಇವೆ. ದನದ ಚರ್ಮ ಹದ ಮಾಡುವವರನ್ನು ಮರಾಠಿಯಲ್ಲಿ ಢೋರ, ಡೋಹರ ಎನ್ನುತ್ತಾರೆ. ಬಸವಣ್ಣ ಮತ್ತು ಇತರೆ ಶರಣರಿಗೆ ಈತನು ಹಿರಿಯ ಸಮಕಾಲೀನನಾಗಿದ್ದು, ಬಸವಣ್ಣನ ಶರಣ ಧರ್ಮ, ಮಾನವತಾವಾದ, ಸತ್ಯ ಶುದ್ಧ ಕಾಯಕ ದಾಸೋಹ ತತ್ವ, ಧಾರ್ಮಿಕ ಸಮಾನತೆ, ಅಸ್ಪೃಶ್ಯತೆ, ಅಮಾನವೀಯ ಧರ್ಮಾಚರಣೆಗಳ ತಿರಸ್ಕಾರ ಮುಂತಾದ ಉದಾತ್ತ ಗುಣಗಳಿಗೆ ಮನಸೋತು ಕಲ್ಯಾಣಕ್ಕೆ ಆಗಮಿಸಿ ಬಸವಣ್ಣ, ಅಲ್ಲಮಪ್ರಭು, ಸಿದ್ದರಾಮ, ಚೆನ್ನಬಸವಣ್ಣ, ನುಲಿಯ ಚಂದಯ್ಯ, ಬಿಬ್ಬಿ ಬಾಚಯ್ಯ, ಅಕ್ಕಮಹಾದೇವಿ ಮುಂತಾದ ಶರಣರ ಸಮ್ಮುಖದಲ್ಲಿ ಇಷ್ಟಲಿಂಗ ದೀಕ್ಷೆ ಸ್ವೀಕರಿಸಿ, ಶರಣ ಧರ್ಮ ಪರಿಪಾಲಕನಾದನು. ಕಲ್ಯಾಣ ಪಟ್ಟಣಕ್ಕೆ ಸಮೀಪದಲ್ಲಿರುವ ತೊಗಲೂರು ಎಂಬಲ್ಲಿ ನೆಲೆಸಿ ಚರ್ಮ ಹದ ಮಾಡುವ ಡೋಹರ ಚಮ್ಮಾರ ಕಾಯಕದಲ್ಲಿ ಸತಿ ಮಲ್ಲಮ್ಮನೊಡನೆ ನಿರತನಾದನು. ಶರಣರ ಸಂಪರ್ಕದಿಂದ ಮಹಾಪ್ರಸಾದಿ, ಮಹಾನುಭಾವಿ ಕಕ್ಕಯ್ಯ ಎನಿಸಿಕೊಂಡನು.

ಸಾಮಾಜಿಕ ಉಚ್ಚ-ನೀಚ, ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯಗಳಿಲ್ಲದ ಸರ್ವ ಸಮಾನತೆಯ ಜೀವನ ಕಂಡು ಭೂಲೋಕದಲ್ಲಿ ಸ್ವರ್ಗವೇ ಧರೆಗಿಳಿದಂತಾಯಿತು. ಇದನ್ನು ಸಹಿಸದ ಪುರೋಹಿತ ಶಾಹಿ ಕುಲಗೇಡಿಗಳು ಕಲ್ಯಾಣ ಕ್ರಾಂತಿಗೆ ಕಾರಣರಾದರು.

**ಶಿವಶರಣರಿಂದ ಸ್ತುತಿಸಲ್ಪಟ್ಟ ಡೋಹರ ಕಕ್ಕಯ್ಯ :** ಕಲ್ಯಾಣ ದಲ್ಲಿ ಶರಣ ಕಕ್ಕಯ್ಯನವರ ಜೀವನ ಇತರರಿಗೆ ಮಾದರಿಯಾಗು ವಂತಿತ್ತು. ಸದಾ ಗುರು-ಲಿಂಗ-ಜಂಗಮ, ಕಾಯಕ ದಾಸೋಹ ಪ್ರೇಮಿಯಾಗಿದ್ದ ಈತನ ನಡೆ-ನುಡಿಯನ್ನು ಸರ್ವ ಶರಣ ಸಂಕುಲ ಕೊಂಡಾಡಿತ್ತು. ಈತನನ್ನು ಮೆಚ್ಚಿದ ಆಧ್ಯ ವಚನಕಾರ ದೇವರ ದಾಸಿಮಯ್ಯ, ಕೀಳು ಡೋಹರ ಕಕ್ಕ, ಕೀಳು ಮಾದಾರ ಚೆನ್ನ, ಕೀಳು ಓಹಿಲದೇವ, ಕೀಳು ಉದ್ಭಟಯ್ಯ ಕೀಳಿಂಗಲ್ಲದೆ ಹಯನು ಕರೆಯದು ನೋಡಾ ರಾಮನಾಥ ಎನ್ನುವ ಮೂಲಕ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯನವರು ಜಾತಿ ಕುಲದಲ್ಲಿ ಕೀಳಲ್ಲ, ಇವರು ಶಿವನಿಗೆ ಅಮೃತವನುಣಬಡಿಸಿದವರು ಎಂದಿದ್ದಾನೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಕಕ್ಕಯ್ಯನನ್ನು ಕೊಂಡಾಡಿದ್ದಾರೆ. ಭಕ್ತಿಯಿಲ್ಲದ ಬಡವ ನಾನಯ್ಯ; ಕಕ್ಕಯ್ಯನ ಮನೆಯಲ್ಲೂ ಬೇಡಿದೆ; ಚೆನ್ನಯ್ಯನ ಮನೆಯಲ್ಲೂ ಬೇಡಿದೆ; ದಾಸಯ್ಯನ ಮನೆಯಲ್ಲೂ ಬೇಡಿದೆ; ಎಲ್ಲಾ ಪುರಾತನರು ನೆರೆದು ಭಕ್ತಿಯ ಭಿಕ್ಷೆಯನ್ನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು ನೋಡಾ ಕೂಡಲಸಂಗಮದೇವಾ ಎಂದಿದ್ದಾರೆ. ಇನ್ನೊಂದು ವಚನದಲ್ಲಿ ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ; ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯಾ, ಅಣ್ಣನು ನಮ್ಮ ಕಿನ್ನರಿ ಬ್ರಹ್ಮಯ್ಯ ಎನ್ನನೇತಕ್ಕರಿಯಿರಿ ಕೂಡಲಸಂಗಯ್ಯ ಎನ್ನುವ ಮೂಲಕ ಚೆನ್ನಯ್ಯ, ಕಕ್ಕಯ್ಯ, ಬ್ರಹ್ಮಯ್ಯ ಮುಂತಾದವರ ಕುಲಕ್ಕೆ ಅಂಟಿದ್ದ ಕೀಳೆಂಬ ಸೂತಕವನ್ನು ಕಳೆದು ಹಿರಿದಾಗಿಸಿದ ಸಾಮಾಜಿಕ ಕ್ರಾಂತಿಯ ನೇತಾರನಾಗಿದ್ದಾನೆ. ಶರಣ ವೈದ್ಯ ಸಂಗಣ್ಣನು ಕಕ್ಕಯ್ಯನಿಗೆ ಕಾಮಧೇನು ಎಂದು ಸಾರಿ ಕಕ್ಕಯ್ಯನ ಶರಣ ಧರ್ಮವು ಕಾಮಧೇನು ಆಗಿತ್ತು ಎಂದಿದ್ದಾನೆ. ಇದೇ ರೀತಿ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಚೆನ್ನಬಸವಣ್ಣ ಮುಂತಾದ ಶರಣರು ಕಕ್ಕಯ್ಯನನ್ನು ತಮ್ಮ ವಚನಗಳಲ್ಲಿ ಸ್ತುತಿಸಿದ್ದಾರೆ.

**ಡೋಹರ ಕಕ್ಕಯ್ಯನವರ ವಚನಗಳು :** ವಚನಗಳ ರಚನೆ ಶರಣ ಧರ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ. ಅನುಭವ ಮಂಟಪ ಎಂಬ ವಿಶ್ವದ ಪ್ರಥಮ ಬಯಲು ಸಂಸತ್ತು ಶಿವಶರಣರ ಚಿಂತನಾ ಅನುಭಾವದ ವೇದಿಕೆಯಾಗಿತ್ತು. ಕಕ್ಕಯ್ಯನವರೂ ಈ ಚಿಂತನಾ ಗೋಷ್ಠಿಗಳಲ್ಲಿ ಭಾಗವಹಿಸಿ, ತಮ್ಮ ವಿಚಾರಧಾರೆಗಳನ್ನು ಮಂಡಿಸಿದ್ದರು. ಗುರು- ಲಿಂಗ-ಜಂಗಮ, ಕಾಯಕ ದಾಸೋಹದ ಪಾವಿತ್ರ್ಯತೆಯನ್ನು ಧಾರ್ಮಿಕ-ಸಾಮಾಜಿಕ ಸಮಾನತೆಯನ್ನು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಅಭಿನವ ಮಲ್ಲಿಕಾರ್ಜುನ ಎಂಬ ನಾಮಾಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಇದುವರೆಗೂ ಒಂಭತ್ತು ವಚನಗಳು ದೊರೆತಿವೆ. ಹುಟ್ಟಿದ ಕೀಳು ಜಾತಿ ಎಂಬ ಸೂತಕವ ಕಳೆದು ಲಿಂಗದೀಕ್ಷೆಯ ಶರಣ ಧರ್ಮದ ಸಮಾನತೆಯನ್ನು ಡೋಹರ ಕಕ್ಕಯ್ಯ ತನ್ನ ವಚನಗಳಲ್ಲಿ ಕೊಂಡಾಡಿದ್ದಾನೆ.

ಎನ್ನ ಕಷ್ಟಕುಲದಲ್ಲಿ ಹುಟ್ಟಿಸಿದೆಯಯ್ಯಾ, ಎಲೆ ಲಿಂಗ ತಂದೆ. ಕೆಟ್ಟೆನಯ್ಯಾ, ನಿಮ್ಮ ಮುಟ್ಟಿಯೂ ಮುಟ್ಟದಿಹನೆಂದು, ಎನ್ನ ಕೈ ಮುಟ್ಟದಿರ್ದಡೆ ಮನಃ ಮುಟ್ಟಲಾಗದೇ? ಅಭಿನವ ಮಲ್ಲಿಕಾರ್ಜುನಾ ಎಂದಿದ್ದಾನೆ. ಆಸೆಯಾಮಿಷವಳಿದು, ಹುಸಿ ವಿಷಯಂಗಳೆಲ್ಲಾ ಇಂಗಿ, ಸಂಶಯ ಸಂಬಂಧ ನಿಸ್ಸಂಬಂಧ ವಾಯಿತಯ್ಯಾ, ಎನ್ನ ಮನದೊಳಗೆ ಘನ ಪರಿಣಾಮವ ಕಂಡು ಮನ ಮಗ್ನವಾಯಿತ್ತಯ್ಯಾ. ಅಭಿನವ ಮಲ್ಲಿಕಾರ್ಜುನಾ, ಪ್ರಭುದೇವರ ಕರಣದಿಂದಾನು ಬದುಕಿದೆನು. ಎಂದು ಹೇಳುವ ಮೂಲಕ ಶರಣ ಸಂಕುಲ ತನ್ನನ್ನು ಎತ್ತಿಕೊಂಡು ಮುದ್ದಾಡಿ, ಶರಣ ಶ್ರೇಷ್ಠ ಮಹಾನುಭಾವಿ, ಮಹಾಪ್ರಸಾದಿ ಸ್ಥಲ ನೀಡಿ ಉನ್ನತಿಗೇರಿಸಿದ ಪರಿಯನ್ನು ಕೊಂಡಾಡಿದ್ದಾನೆ. ಇಂತಹ ಸಾಮಾಜಿಕ ಪರಿವರ್ತನೆ ಪ್ರಪಂಚದ ಶ್ರೇಷ್ಠ ಪ್ರಾಯೋಗಿಕ ಚಳುವಳಿ ಯಾಗಿದೆ. ತನ್ನ ಇನ್ನೊಂದು ವಚನದಲ್ಲಿ ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತು. ತಟ್ಟಿದ ಮುಟ್ಟಿದ ಸುಖಂಗಳನೆಲ್ಲವ ಲಿಂಗ ಮುಖಕ್ಕೆ, ಅರ್ಪಿಸಿದೆನಾಗಿ ಎನ್ನ ಪಂಚೇಂದ್ರಿಯಗಳು ಬಯಲಾದವು. ಎನ್ನಂತರಂಗದಲ್ಲಿ ಜ್ಞಾನ ಜ್ಯೋತಿಯೆಡೆಗೊಂಡುದಾಗಿ, ಒಳಗೂ ಬಯಲಾಗಿತ್ತು: ಸಂಸಾರದ ಸಂಗದ ಅವಸ್ಥೆಯ ಮೀರಿದ ಕ್ರೀಯೆಯಲ್ಲಿ ತರಹರ ವಾಯಿತ್ತಾಗಿ ಬಹಿರಂಗ ಬಯಲಾಗಿತ್ತು ಅಭಿನವ ಮಲ್ಲಿಕಾರ್ಜುನಾ, ನಿಮ್ಮ ಮುಟ್ಟಿದ ಕಾರಣ ನಾನೂ ಬಯಲಾದೆ. ಎಂದೆನ್ನುವ ಶರಣ ಕಕ್ಕಯ್ಯ, ಶರಣ ಧರ್ಮ ದೀಕ್ಷೆ, ಲಿಂಗ ದೀಕ್ಷೆ ಪಡೆದು ಮಹಾತ್ಮನೆನಿಸಿಕೊಂಡಿದ್ದಾನೆ. ಆದ್ದರಿಂದಲೇ ಬಸವಣ್ಣ ನವರು ಡೋಹರ ನೆಂಬೆನೆ ಕಕ್ಕಯ್ಯನ ಎಂದು ಉದ್ಧರಿಸಿ ತಲುಪಿದ ಶರಣ ಧರ್ಮದ ಧಾರ್ಮಿಕ ಅಧ್ಯಾತ್ಮಿಕ ಶಿಖರವನ್ನು ಕೊಂಡಾಡಿದ್ದಾರೆ.



- ಪ್ರೊ. ಡಾ. ಮಲ್ಲಿಕಾರ್ಜುನ ಜವಳಿ, ದಾವಣಗೆರೆ.
94818 71936

# ಜನ ವಸತಿ ಪ್ರದೇಶಕ್ಕೆ ನುಗ್ಗುವ ಆನೆಗಳಿಗೆ ಅಂಕುಶ

## ಭದ್ರಾ ಕಾನನದಲ್ಲಿ ಪುಂಡಾನೆ ಧಾಮ ನಿರ್ಮಾಣ : ಸಚಿವ ಈಶ್ವರ ಖಂಡ್ರೆ

ಬೆಂಗಳೂರು,ಫೆ.25- ಅರಣ್ಯ ತೊರೆದು ಜನ ವಸತಿ ಪ್ರದೇಶಕ್ಕೆ ನುಗ್ಗುತ್ತಿರುವ ಕೆಲವು ಪುಂಡಾನೆಗಳಿಗಾಗಿ ಭದ್ರಾ ಕಾನನದಲ್ಲಿ ಆನೆ ಧಾಮ ನಿರ್ಮಿಸುವುದಾಗಿ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 150ಕ್ಕೂ ಹೆಚ್ಚು ಆನೆಗಳು ಕಾಡಿನಿಂದ ಹೊರಬಂದು ಮಾನವ ಸಂಘರ್ಷಕ್ಕೆ ಕಾರಣವಾಗುತ್ತಿವೆ, ಅಂತಹ ಆನೆಗಳನ್ನು ಗುರುತಿಸಿದ್ದು ಮಿನಿ ಖೆಡ್ಡಾ ಮೂಲಕ ಬಂಧಿಸಿ ಆನೆ ಧಾಮಕ್ಕೆ ರವಾನಿಸಲಾಗುವುದು ಎಂದರು.

ಭದ್ರಾ ಅರಣ್ಯ ಪ್ರದೇಶದ 2,000 ಹೆಕ್ಟೇರ್‌ನಲ್ಲಿ ಧಾಮ ನಿರ್ಮಾಣಕ್ಕೆ ತೀರ್ಮಾನಿಸಲಾಗಿದೆ, ಇಲ್ಲಿ ಆನೆಗಳಿಗೆ ಅಗತ್ಯ ಆಹಾರ, ನೀರು ಲಭ್ಯವಾಗುವಂತೆ ನೋಡಿಕೊಳ್ಳಲಾಗುವುದು.

ಚಾಮರಾಜನಗರ, ಮೈಸೂರು, ಕೊಡಗು, ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಬೆಳಗಾವಿ ಸೇರಿದಂತೆ ಅರಣ್ಯ ಪ್ರದೇಶಗಳಿಂದ ಹೊರಬಂದು ಜನ ವಸತಿಗಳಿಗೆ ಲಗ್ಗೆ ಇಟ್ಟು ಮನುಷ್ಯರ ಪ್ರಾಣ ತೆಗೆಯುತ್ತಿವೆ.

ಕಳೆದ ಎರಡು ದಿನಗಳಲ್ಲಿ ಆನೆಗಳಿಗೆ ಮೂರು ಜನ ಬಲಿಯಾಗಿದ್ದಾರೆ, ಮೃತರ ಹತ್ತಿರದ ಸಂಬಂಧಿಕರಿಗೆ ಕೂಡಲೇ ಪರಿಹಾರದ ಮೊತ್ತ ನೀಡಲು ಸೂಚಿಸಲಾಗಿದೆ.

ಕಾಡಿನಿಂದ ಆನೆ ಬರದಂತೆ ಹಲವು ಯೋಜನೆಗಳನ್ನು ರೂಪಿಸಿದರೂ ಪೂರ್ಣ ಪ್ರಮಾಣದಲ್ಲಿ ತಡೆಯಲು ಸಾಧ್ಯವಾಗುತ್ತಿಲ್ಲ.

ಕಾಡಂಚಿನ ಜನರು ಅರಣ್ಯ ಇಲಾಖೆ ನೀಡುವ ಆನೆಗಳ ಚಲನವಲನದ ಬಗೆಗಿನ ಮುನ್ನೆಚ್ಚರಿಕೆಗೆ ಸ್ಪಂದಿಸಬೇಕು, ಎಲ್ಲ ದುರ್ಘಟನೆಗಳು ಬೆಳಗಿನ ಮತ್ತು ಸಂಜೆ ವೇಳೆ ಸಂಭವಿಸುತ್ತಿದ್ದು, ಜಾಗರೂಕರಾಗಿರಬೇಕು.

ಆನೆ-ಮಾನವ ಸಂಘರ್ಷ, ವನ್ಯಜೀವಿ-ಮಾನವ ಸಂಘರ್ಷ ಇಂದಿನ ಸಮಸ್ಯೆಯಲ್ಲ, ಸಾವಿರಾರು ವರ್ಷಗಳಿಂದಲೂ ಇದೆ, ಒಂದೆಡೆ ಅರಣ್ಯ ಪ್ರದೇಶ ಕ್ಷೀಣಿಸುತ್ತಿದೆ, ಮತ್ತೊಂದೆಡೆ ವನ್ಯಜೀವಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಮಸ್ಯೆ ಉಲ್ಬಣವಾಗಲು ಕಾರಣವಾಗಿದೆ.

ವನ್ಯಜೀವಿ-ಮಾನವ ಸಂಘರ್ಷ ತಡೆಗೆ ಟೆಂಟಕಲ್ ಫೆನ್ಸಿಂಗ್, ಸೌರ ಬೇಲಿ, ಆನೆ ಕಂದಕ ನಿರ್ಮಿಸಿ, ರೈಲ್ವೆ ಬ್ಯಾರಿಕೇಡ್‌ಗಳನ್ನೂ ಹಾಕಲಾಗುತ್ತಿದೆ.

2024-25ನೇ ಸಾಲಿನಲ್ಲಿ 78.917 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಕಾಮಗಾರಿ ಪೂರ್ಣಗೊಂಡಿದೆ, 41.87 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿದೆ, ಇನ್ನೂ 103 ಕಿ.ಮೀ. ಗುರಿ ನಿಗದಿ ಮಾಡಲಾಗಿದ್ದು, ಮಾರ್ಚ್ 31ರೊಳಗೆ ಕೆಲಸ ಆರಂಭವಾಗಲಿದೆ.

ದೇಶದಲ್ಲಿಯೇ ಅತಿ ಹೆಚ್ಚು ಅಂದರೆ, 6,395 ಆನೆಗಳು ಕರ್ನಾಟಕದಲ್ಲಿವೆ, ಪುಂಡಾನೆ ಹಾವಳಿ ತಡೆಗೆ ಮಾರ್ಗೋಪಾಯ ಕಂಡುಹಿಡಿಯಲು ನೆರೆ ರಾಜ್ಯಗಳ ಸಚಿವರೊಂದಿಗೆ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಸಮಾವೇಶವನ್ನೂ ನಡೆಸಲಾಗಿದೆ, ತಜ್ಞರ ಸಮಿತಿ ರಚಿಸಿ ಅಧ್ಯಯನ ನಡೆಸಲಾಗುತ್ತಿದೆ, ಆನೆ ಕಾರ್ಯಪಡೆಯನ್ನೂ ರಚಿಸಲಾಗಿದೆ.

ಕಾಡಂಚಿನಲ್ಲಿ ಕೃಷಿ ಚಟುವಟಿಕೆ, ಕೆರೆಗಳನ್ನು ತುಂಬಿಸುವ ಕಾರ್ಯಗಳಿಂದಾಗಿ ಬಾಳೆ, ಹಲಸು, ಭತ್ತ ಇತ್ಯಾದಿ ಫಸಲು ತಿನ್ನಲು ಮತ್ತು ನೀರು ಕುಡಿಯಲು ಆನೆಗಳು ಊರಿಗೆ ಬರುತ್ತಿವೆ ಎಂಬುದು ತಜ್ಞರ ಅಭಿಪ್ರಾಯ.

ಮಾನವ-ಆನೆ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದರು.

# ಉಕ್ರೇನ್ ದಾಳಿಯ ಮೂರನೇ ವರ್ಷದಲ್ಲಿ ರಷ್ಯಾದಿಂದ 49 ಶತಕೋಟಿ ಯೂರೋ ತೈಲ ಆಮದು

ನವದೆಹಲಿ, ಫೆ. 25 - ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸಿದ ಮೂರನೇ ವರ್ಷದಲ್ಲಿ ರಷ್ಯಾದಿಂದ ಭಾರತ 49 ಶತಕೋಟಿ ಯೂರೋ ಮೌಲ್ಯದ ಕಚ್ಚಾತೈಲ ಆಮದು ಮಾಡಿಕೊಂಡಿದೆ. ಭಾರತ ವಿಶ್ವದ ಮೂರನೇ ಅತಿ ದೊಡ್ಡ ತೈಲ ಆಮದು ದೇಶವಾಗಿದೆ.

ಭಾರತ ಈ ಹಿಂದೆ ಪ್ರಮುಖವಾಗಿ ಮಧ್ಯ ಪ್ರಾಚ್ಯದಿಂದ ತೈಲ ಆಮದು ಮಾಡಿಕೊಳ್ಳುತ್ತಿತ್ತು. 2022 ರಲ್ಲಿ ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸಿದ ನಂತರ, ಆ ದೇಶದಿಂದ ತೈಲ ಆಮದು ಹೆಚ್ಚಾಗಿದೆ. ಉಕ್ರೇನ್ ಮೇಲೆ ಸಮರ ಸಾರಿದ ಹಿನ್ನೆಲೆಯಲ್ಲಿ ರಷ್ಯಾ ಮೇಲೆ ಪಾಶ್ಚಾತ್ಯ ದೇಶಗಳು ನಿರ್ಬಂಧ ಹೇರಿದ್ದವು. ಇದರಿಂದಾಗಿ ರಷ್ಯಾ ಕಡಿಮೆ ದರದಲ್ಲಿ ತೈಲ ಪೂರೈಕೆ ಆರಂಭಿಸಿತ್ತು. ಇದರ ಲಾಭ ಭಾರತಕ್ಕೆ ದೊರೆತಿತ್ತು.

ಯುದ್ಧ ಆರಂಭಕ್ಕೆ ಮುಂಚೆ ರಷ್ಯಾದಿಂದ ಭಾರತ ಆಮದು ಮಾಡಿಕೊಳ್ಳುತ್ತಿದ್ದ ತೈಲದ ಪ್ರಮಾಣ ಕೇವಲ ಶೇ.1ರಷ್ಟಿತ್ತು. ಆದರೆ ಯುದ್ಧ ಆರಂಭವಾದ ಒಂದು ಹಂತದಲ್ಲಿ ಭಾರತ ತನ್ನ ಅಗತ್ಯದ ಶೇ. 40ರಷ್ಟು ತೈಲವನ್ನು ರಷ್ಯಾದಿಂದ ಪಡೆದಿತ್ತು.

ಯುದ್ಧ ಆರಂಭವಾದ ಮೂರನೇ ವರ್ಷದಲ್ಲಿ ರಷ್ಯಾದಿಂದ ಭಾರತ 49 ಶತಕೋಟಿ ಯೂರೋ ಮೌಲ್ಯದ ತೈಲ ಆಮದು ಮಾಡಿಕೊಂಡಿದೆ. ಈ ವರ್ಷ ರಷ್ಯಾದಿಂದ ಚೀನಾ 78 ಶತಕೋಟಿ ಯೂರೋ ಹಾಗೂ ಟರ್ಕಿ 34 ಶತಕೋಟಿ ಯೂರೋ ಕಚ್ಚಾ ತೈಲ ಆಮದು ಮಾಡಿಕೊಂಡಿವೆ. ಈ ಮೂರು ದೇಶಗಳ ಆಮದು, ರಷ್ಯಾ ತೈಲ ರಫ್ತಿನಿಂದ ಪಡೆದ ಒಟ್ಟು ಆದಾಯದ ಶೇ.74ರಷ್ಟು ಎಂದು ಸೆಂಟರ್ ಫಾರ್ ರಿಸರ್ಚ್ ಆನ್ ಎನರ್ಜಿ ಅಂಡ್ ಕ್ಲೀನ್ ಏರ್ ಸಂಸ್ಥೆಯ ವರದಿ ತಿಳಿಸಿದೆ.

ಯುದ್ಧ ಆರಂಭಿಸಿದ ಮೂರನೇ ವರ್ಷ ಕಚ್ಚಾ ತೈಲದ ರಫ್ತಿನಿಂದ ರಷ್ಯಾ ಒಟ್ಟಾರೆ 242 ಶತಕೋಟಿ ಯೂರೋ ಆದಾಯ ಪಡೆದಿತ್ತು. ಯುದ್ಧ ಆರಂಭವಾದ ನಂತರ ಕಚ್ಚಾ ತೈಲ ರಫ್ತಿನಿಂದ ರಷ್ಯಾ 847 ಶತಕೋಟಿ ಯೂರೋ ಆದಾಯ ಪಡೆದಿದೆ.

ಭಾರತದ ಕೆಲ ತೈಲ ಸಂಸ್ಕರಣಾ ಘಟಕಗಳು ರಷ್ಯಾದಿಂದ ಪಡೆದ ತೈಲವನ್ನು ಪೆಟ್ರೋಲ್ ಹಾಗೂ ಡೀಸೆಲ್ ಆಗಿ ಪರಿವರ್ತಿಸಿ ಯುರೋಪ್ ಮತ್ತು ಇತರೆ ಜಿ7 ದೇಶಗಳಿಗೆ ಕಳಿಸಿದ್ದವು.

ಭಾರತ ಮತ್ತು ಟರ್ಕಿಯ ಆರು ಸಂಸ್ಕರಣ ಘಟಕಗಳಿಂದ ಜಿ7 ದೇಶಗಳು ಸುಮಾರು 18 ಶತಕೋಟಿ ಯೂರೋ ಮೌಲ್ಯದ ತೈಲ ಉತ್ಪನ್ನಗಳನ್ನು ಆಮದು ಮಾಡಿಕೊಂಡಿವೆ.

ಇದರಲ್ಲಿ 9 ಶತಕೋಟಿ ಯೂರೋ ಮೌಲ್ಯದ ತೈಲ ರಷ್ಯಾದ ಮೂಲದ್ದಾಗಿದೆ ಎಂದು ವರದಿ ತಿಳಿಸಿದೆ.

# ಕಂಡಕ್ಟರ್ ಮೇಲಿನ ಪೋಕ್ಸೋ ಪ್ರಕರಣ ಹಿಂದಕ್ಕೆ

(1ನೇ ಪುಟದಿಂದ) ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು.

ಈ ನಡುವೆ ಬಾಲಕಿಯ ತಾಯಿ ವಿಡಿಯೋ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದು, ತಮ್ಮ ಮಗ ಹಾಗೂ ಮಗಳು ಆಸ್ಪತ್ರೆಗೆ ಭೇಟಿ ನೀಡಿ ಬೆಳಗಾವಿಯಿಂದ ಬಾಳೆಕುಂದ್ರಿಗೆ ಬರುವಾಗ ಈ ಘಟನೆ ನಡೆದಿದೆ. ಟಿಕೆಟ್ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಘಟನೆಯನ್ನು ಕನ್ನಡ ಹಾಗೂ ಮರಾಠಿ ವಿಷಯ ಎಂದು ಸುಳ್ಳು ಸುದ್ದಿ ಹರಡಲಾಗಿದೆ ಎಂದಿದ್ದಾರೆ.

ಇದರಿಂದಾಗಿ ಕರ್ನಾಟಕ ಹಾಗೂ ಮಹಾರಾಷ್ಟ್ರದ ನಡುವೆ ಜಗಳ ಆರಂಭವಾಗಿರುವುದು ನೋಡಿ ಬೇಸರವಾಗಿದೆ. ಆದರೆ ನಾವೂ ಕನ್ನಡಿಗರೇ ಆಗಿದ್ದೇವೆ, ನಮ್ಮ ಭಾಷೆ ಮಾತ್ರ ಮರಾಠಿ. ಈಗ ಉಂಟಾಗಿರುವ ವಾತಾವರಣ ನೋಡಿ ಪ್ರಕರಣ ವಾಪಸ್ ಪಡೆಯಲು ನಿರ್ಧರಿಸಿದ್ದೇವೆ ಎಂದಿದ್ದಾರೆ.

ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಬೇಕು. ದೂರು ವಾಪಸ್ ಪಡೆಯುವ ಬಗ್ಗೆ ಯಾವುದೇ ಒತ್ತಡ ಇಲ್ಲ. ನಾವು ಸ್ವಇಚ್ಛೆಯಿಂದ ದೂರು ವಾಪಸ್ ಪಡೆಯುತ್ತಿದ್ದೇವೆ ಎಂದು ವಿಡಿಯೋ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಮಾತನಾಡಿರುವ ಬೆಳಗಾವಿ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್, ಮಾಧ್ಯಮಗಳ ಮೂಲಕ ವಿಡಿಯೋ ಹೇಳಿಕೆ ನೋಡಿದ್ದೇನೆ. ಆದರೆ ಯುವತಿಯ ಕುಟುಂಬದವರು ಇನ್ನೂ ಪೊಲೀಸರ ಬಳಿ ಬಂದಿಲ್ಲ ಎಂದಿದ್ದಾರೆ.

ಮೊದಲು ಅವರು ಪೊಲೀಸ್ ಠಾಣೆಯಲ್ಲಿ ಹೇಳಿಕೆ ದಾಖಲಿಸಬೇಕು. ಪ್ರಕರಣ ಅಂತ್ಯಗೊಳಿಸುವ ಬಗ್ಗೆ ಕೆಲ ಪ್ರಕ್ರಿಯೆಗಳನ್ನು ಪಾಲಿಸಬೇಕಿದೆ. ಹೇಳಿಕೆ ದಾಖಲಿಸಿಕೊಂಡ ನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ.

ಬಸ್ ಕಂಡಕ್ಟರ್ ಮೇಲೆ ಹಲ್ಲೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿಕೊಳ್ಳಲು ವಿಳಂಬ ಮಾಡಿದ ಕಾರಣಕ್ಕಾಗಿ ಮಾರಿಹಾಳ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರನ್ನು ವರ್ಗಾವಣೆ ಮಾಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಗೃಹ ಸಚಿವ ಜಿ. ಪರಮೇಶ್ವರ್, ಬಸ್ ಚಾಲಕನ ವಿರುದ್ಧ ಪೋಕ್ಸೋ ಪ್ರಕರಣ ಏಕೆ ದಾಖಲಾಯಿತು ಎಂಬ ಬಗ್ಗೆ ಪರಿಶೀಲಿಸಲು ತಿಳಿಸಿದ್ದೇನೆ ಎಂದಿದ್ದಾರೆ.

# ಶಿಕ್ಷಕರನ್ನು ಕೂಡಿ ಹಾಕಿದ ವಿದ್ಯಾರ್ಥಿಗಳು

(1ನೇ ಪುಟದಿಂದ) ಅರ್ಧ ಗಂಟೆ ಕಾಲ ಹಲವಾರು ಶಿಕ್ಷಕರನ್ನು ಕೂಡಿ ಹಾಕಲಾಗಿತ್ತು. ವಿದ್ಯಾರ್ಥಿಗಳು ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದ್ದರು. ಕಾಲೇಜಿನ ಉದ್ಯೋಗಿಯೊಬ್ಬರು ಕಿಟಕಿಯಲ್ಲಿ ತೋರಿಸಿಕೊಂಡು ಹೊರಬಂದು ಬಾಗಿಲು ತೆರೆದಾಗ ಶಿಕ್ಷಕರು ಹೊರಬರಲು ಸಾಧ್ಯವಾಗಿದೆ.

ಕಾಲೇಜಿನ ಪ್ರಾಂಶುಪಾಲರಾದ ಡಾ. ಅನಾಮಿಕ ಜೈನ್ ಅವರು ಈ ಬಗ್ಗೆ ದೂರು ದಾಖಲಿಸಿದ್ದಾರೆ. ವಿಷಯ ಗಂಭೀರವಾಗಿದೆ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆಶಿಶ್ ಸಿಂಗ್ ಹೇಳಿದ್ದಾರೆ.

133 ವರ್ಷಗಳ ಹಿಂದೆ ಇಂದೋರ್‌ನಲ್ಲಿ ಹೋಳ್ಕರ್ ರಾಜವಂಶಸ್ಥರು ಆಡಳಿತ ನಡೆಸುತ್ತಿರುವಾಗ ಈ ಕಾಲೇಜು ಸ್ಥಾಪಿಸಲಾಗಿತ್ತು. ಕಾಲೇಜಿನಲ್ಲಿ ವಿದ್ಯಾರ್ಥಿಗಳು 'ಹೋಳ್ಕರ್ ಕಾ ಹೋಲಿ ಫೆಸ್ಟಿವಲ್' ನಡೆಸಲು ಯೋಜಿಸಿದ್ದರು. ಮಾರ್ಚ್ 7ರಂದು ನಡೆಯುವ ಹೋಳಿ ಕಾರ್ಯಕ್ರಮದ ಪ್ರವೇಶಕ್ಕೆ 150 ರೂ. ಶುಲ್ಕ ನಿಗದಿಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಿ.ಜೆ. ಹಾಗೂ ಮಳೆ ಕುಣಿತಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಕಾಲೇಜಿನ ಆಡಳಿತ ಮಂಡಳಿ ಹೋಳಿ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಿತ್ತು. ಆದರೂ ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಈ ಕುರಿತ ಪೋಸ್ಟರ್‌ಗಳನ್ನು ಅಂಟಿಸಿದ್ದರು.

# ಎಂಇಎಸ್ ಪುಂಡಾಟಿಕೆಗೆ ಆಕ್ರೋಶ

(1ನೇ ಪುಟದಿಂದ) ಯಶಸ್ವಿಯಾದರು. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ನಾರಾಯಣಗೌಡ, ಕಂಡಕ್ಟರ್ ಮೇಲೆ ಹಲ್ಲೆ ಮಾಡಿದವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಕರ್ನಾಟಕದಿಂದ ಗಡೀ ಪಾರು ಮಾಡಬೇಕು ಎಂದು ಆಗ್ರಹಿಸಿದರು. ಮಹಾಜನ್ ವರದಿ ಪ್ರಕಾರ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎನ್ನುವುದು ತೀರ್ಮಾನವಾಗಿದೆ. ಆದಾಗ್ಯೂ, ಎಂಇಎಸ್ ಪುಂಡರು, ಮರಾಠಿ, ಮಹಾರಾಷ್ಟ್ರ ಮುಂದಿಟ್ಟುಕೊಂಡು ಕನ್ನಡಿಗರ ಮೇಲೆ ಹಲ್ಲೆ, ದೌರ್ಜನ್ಯ ಮಾಡುತ್ತಿದ್ದಾರೆ.ಶಿವಸೇನೆ ಕಿತ್ತೋದ ಶಿವಸೇನೆ. ಶಿವ ಹೆಸರು ಯಾಕೆ ಇಟ್ಟುಕೊಂಡಿದ್ದೀರಿ, ಮಹಾರಾಷ್ಟ್ರದ ಗೂಂಡಾ ಸೇನೆ ಎಂದು ಹೆಸರು ಇಟ್ಟುಕೊಳ್ಳಿ ಎಂದು ವಾಗ್ದಾಳಿ ನಡೆಸಿದ ಅವರು, ಗೂಂಡಾಗಳಿಗೆ ಇಲ್ಲಿಂದಲೇ ಉತ್ತರ ಕೊಡಬೇಕು ಎಂದು ಬಂದಿದ್ದೇವೆ. ಪುಂಡಾಟಕ್ಕೆ ಕೊನೆ ಆಗಬೇಕು. ಪುಂಡರನ್ನು ಗೂಂಡಾ ಕಾಯ್ದೆ ಹಾಕಿ ಬಂಧಿಸಿ ಜೈಲಿಗೆ ಕಳುಹಿಸಿ ಎಂದು ಒತ್ತಾಯಿಸಿದರು.

# ನಿಗೂಢ ರೋಗ ಕಾಂಗೋದಲ್ಲಿ ಸಾವು

(1ನೇ ಪುಟದಿಂದ) ಜನರು ಸಾವನ್ನಪ್ಪಿದ್ದಾರೆ. ಬೊಲೊಕೊ ನಗರದಲ್ಲಿ ಬಾವಲಿ ತಿಂದಿದ್ದ ಮೂವರು ಮಕ್ಕಳು ತೀವ್ರ ಜ್ವರಕ್ಕೆ ಸಿಲುಕಿದ್ದರು. 48 ಗಂಟೆಗಳಲ್ಲಿ ಅವರ ಸಾವು ಸಂಭವಿಸಿತ್ತು. ನಂತರದಲ್ಲಿ ಈ ರೋಗ ಹರಡಿದೆ ಎಂದು ವಿಶ್ವ ಆರೋಗ್ಯ ಸಂಘಟನೆಯ ಆಫ್ರಿಕಾ ಕಚೇರಿ ತಿಳಿಸಿದೆ.

ವನ್ಯಜೀವಿಗಳನ್ನು ಸೇವನೆ ಮಾಡುವ ಪ್ರದೇಶದಲ್ಲಿ ಪ್ರಾಣಿಗಳಿಂದ ಮನುಷ್ಯರಿಗೆ ರೋಗಗಳು ಹರಡುವ ಬಗ್ಗೆ ಹಿಂದಿನಿಂದಲೂ ಕಳವಳಗಳು ಇವೆ. ಕಳೆದ ದಶಕದಲ್ಲಿ ಈ ರೀತಿಯ ಸೋಂಕು ಹರಡುವಿಕೆ ಶೇ.60ರಷ್ಟು ಹೆಚ್ಚಾಗಿದೆ ಎಂದು ವಿಶ್ವ ಆರೋಗ್ಯ ಸಂಘಟನೆ 2022 ರಲ್ಲಿ ತಿಳಿಸಿತ್ತು. ಬೊಮಟೆ ಎಂಬ ನಗರದಲ್ಲಿ ಫೆಬ್ರವರಿ 9 ರಿಂದ ಈ ನಿಗೂಢ ರೋಗ ಕಾಣಿಸಿಕೊಂಡಿತ್ತು. 13 ಪ್ರಕರಣಗಳಲ್ಲಿ ಮಾದರಿಗಳನ್ನು ಪರೀಕ್ಷೆಗೆ ಕಳಿಸಲಾಗಿದೆ. ಆದರೆ ಎಬೋಲ ಮತ್ತು ಇತರೆ ಸಾಮಾನ್ಯ ಸೋಂಕುಗಳ ಸುಳಿವು ಕಂಡುಬಂದಿಲ್ಲ ಎಂದು ವಿಶ್ವ ಆರೋಗ್ಯ ಸಂಘಟನೆ ಹೇಳಿದೆ.

# ಕೆಟಿಜೆ ನಗರದಲ್ಲಿ ಇಂದು ಶಿವರಾತ್ರಿ ಪೂಜೆ

ಕೆಟಿಜೆ ನಗರ 10 ನೇ ಕ್ರಾಸ್‌ನಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಸಂಜೆ 7 ಗಂಟೆಗೆ ವಿಶೇಷ ಪೂಜೆ, ಜಾಗರಣೆ, ಫಲಹಾರ ಇರುತ್ತದೆ ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆಪಿಸಿಸಿ ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

**ಬೇಕಾಗಿದ್ದಾರೆ**
**ಬೋಂದಾಡೆ ಎಂಟರ್‌ಪ್ರೈಸಸ್**
ಟ್ಯಾಲಿ, ಅಕೌಂಟೆಂಟ್ ಕೆಲಸಕ್ಕೆ 2 ವರ್ಷ ಅನುಭವವುಳ್ಳ ಮಹಿಳೆ ಬೇಕಾಗಿದ್ದಾರೆ.
ಸ್ಥಳ : 1334/1, ಹದಡಿ ರಸ್ತೆ, ತರಳಬಾಳು ಬಡಾವಣೆ, ದಾವಣಗೆರೆ 577005
98869 77879, 98865 08965

**ಮನೆ ಬಾಡಿಗೆಗಿದೆ**
1 BHK, 2ನೇ ಮಹಡಿಯಲ್ಲಿ ಪೂರ್ವದಿಕ್ಕಿನ ಮನೆ ಬಾಡಿಗೆಗೆ ಇದೆ. ಶ್ರೀ ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 3ನೇ ಮೇನ್, ದಾವಣಗೆರೆ.
9480778709, 9448923704

**ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ, ಡಾಲರ್ಸ್ ಕಾಲೋನಿ, ಕುಂದುವಾಡ, ಹೂಡಿಕೆ ಸೈಟುಗಳು ಮತ್ತು ಯರಗುಂಟೆಯಲ್ಲಿ ಹೂಡಿಕೆ ಸೈಟುಗಳು 30x40, 30x50, 40x60 ಎಲ್ಲಾ ಫ್ಲಾಟುಗಳು ದಾವಣಗೆರೆಯಲ್ಲಿವೆ.
097315 12365

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಸಿಕ್ ಕಂಪ್ಯೂಟರ್ ಆಗಿರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿಳಾಸ : ಎಸ್.ಡಿ. ಫೋಟೋ ಸ್ಟುಡಿಯೋ ಕೃಷ್ಣ ಕಾಂಪ್ಲೆಕ್ಸ್, ಹಳೇ ಬಸ್ ನಿಲ್ದಾಣದ ಎದುರುಗಡೆ, ದುರ್ಗಾಂಬ ಟ್ರಾವೆಲ್ಸ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.
ಮೊ : 98449 05344

**ಬೇಕಾಗಿದ್ದಾರೆ**
ಹೋಟೇಲ್ ಉದ್ಯಮದಲ್ಲಿ ಅನುಭವ ಇರುವ ಮ್ಯಾನೇಜರ್ ಮತ್ತು ರೊಟ್ಟಿ ಮಾಡುವ ಮಹಿಳೆಯರು ಕ್ಲೀನಿಂಗ್ ಮಾಡಲು, ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಕೆಲಸಕ್ಕೆ ಬೇಕಾಗಿದ್ದಾರೆ**
ಡಿಜಿಟಲ್ ಆ್ಯಡ್ ಏಜೆನ್ಸಿಯಲ್ಲಿ ಫೀಲ್ಡ್ ವರ್ಕ್ ನಿರ್ವಹಿಸಲು MBA, BBM ಅಥವಾ B.Com ವಿದ್ಯಾರ್ಹತೆ ವುಳ್ಳವರು ಕನ್ನಡ ಮತ್ತು ಇಂಗ್ಲಿಷ್ ಭಾಷೆ ಸುಲಲಿತವಾಗಿ ಮಾತನಾಡುವಂತವರು ಸಂಪರ್ಕಿಸಿ :
94498 30566

**ಬೇಕಾಗಿದ್ದಾರೆ**
ವುಡ್ ಸಿಎನ್‌ಸಿ ಮಷೀನ್ ಆಪರೇಟರ್ ಬೇಕಾಗಿದ್ದಾರೆ
97429 97555

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆ ಡೋ. ನಂ. 200, (ಆನಂದ ಭವನ) ಹಿಂಭಾಗ ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
98444 04790

**ಹಾಸ್ಪಿಟಲ್ ಸ್ಟಾಫ್ ಬೇಕಾಗಿದ್ದಾರೆ**
ಲೇಡಿ ಫಾರ್ಮಾಸಿಸ್ಟ್ - 2, ಅಕೌಂಟೆಂಟ್ - 1
ಯಾವುದೇ ಪದವೀಧರರು
**ದೊಡ್ಡಮನೆ ಮೆಡಿಕಲ್ಸ್**
2ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರಸ್ತೆ,
78298 08443, 97427 62462

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
95130 15544

**ಬೇಕಾಗಿದ್ದಾರೆ**
ನಮ್ಮ ಶೋರೂಂನಲ್ಲಿ ಸೇಲ್ಸ್ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ. ಪರಿಚಯದೊಂದಿಗೆ ಸಂಪರ್ಕಿಸಿ :
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರೋಡ್, ದಾವಣಗೆರೆ 577001

**WANTED**
Trainee CNC Operators , Diploma Mechanical Engineers, ITI Fitters Trade, Design Engg. Marketing Engineers,
**Brancs India Tools Pvt Ltd**, 27,Karur Industrial Area, Davangere. Contact No.
92436 19672, 97395 65940

**CARS FOR SALE**
Maruthi Alto Lxi
Hyundai I20 New
Swift Dzire TOUR
Contact : **Daivik Iynahalli**
99456 43223

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ - ಪಿಯುಸಿ / SSLC
ಸ್ವವಿವರದೊಂದಿಗೆ ಸಂಪರ್ಕಿಸಿ
**ಎ.ಕೆ. ಟ್ರೇಡರ್ಸ್**
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮನೆ ಬಾಡಿಗೆಗೆ ಇದೆ**
2 ಅಟ್ಯಾಚ್ಡ್ ಬೆಡ್ ರೂಂ, ವಿಶಾಲವಾದ ಹಾಲ್, ವಾಸ್ತು ಪ್ರಕಾರ ದೇವರಮನೆ, ಅಡುಗೆಮನೆ ಇದ್ದು, ಬೋರ್ ವೆಲ್ ಮತ್ತು ಕಾರ್ ಪಾರ್ಕಿಂಗ್ ಸೌಲಭ್ಯವಿರುವ ನೆಲ ಮಹಡಿ ಮನೆ (ಸಿಂಗಲ್ ಹೌಸ್) ಬಾಡಿಗೆಗೆ ಇದೆ. ಮನೆ ವಿಳಾಸ: ನಂ.57/2008, 20ನೇ ಕ್ರಾಸ್ (ಬೈಪಾಸ್ ಸರ್ವೀಸ್ ರಸ್ತೆ ಪಕ್ಕದ ರಸ್ತೆ), ತರಳಬಾಳು ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
73490 34256

**FLAT FOR LEASE**
3 BHK, Sqft :1888
**AM Apartment**
**Nainika Prime Rose**
Vidyanagar last city bus stop Davanagere.
89519 38228, 80502 22181

**REQUIRED**
**SUPERVISOR**
MALE - Minimum Age 30-40 years.
**Degree Pass / Fail**
Walkin : (Working hours 9.45 AM to 7.45 PM)
**SMS STEEL TRADERS**
K.R. Road, Davanagere.
98800 64464, 96636 68784

**ಹುಡುಗರು ಬೇಕಾಗಿದ್ದಾರೆ**
**ಅಮೂಲ್ ಐಸ್‌ಕ್ರೀಮ್**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.ಬಾಯ್ಸ್ ಹಾಸ್ಟೆಲ್ ಎದುರು, ಅನಂತ ಭವನ ಹತ್ತಿರ, ದಾವಣಗೆರೆ.
78920 82256

**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**WANTED**
1. Tele Callers 04 Vacancy
2. Computer Operators - 04
3. Lecturers PCMB - 08
4. Commerce Lect. - 08
5. Arts Lect. - 08
6. Marketing Executives - 05
7. College Bus Drivers - 02
**Interview Date:01.03.2025 @10am**
Location: Lokikere Main Road, Industrial Area, Davanagere.
**Salary From 1 Lakh to 3.6 Lakhs per annum**
**SAMRUDDHI ACADEMY**
81472-62361, 96202-62361

**CHANGE OF NAME**
**I MANSOOR ALI S/O BASHA SAB** aged about 42 years, resident of #C027, Beturu road, 4th Cross, Karl Marks Nagara, Davangere. In my Aadhar Card, Pan Card my name is mentioned as **MANSOOR ALI** and in my Passport my name mentioned as **MANSUR ALI.** I corrected my name as **MANSOOR ALI** vide affidavit dated 18.02.2025 sworn before Notary Davangere. Henceforth all my transactions & dealings will be in my new name **MANSOOR ALI**

**ಮನೆ ಬಾಡಿಗೆಗೆ ಇದೆ**
#21, ಹೊಸ ಮಹಡಿ ಮನೆ ಬಾಡಿಗೆಗಿದೆ ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, 5ನೇ ಕ್ರಾಸ್, ದಾವಣಗೆರೆ.
99012 47050
72040 22829

**VJ MAKEUP STUDIO & ACADEMY**
SS Layout, Near Bapuji MBA College, Davanagere. 35 ದಿನಗಳಲ್ಲಿ ಮೇಕಪ್ ತರಬೇತಿ ನೀಡಲಾಗುವುದು. Contact :
96865 91896
Insta@makeoverby_Vijayajagadeesh
Classes Starts in March

**ಮನೆ ಬಾಡಿಗೆಗೆ**
ವಿನಾಯಕ ಬಡಾವಣೆ 2ನೇ ಕ್ರಾಸ್‌ನಲ್ಲಿ ಮೊದಲನೆ ಮಹಡಿಯಲ್ಲಿ 2BHK ಸುಸಜ್ಜಿತವಾದ ಮನೆ ಬಾಡಿಗೆ ಇದೆ. (Apartment)
94498 30566

**TUITIONS**
CBSE / ICSE Boards
Class 8th, 9th, 10th
**CRASH COURSES FOR**
NEET / CET / IIT - JEE
PUC I / PUC II / PCMB
*NEET Long Term / Supplementary Exams*
97398 65711, 94822 44114

**AdBlue / DEF**
**available with Best Quality & Price for All BS6 Diesel**
**Commercial & Passanger Vehicles**
Visit: **Best Lubricants**
Opp. to New Pvt Bus Stand PB Road, Davangere.
73380 33337

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

## ನಗರದಿಂದ ಇಂದು ಕುರುವತ್ತಿಗೆ ಪಾದಯಾತ್ರೆ

ಚೌಕಿಪೇಟೆಯ ಕುರುವತ್ತಿ ಶ್ರೀ ಬಸವೇಶ್ವರ ಸ್ವಾಮಿ ಪಾದಯಾತ್ರೆ ಸೇವಾ ಸಮಿತಿ ವತಿಯಿಂದ ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿಯಲ್ಲಿ ನಾಡಿದ್ದು ದಿನಾಂಕ 28 ರ ಶುಕ್ರವಾರ ಸಂಜೆ 4.30 ಕ್ಕೆ ಜರುಗುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ಇಂದು ರಾತ್ರಿ 8 ಗಂಟೆಗೆ 21 ನೇ ವರ್ಷದ ಪಾದಯಾತ್ರಿಗಳಿಗೆ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಮಿತಿ ಸಹ ಸಂಚಾಲಕ ಶಿವಾನಂದಪ್ಪ ಬೆನ್ನೂರು ತಿಳಿಸಿದ್ದಾರೆ.

ಕೋಡಿಯಾಲ ಹೊಸಪೇಟೆಯ ಅವಿಮುಕ್ತ ತಪೋಕ್ಷೇತ್ರ ಪುಣ್ಯಕೋಟಿ ಮಠದ ಬಾಲಯೋಗಿ ಶ್ರೀ ಜಗದೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶ್ರೀ ಕುರುವತ್ತಿ ಬಸವೇಶ್ವರ ಪಾದಯಾತ್ರೆ ಸೇವಾ ಸಮಿತಿ ಅಧ್ಯಕ್ಷ ಎನ್. ಬಕ್ಕೇಶ್ ಅಭಿಕಾಟನ್ ಇವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಉಪಮೇಯರ್ ಸೋಗಿ ಶಾಂತಕುಮಾರ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ದೂಡಾ ಸದಸ್ಯೆ ಎಂ.ಆರ್. ವಾಣಿ, ಮಾಳಗೇರ ಎಂ.ಕೆ. ಬಸವರಾಜಪ್ಪ, ಕುರುವತ್ತಿ ಶ್ರೀ ಬಸವೇಶ್ವರ ಪಾದಯಾತ್ರೆ ಸೇವಾ ಸಮಿಯ ಅಧ್ಯಕ್ಷ ಕೆ.ಎ. ಸತ್ಯನಾರಾಯಣ, ಉಪಾಧ್ಯಕ್ಷ ಮಹಾಂತೇಶ್ ಒಣರೊಟ್ಟಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಇಂದು ಶಿವರಾತ್ರಿ



ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಮಹಾಶಿವರಾತ್ರಿ ಪ್ರಯುಕ್ತ ಇಂದು ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ.

ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಪಾದಯಾತ್ರೆ ಟ್ರಸ್ಟ್ ಇವರು ಸೇವಾಕರ್ತರಾಗಿದ್ದಾರೆ ಎಂದು ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂ ಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಜ್ಯೋತಿರ್ಲಿಂಗಗಳ ಬೈಕ್ ರ್‍ಯಾಲಿ

**(1ನೇ ಪುಟದಿಂದ)** ರಾಜಯೋಗ ಶಿಕ್ಷಕರುಗಳಾದ ಬ್ರಹ್ಮಾಕುಮಾರಿ ಶೋಭಾಜಿ, ಬ್ರಹ್ಮಾಕುಮಾರಿ ಶಾಂತಾಜಿ ಮತ್ತಿತರರು ವಹಿಸಿದ್ದರು.

ಇಂಜಿನಿಯರ್ ನಾಗೇಂದ್ರಪ್ಪ, ಲೆಕ್ಕ ಪರಿಶೋಧಕ ಪ್ರಭುದೇವ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಸೀತಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿಂದಿ ಶಿಕ್ಷಕ ರಾಜಣ್ಣ, ನಿವೃತ್ತ ಇಂಜಿನಿಯರ್ ಕಲ್ಲಪ್ಪ, ನಿವೃತ್ತ ಶಿಕ್ಷಕ ಗುಡ್ಡಪ್ಪ ಮತ್ತಿತರರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

**ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ :** ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬ್ರಹ್ಮಾ ಕುಮಾರೀಸ್ ಸಂಸ್ಥೆಯ ಶಿವಧ್ಯಾನ ಮಂದಿರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ ಕಾರ್ಯಕ್ರಮವನ್ನು ಈಗಾಗಲೇ ಆರಂಭಿಸಲಾಗಿದ್ದು, ಇದೇ ದಿನಾಂಕ 28 ರವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ರಾತ್ರಿ 8 ರವರೆಗೆ ಸಾರ್ವಜನಿಕರು ಉಚಿತವಾಗಿ ವೀಕ್ಷಿಸಬಹುದು.

**ಇಂದು ವಿಶ್ವ ಸದ್ಭಾವನಾ ಶಾಂತಿಯಾತ್ರೆ :** ಶಿವರಾತ್ರಿಯಂದು 108 ಶಿವಲಿಂಗಗಳೊಂದಿಗೆ ವಿಶ್ವ ಸದ್ಭಾವನಾ ಶಾಂತಿಯಾತ್ರೆ ಏರ್ಪಡಾಗಿದೆ. ಅಂದು ಸಂಜೆ 4 ಗಂಟೆಗೆ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಿಂದ ಆರಂಭಗೊಳ್ಳುವ ಸದ್ಭಾವನಾ ಶಾಂತಿಯಾತ್ರೆಯು ರಾಜಬೀದಿಗಳಲ್ಲಿ ಸಂಚರಿಸಲಿದೆ.

ನಂತರ ಸಂಜೆ 6.30ಕ್ಕೆ ಶಿವಧ್ಯಾನ ಮಂದಿರದಲ್ಲಿ ಶಿವ ಧ್ವಜಾರೋಹಣ ಮತ್ತು ಶಿವಧ್ಯಾನ ಕಾರ್ಯಕ್ರಮಗಳು ನಡೆಯಲಿವೆ.

**ರಾಜಯೋಗ ಶಿಬಿರ :** ಶಿವರಾತ್ರಿ ಪ್ರಯುಕ್ತ ಇದೇ ದಿನಾಂಕ 27 ರಿಂದ ಮಾರ್ಚ್ 1ರವರೆಗೆ ಮೂರು ದಿನಗಳ ಕಾಲ ರಾಜಯೋಗ ಶಿಬಿರವನ್ನು ಆಯೋಜಿಸ ಲಾಗಿದ್ದು, ಶಿವಧ್ಯಾನ ಮಂದಿರ ಮತ್ತು ಪಿ.ಜೆ. ಬಡಾವಣೆ 8ನೇ ಮುಖ್ಯರಸ್ತೆ - ಬ್ರಹ್ಮಾ ಕುಮಾರೀಸ್ ರಸ್ತೆಯಲ್ಲಿರುವ ಬ್ರಹ್ಮಾಕುಮಾ ರೀಸ್ ಸಂಸ್ಥೆಯಲ್ಲಿ ಪ್ರತಿದಿನ ಬೆಳಿಗ್ಗೆ 7.30 ರಿಂದ 8.30, ಸಂಜೆ 7 ರಿಂದ 8ರವರೆಗೆ ಒಂದು ಗಂಟೆ ಕಾಲ ಶಿಬಿರ ನಡೆಯಲಿದೆ.

## ಗೈನ್‌ಬಿಟ್‌ಕಾಯಿನ್ ಹಗರಣ : ದಾಳಿ

**(1ನೇ ಪುಟದಿಂದ)** ಆರಂಭಿಸಲಾಗಿತ್ತು. ವರಿಯಾಬ್ಲೆಟೆಕ್ ಪಿಟಿಇ ಎಂಬ ಕಂಪನಿ ಹೆಸರಿನಲ್ಲಿ ಹೂಡಿಕೆದಾರರಿಂದ ಹಣ ಪಡೆಯಲಾಗುತ್ತಿತ್ತು.

ತಮ್ಮಲ್ಲಿ ಹಣ ಹೂಡಿಕೆ ಮಾಡಿದರೆ ಪ್ರತಿ ತಿಂಗಳಿಗೆ ಶೇಕಡಾ 10ರಷ್ಟು ಲಾಭವನ್ನು ಬಿಟ್‌ಕಾಯಿನ್ ಮೂಲಕ ನೀಡಲಾಗುವುದು ಎಂದು ತಿಳಿಸಲಾಗಿತ್ತು. ಆರಂಭದ ದಿನಗಳಲ್ಲಿ ಹೂಡಿಕೆ ಮಾಡಿದವರಿಗೆ ಬಿಟ್‌ಕಾಯಿನ್ ಸ್ವರೂಪದಲ್ಲಿ ಹಣ ನೀಡಲಾಗುತ್ತಿತ್ತು. ಆದರೆ 2018ರಲ್ಲಿ ಇಡೀ ಯೋಜನೆ ಕುಸಿಯಲು ಆರಂಭಿಸಿತು. ನಂತರ ವಂಚಕರು ಗೇನ್‌ಬಿಟ್‌ಕಾಯಿನ್ ಎಂಬ ಕ್ರಿಪ್ಟೋ ಕರೆನ್ಸಿಯನ್ನು ತಾವೇ ರೂಪಿಸಿ ಜನರಿಗೆ ನೀಡುತ್ತಿದ್ದರು. ಆದರೆ, ಇದರ ಮೌಲ್ಯ ಬಿಟ್‌ಕಾಯಿನ್‌ಗಿಂತ ಕಡಿಮೆ ಇರುತ್ತಿತ್ತು. ಈ ಹಗರಣಕ್ಕೆ ಸಂಬಂಧಿಸಿದಂತೆ ದೇಶಾದ್ಯಂತ ಹಲವೆಡೆ ಎಫ್‌ಐಆರ್‌ಗಳನ್ನು ದಾಖಲಿಸಲಾಗಿತ್ತು. ನಂತರ ಸುಪ್ರೀಂ ಕೋರ್ಟ್ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿತ್ತು.

### ಓದುಗರ ಪತ್ರ

## ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಯವರಲ್ಲಿ ಮನವಿ

**ಮಾನ್ಯರೇ,**

ಬೇಸಿಗೆಯ ತಾಪ ಪ್ರಜ್ವಲಿಸುವ ಈ ಸಮಯದಲ್ಲಿ ಅರ್ಧ ಹೆಲ್ಮೆಟ್ ನಿಷೇಧ ಎಷ್ಟು ಸರಿ? ಈ ಹಿಂದೆ ಜಿಲ್ಲೆಯಲ್ಲಿ ಬೇಸಿಗೆ ಸಮಯಕ್ಕೆ ಹೆಲ್ಮೆಟ್ ಕಡ್ಡಾಯ ರಿಯಾಯಿತಿ ನೀಡಿದ ಉದಾಹರಣೆ ಇದೆ. ಆದರೆ ಈ ಬಾರಿ ಅರ್ಧ ಹೆಲ್ಮೆಟ್ ನಿಷೇಧ ಸರಿಯೇ.

ದಯವಿಟ್ಟು ಬಿರು ಬಿಸಿಲ ಸಮಯದಲ್ಲಿ ಕನಿಷ್ಟ ಅರ್ಧ ಹೆಲ್ಮೆಟ್ ಕಡ್ಡಾಯ ಮಾಡಿ. ಆದರೆ ಪೂರ್ಣ ಹೆಲ್ಮೆಟ್ ಕಡ್ಡಾಯ ಮಾಡಿದರೆ ಜನ ಸಾಮಾನ್ಯರಿಗೆ ತೊಂದರೆಯಾಗುವ ಸಾಧ್ಯತೆಗಳೇ ಹೆಚ್ಚು.

ಕಾರಣ ಜನ ಸಾಮಾನ್ಯರು ಈಗ ಐಎಸ್‌ಐ ಮಾರ್ಕಿನ ಹೆಲ್ಮೆಟ್ ಖರೀದಿ ಮಾಡಲು ಹೋದರೆ ಮಾರಾಟಗಾರರು ಬೆಲೆ ಏರಿಕೆ ಮಾಡಿ ಜನರ ಜೇಬಿಗೆ ಭಾರ ಮಾಡುತ್ತಾರೆ. ಅಲ್ಲದೆ ಬೇಡಿಕೆಗೆ ಅಭಾವ ಸೃಷ್ಟಿಸಿ ಜನರ ಸಮಯ, ಹಣ ಪೋಲಾಗುವಂತೆ ಮಾಡುತ್ತಾರೆ. ಕಾರಣ, ಸಾಮಾನ್ಯ ಜನರಿಗೆ ಅನುಕೂಲ ಮಾಡುವಂತೆ ನಿಮ್ಮಲ್ಲಿ ವಿನಂತಿಸುತ್ತೇನೆ.

ಪುಂಡರ ಹಾವಳಿ ಹೆಚ್ಚಾಗಿದೆ. ಕಾಲೇಜುಗಳಿರುವ ಸ್ಥಳಗಳಲ್ಲಿ ಅಪ್ರಾಪ್ತ ಮಕ್ಕಳ ಬೈಕ್ ಸವಾರಿ ಜೋರಾಗಿದೆ. ಮೂರು ಜನರು ಪ್ರಯಾಣಿಸುವುದು, ಅಡ್ಡಾದಿಡ್ಡಿ ರಸ್ತೆಯಲ್ಲಿ ಹೋಡಾಡುವುದು ಸೈಲನ್ಸರ್ ರಹಿತ ಪ್ರಯಾಣ, ಕರ್ಕಶ ಶಬ್ಧ, ಅತಿವೇಗ, ಎಲ್ಲದರ ಮೇಲೆ ನಿಯಂತ್ರಣ ತನ್ನಿ. ಕಾಲೇಜುಗಳ ಬಳಿ ನಿಂತಿರುವ ಎಲ್ಲಾ ಮಕ್ಕಳಿಗೆ ಮನವರಿಕೆ ಮಾಡುವ ಮೂಲಕ ಸಮಯಾವಕಾಶ ನೀಡಿ ನಂತರ ಪೋಷಕರಿಗೆ ದಂಡ ವಿಧಿಸುವ ಕಾರ್ಯ ನಡೆದರೆ ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಪೋಷಕರು ಮಕ್ಕಳಿಗೆ ವಾಹನ ನೀಡದಿರುವ ನಿರೀಕ್ಷೆ ಮಾಡಬಹುದು.

**- ಮಾಗನೂರು ಮಂಜಪ್ಪ, ದಾವಣಗೆರೆ.**

# ದಿವ್ಯಾಂಗರಿಗೆ ಸರ್ಕಾರದಿಂದ ಸೂಕ್ತ ಅವಕಾಶ : ಜಿಲ್ಲಾಧಿಕಾರಿ



ದಾವಣಗೆರೆ, ಫೆ.25- ದಿವ್ಯಾಂಗರಿಗೆ ತಮ್ಮ ಜೀವನದಲ್ಲಿ ಶಕ್ತಿ ಮತ್ತು ಧೈರ್ಯವನ್ನು ಹೊಂದಿ ಆತ್ಮವಿಶ್ವಾಸದಿಂದ ಬದುಕಲು ಸರ್ಕಾರ ಎಲ್ಲಾ ರೀತಿಯ ಅವಕಾಶಗಳನ್ನು ಕಲ್ಪಿಸಿದೆ. ದಿವ್ಯಾಂಗರು ಸಾಮಾನ್ಯ ಜನರಂತೆ ಬದುಕು ನಡೆಸಬೇಕು ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ಹೇಳಿದರು.

ದಿವ್ಯಾಂಗರ ಕೌಶಲ್ಯಾಭಿವೃದ್ಧಿ ಪುನರ್ವಸತಿ ಮತ್ತು ಸಬಲೀಕರಣದ ಸಂಯುಕ್ತ ಪ್ರಾದೇಶಿಕ ಕೇಂದ್ರದ ವತಿಯಿಂದ ನಗರದ ಪ್ರಾದೇಶಿಕ ಕೇಂದ್ರದಲ್ಲಿ ಅಂಗನವಾಡಿ ಶಿಕ್ಷಕರಿಗಾಗಿ ಪೂರ್ವಭಾವಿ ಮಧ್ಯಸ್ಥಿಕೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ, ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಸಿಆರ್‌ಸಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಪ್ರತಿಷ್ಠಿತ ಸಂಸ್ಥೆಯಾಗಿದೆ. ದಿವ್ಯಾಂಗ ವ್ಯಕ್ತಿಗಳ ಕಲ್ಯಾಣಕ್ಕಾಗಿ ಭಾರತ ಸರ್ಕಾರದ ವತಿಯಿಂದ ಸ್ಥಾಪಿಸಲ್ಪಟ್ಟ ಸಿಆರ್‌ಸಿ, 21 ವಿಧದ ದಿವ್ಯಾಂಗರ ಮತ್ತು ಜನರ ಅಗತ್ಯತೆಗಳನ್ನು ನೋಡಿಕೊಳ್ಳುತ್ತಿದೆ. ಅಂಗವಾಡಿ ಶಿಕ್ಷಕರಾಗಿರುವ ನೀವು ಪ್ರಸವಪೂರ್ವ ಮತ್ತು ನಂತರದ ಆರೈಕೆಗಾಗಿ ನಿಕಟವಾಗಿ ಕೆಲಸ ಮಾಡುತ್ತಿರುವುದನ್ನು ಅವರು ಶ್ಲಾಘಿಸಿದರು.

ಮಕ್ಕಳು ಯಾವುದೇ ರೀತಿಯ ದಿವ್ಯಾಂಗತೆಗೆ ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಸಹಾಯದ ಅಗತ್ಯವಿರುವ ಹಿರಿಯ ನಾಗರಿಕರು ಸೂಕ್ತ ಸಹಾಯ ಹಾಗೂ ಪ್ರಯೋಜನ ಪಡೆಯಲು ಸಿಆರ್‌ಸಿಗೆ ಭೇಟಿ ನೀಡುವಂತೆ ಅವರಿಗೆ ತಿಳಿಸಬೇಕು ಎಂದರು.

ಮಗುವಿನ ಚಿಕ್ಕ ವಯಸ್ಸಿನಲ್ಲಿ ಯಾವುದೇ ಅಂಗವೈಕಲ್ಯವನ್ನು ಗುರುತಿಸಿದರೆ, ಅದನ್ನು ಗುಣಪಡಿಸಬಹುದು ಮತ್ತು ಸಿಆರ್‌ಸಿಯು ಅವರನ್ನು ಸಾಮಾನ್ಯ ಸ್ಥಿತಿಗೆ ತರಲು ಶ್ರಮಿಸುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಅವರು ಅಂಗನವಾಡಿ ಶಿಕ್ಷಕರಿಗೆ ಆರಂಭಿಕ ಮಧ್ಯಸ್ಥಿಕೆ ಜಾಗೃತಿ ಮೂಡಿಸುವ ಕಿಟ್‌ಗಳ ವಿತರಣೆ ಹಾಗೂ ವಿವಿಧ ದಿವ್ಯಾಂಗರಿಗೆ 120 ಸಹಾಯಕ ಸಾಧನಗಳನ್ನು ವಿತರಿಸಲಾಯಿತು.

ಸಿಆರ್‌ಸಿ ನಿರ್ದೇಶಕರಾದ ಮೀನಾಕ್ಷಿ ಮಾತ ನಾಡಿ, ಬಿಪಿಎಲ್ ವರ್ಗದವರಿಗೆ ಮತ್ತು ಹಿರಿಯ ನಾಗರಿಕರಿಗೆ ವಿಕಲಚೇತನರಿಗೆ ಅಗತ್ಯವಿರುವ ಎಲ್ಲಾ ಸಹಾಯ ಮತ್ತು ಉಪಕರಣಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಿಆರ್‌ಸಿ ಆಡಳಿತಾಧಿಕಾರಿ ವೈ.ಶ್ರೀನಾಥ್ ಮತ್ತು ಇತರರು ಭಾಗವಹಿಸಿದ್ದರು.

## ಭಗವಾನ್ ಶಿವಮಂತ್ರ ದೀಕ್ಷಾ, ಧ್ಯಾನ

ದಾವಣಗೆರೆ, ಫೆ. 24- ನಗರದ ಓಂ ಚಂಡಿಕಾ ಸೇವಾ ಟ್ರಸ್ಟ್ ನಿಂದ ಮಹಾಶಿವರಾತ್ರಿ ಪ್ರಯುಕ್ತ ಇದೇ ದಿನಾಂಕ 28 ರಂದು ಸಂಜೆ 6 ಗಂಟೆಗೆ ಭಗತ್‌ಸಿಂಗ್ ನಗರದ ಓಂ ಚಂಡಿಕಾಶ್ರಮದಲ್ಲಿ ಭಗವಾನ್ ಶಿವಮಂತ್ರ ದೀಕ್ಷಾ ಮತ್ತು ಧ್ಯಾನ ಕುರಿತ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಅಘೋರಿ ಚಿದಂಬರ ಯೋಗಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9380389236.

## ಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಶಿವರಾತ್ರಿ



ಅಶೋಕ ಚಿತ್ರಮಂದಿರದ ಬಳಿ ಇರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ರುದ್ರಾಭಿಷೇಕ ಮತ್ತು ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವು ಇಂದಿನಿಂದ ಮಾರ್ಚ್ 2ರವರೆಗೆ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ. ಆಸಕ್ತರು ಭಾಗವಹಿಸುವಂತೆ ಅರ್ಚನ (97385-72318) ಮತ್ತು ಪುಷ್ಪ (90367-19573) ತಿಳಿಸಿದ್ದಾರೆ.

## ನಗರದ ಜಾಲಿನಗರದ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿಂದು - ನಾಳೆ ಶಿವರಾತ್ರಿ



ಹಳೆಜಾಲಿನಗರ, 1ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಶ್ರೀ ಗುರು ರೇವಣಸಿದ್ದೇಶ್ವರ ಮಠದಲ್ಲಿ ಇಂದು ಬೆಳಿಗ್ಗೆ 5 ಗಂಟೆಗೆ ಶ್ರೀ ಸ್ವಾಮಿಗೆ ಬ್ರಾಹ್ಮೀ ಮುಹೂರ್ತದಲ್ಲಿ ರುದ್ರಾಭಿಷೇಕ, ನವಗ್ರಹ ಪೂಜೆ, ಬಿಲ್ವಾರ್ಚನೆ, ಮುತ್ತೈದೆಯರಿಗೆ ಉಡಿ ತುಂಬುವುದು ಹಾಗೂ ಗಂಗಾಪೂಜೆ ಇರುತ್ತದೆ. ಸಂಜೆ 6 ಗಂಟೆಯಿಂದ ಜಾಗರಣೆ ಇದೆ.

ನಾಳೆ ಗುರುವಾರ ಮಧ್ಯಾಹ್ನ 12.30 ಗಂಟೆಗೆ ಅನ್ನ ಸಂತರ್ಪಣೆ ಇರುತ್ತದೆ. ಸಕಲ ಭಕ್ತಾದಿಗಳು, ಅನ್ನ ಸಂತರ್ಪಣೆಗೆ ಅಕ್ಕಿ, ಬೆಲ್ಲ, ಗೋಧಿ ನುಚ್ಚು, ಬೇಳೆ, ಇನ್ನಿತರೆ ದವಸ-ಧಾನ್ಯಗಳನ್ನು ನೀಡಬೇಕೆಂದು ಮಠದ ಪುರೋಹಿತ ವಿ.ಜಿ. ಗಿರೀಶ್ ಸ್ವಾಮಿಗಳು (99456 24512) ಕೋರಿದ್ದಾರೆ.

## ಹರಿಹರ ಗೃಹ ನಿರ್ಮಾಣ ಸಹಕಾರ ಸಂಘದ ಚುನಾವಣೆ : ಅಧ್ಯಕ್ಷ - ಉಪಾಧ್ಯಕ್ಷರ ಆಯ್ಕೆ




ಹರಿಹರ, ಫೆ.25- ಹರಿಹರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತದ ಆವರಣದಲ್ಲಿ ಇಂದು ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ, ಅಧ್ಯಕ್ಷ ಸ್ಥಾನಕ್ಕೆ ಅಂಬಾಸಾ ಮೆಹರ್ವಾಡೆ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಗೀತಾಬಾಯಿ ಭೂತೆ ಮಾತ್ರ ನಾಮಪತ್ರವನ್ನು ಸಲ್ಲಿಸಿದ್ದರಿಂದ, ಅಧ್ಯಕ್ಷರಾಗಿ ಅಂಬಾಸಾ ಮೆಹರ್ವಾಡೆ, ಉಪಾಧ್ಯಕ್ಷರಾಗಿ ಶ್ರೀಮತಿ ಗೀತಾಬಾಯಿ ಭೂತೆ ಅವರುಗಳ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಹೆಚ್.ಸುನೀತ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ವಿಶ್ವನಾಥ್ ಭೂತೆ, ಹೆಚ್ ಹರಿಯಪ್ಪ, ಮೆಸಾಕ್, ಎನ್.ಎಂ.ರಾಜು, ಅಂಬಾಸಾ ಎನ್.ಕೆ. ಶ್ರೀಮತಿ ಎಂ. ಸ್ವಾತಿ, ನಾಗೋಸಾ ಜಿ ಮೆಹರ್ವಾಡೆ ಸಂಘದ ಕಾರ್ಯದರ್ಶಿ ಬಸವರಾಜ್ ಭಂಡಾರಿ, ಸಿಬ್ಬಂದಿ ಆದರ್ಶ ಇತರರು ಹಾಜರಿದ್ದರು.

## ನಗರದ ಕೂಡಲಿ ಶಂಕರ ಮಠದಲ್ಲಿ ಇಂದು ರುದ್ರಾಭಿಷೇಕ

ಶ್ರೀ ಜಯದೇವ ವೃತ್ತ, ಕೂಡಲಿ ಶಂಕರ ಮಠದಲಿ ಶಿವರಾತ್ರಿ ಅಂಗವಾಗಿ ಇಂದು ಸಂಜೆ 6ರಿಂದ ನಾಡಿದ್ದು ಬೆಳಗ್ಗೆ 6ರವರೆಗೆ ಅಖಂಡ ರುದ್ರಾಭಿಷೇಕ ನಡೆಯಲಿದೆ. ನಾಳೆ ಬೆಳಿಗ್ಗೆ ಲೋಕಕಲ್ಯಾಣ ಅರ್ಥವಾಗಿ ರುದ್ರ ಹೋಮ ಹಾಗೂ ಪ್ರಸಾದ ವಿನಿಯೋಗ ಇರುತ್ತದೆ. 12.30ಕ್ಕೆ ಮಹಾಪೂರ್ಣಾಹುತಿ ಪ್ರಸಾದ ವಿನಿಯೋಗವಿರುತ್ತದೆ.

## ಇಂದು ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಹಣ್ಣು-ಹಂಪಲಿನ ಪ್ರಸಾದ ವಿನಿಯೋಗ



ದಾವಣಗೆರೆ : ಪಿ.ಜೆ. ಬಡಾವಣೆ, 6ನೇ ಮೇನ್, 6ನೇ ಕ್ರಾಸ್‌ನಲ್ಲಿರುವ ಶ್ರೀ ಚೌಡೇಶ್ವರಿ ದೇವಿ ಸೇವಾ ಸಮಿತಿಯಿಂದ ಬುಧವಾರ ಮಹಾಶಿವರಾತ್ರಿ ಪ್ರಯುಕ್ತ ಸಂಜೆ 8ರವರೆಗೆ ಹಣ್ಣು-ಹಂಪಲಿನ ಪ್ರಸಾದ ವಿನಿಯೋಗ ಇರುತ್ತದೆ.

## ನಿಟುವಳ್ಳಿ ಈಶ್ವರ ದೇವಸ್ಥಾನದಲ್ಲಿ ಪೂಜೆ

ಶಿವರಾತ್ರಿ ಪ್ರಯುಕ್ತ ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಬಳಿ ಇರುವ ಶ್ರೀ ಈಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ 6 ಗಂಟೆಗೆ ವಿಶೇಷ ಪೂಜೆ ಮತ್ತು ಸಂಜೆ 7 ಗಂಟೆಗೆ ವಿಶೇಷ ಅಲಂಕಾರ ಪೂಜೆ, ಜಾಗರಣೆ, ಫಲಹಾರ ಮತ್ತು ರಾತ್ರಿ 10 ಗಂಟೆಗೆ ಭಜನೆ ಕಾರ್ಯಕ್ರಮ ನಡೆಯಲಿದೆ. ನಾಳೆ ಗುರುವಾರ ಬೆಳಿಗ್ಗೆ 9 ಗಂಟೆಗೆ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ.

## ನಗರದ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ

ವಿನೋಬನಗರ 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ ಹತ್ತಿರವಿರುವ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಬೆಳಗಿನ ಜಾವ 6 ರಿಂದ ಸಂಜೆ ರುದ್ರಾಭಿಷೇಕ ಮತ್ತು ಪಂಚಾಮೃತ ಅಭಿಷೇಕಗಳು ನೆರವೇರಲಿವೆ ಎಂದು ಮಂಜುನಾಥ್ ಬಿ. ತಿಳಿಸಿದ್ದಾರೆ.

## ಜಯನಗರದಲ್ಲಿ ಇಂದು ಶಿವರಾತ್ರಿ

ಜಯನಗರದಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಇಂದು ಮತ್ತು ನಾಳೆ ಶಿವರಾತ್ರಿ ಕಾರ್ಯಕ್ರಮ ನಡೆಯಲಿದೆ. ಇಂದು ಬೆಳಿಗ್ಗೆ ವಿಶೇಷ ಪೂಜೆಗಳು, ಶ್ರೀ ಗಣೇಶ, ಶ್ರೀ ಶಿವಲಿಂಗ, ಶ್ರೀ ನಂದಿ ಮೂರ್ತಿಗಳ ಪ್ರತಿಷ್ಠಾಪನೆ, ಅಶ್ವತ್ಥ ಕಟ್ಟೆ, ದೀಕ್ಷೆ ಕಾರ್ಯಕ್ರಮಗಳು ಜರುಗಲಿವೆ.

## ನಗರದಲ್ಲಿ ಇಂದು ಭಕ್ತಿ ಮಂಜರಿ

ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿರುವ ಶಿವ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಪ್ರಯುಕ್ತ ಬಾಪೂಜಿ ಇಂಜಿನಿಯರಿಂಗ್ ಕಾಲೇಜು ವತಿಯಿಂದ ಹಿನ್ನೆಲೆ ಗಾಯಕಿಯೂ ಆಗಿರುವ ನಟಿ ಅರ್ಚನ ಉಡುಪ ಅವರಿಂದ ಇಂದು ಸಂಜೆ 7.30ಕ್ಕೆ ಭಕ್ತಿ ಮಂಜರಿ ಕಾರ್ಯಕ್ರಮ ನಡೆಯಲಿದೆ.

## ರಾಣೇಬೆನ್ನೂರಿನಲ್ಲಿ ಆರೋಗ್ಯ ತಪಾಸಣೆ

ರಾಣೇಬೆನ್ನೂರು, ಫೆ.25- ದಾವಣಗೆರೆಯ ಎಸ್. ಎಸ್. ಕೇರ್ ಟ್ರಸ್ಟ್, ರಾಣೇಬೆನ್ನೂರು ರೋಟರಿ ಹಾಗೂ ವರ್ತಕರ ಸಂಘಗಳ ಸಂಯುಕ್ತವಾಗಿ ಉಚಿತ ಆರೋಗ್ಯ ತಪಾಸಣೆ, ಚಿಕಿತ್ಸೆ ಹಾಗೂ ಔಷಧಿ ವಿತರಣೆ ಕಾರ್ಯಕ್ರಮವನ್ನು ಮಾರ್ಚ್ 4ರಂದು ಇಲ್ಲಿನ ರೈಲ್ವೆ ಸ್ಟೇಷನ್ ರಸ್ತೆಯ ವರ್ತಕರ ಸಂಘದಲ್ಲಿ ಆಯೋಜಿಸಲಾಗಿದೆ.

## ಲಾಕರ್ ನಲ್ಲಿ ಇಟ್ಟಿದ್ದ 7.43 ಲಕ್ಷ ಕಳವು

ದಾವಣಗೆರೆ, ಫೆ.25- ನಾರಾಯಣ ಹೃದಯಾಲಯದ ಆಸ್ಪತ್ರೆ ಲಾಕರ್ ನಲ್ಲಿ ಇಟ್ಟಿದ್ದ 7.43 ಲಕ್ಷ ಹಣ ಕಳವು ಪ್ರಕರಣ ದಾಖಲಾಗಿ 24 ಗಂಟೆಗಳಲ್ಲಿಯೇ ಆರೋಪಿಯನ್ನು ಬಂಧಿಸಿ, ಕಳ್ಳತನವಾಗಿದ್ದ ನಗದು ಹಣ ವಶ ಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

**24 ಗಂಟೆಗಳಲ್ಲಿಯೇ ಆರೋಪಿ ಬಂಧನ- ನಗದು ವಶ**

ನಾರಾಯಣ ಹೃದಯಾಲಯದಲ್ಲಿ ನಿನ್ನೆ ಸಂಜೆ 5.45 ಗಂಟೆಗೆ ಸಿಬ್ಬಂದಿಯು ರೋಗಿಗಳಿಂದ ಸಂಗ್ರಹವಾದ ಹಣವನ್ನು ಲಾಕರ್ ನಲ್ಲಿ ಇಟ್ಟು ಬೀಗ ಹಾಕಿಕೊಂಡು ಮನೆಗೆ ಹೋಗಿದ್ದರು. ನಂತರ ದಿ.24ರಂದು ಬೆಳಿಗ್ಗೆ 9 ಗಂಟೆಗೆ ಕಚೇರಿ ಬೀಗ ತೆಗೆದು ನೋಡಿದಾಗ ಗಾಡ್ರೇಜ್ ಬೀರುವಿನಲ್ಲಿದ್ದ ಹಣ ಕಳ್ಳತನವಾಗಿತ್ತು. ಈ ಕುರಿತು ವಿದ್ಯಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ನಡೆಸಿದ ಪೊಲೀಸರು, ಬಳ್ಳೂರು ಗ್ರಾಮದ ಷರೀಫ್ ಸಾಬ್ (33) ಬಂಧಿಸಿ, ನಗದು ವಶಪಡಿಸಿಕೊಂಡಿದ್ದಾರೆ. ತನಿಖೆಗೆ ವಿದ್ಯಾನಗರ ಠಾಣೆ ನಿರೀಕ್ಷಕಿ ಶಿಲ್ಪಾ ವೈ.ಎಸ್ ಹಾಗೂ ಪಿ.ಎಸ್.ಐ ವಿಜಯ ಎಮ್, ನಾಗರಾಜ ಹಾಗು ಸಿಬ್ಬಂದಿಗಳಾದ ಶಂಕರ್ ಜಾಧವ್, ಆನಂದ ಎಮ್, ಚಂದ್ರಪ್ಪ, ಭೋಜಪ್ಪ, ರವರನ್ನು ಒಳಗೊಂಡ ತಂಡ ರಚಿಸಲಾಗಿತ್ತು.

ಜಿಲ್ಲಾ ಪೊಲೀಸ್ ಕಚೇರಿಯ ಪೊಲೀಸ್ ಇನ್‌ಸ್ಪೆಕ್ಟರ್ ಇಸ್ಮಾಯಿಲ್ ಬಿ ಹಾಗು ಸಿಬ್ಬಂದಿಗಳಾದ ನಾಗರಾಜ ಕುಂಬಾರ ಹಾಗು ವೀರೇಶ್ ಅವರನ್ನು ಒಳಗೊಂಡ ತಂಡವು ಸಹಕಾರ ನೀಡಿತ್ತು.

## ಮಾಚಿದೇವರ ದೇವಸ್ಥಾನದಲ್ಲಿ ರುದ್ರಾಭಿಷೇಕ

ಇಲ್ಲಿನ ವಿನೋಬ ನಗರದ 1ನೇ ಮುಖ್ಯ ರಸ್ತೆ, 17ನೇ ತಿರುವಿನಲ್ಲಿರುವ ಶ್ರೀ ಮಡಿವಾಳ ಮಾಚಿದೇವ ಸಮುದಾಯ ಭವನದ ದೇವಸ್ಥಾನದಲ್ಲಿ ಫೆ.26ರ ಇಂದು ಸಂಜೆ 6.30ಕ್ಕೆ 'ಮಹಾ ಶಿವರಾತ್ರಿ' ಪ್ರಯುಕ್ತ ಈಶ್ವರ ದೇವರಿಗೆ ರುದ್ರಾಭಿಷೇಕ, ಜಪ ಸೇರಿದಂತೆ ವಿಶೇಷ ಪೂಜೆ ನಡೆಯಲಿವೆ.

## ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಪೋಸ್ಟ್: ಪ್ರಕರಣ ದಾಖಲು

ದಾವಣಗೆರೆ, ಫೆ.25- ಇನ್‌ಸ್ಟಾಗ್ರಾಂನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಶೈಲಿ, ಉನ್ನತ ಪದವಿ, ಮೀಸಲಾತಿ ಹಾಗೂ ಜೈ ಭೀಮ್ ಎನ್ನುವ ಪದದ ಬಗ್ಗೆ ಕೆಟ್ಟದಾಗಿ ವೀಡಿಯೋ ಮಾಡಿ ಹರಿ ಬಿಟ್ಟಿದ್ದು, ಇದರಿಂದ ಅಂಬೇಡ್ಕರ್ ಅಭಿಮಾನಿಗಳು, ಅನುಯಾಯಿಗಳು ಹಾಗೂ ಭಾರತೀಯರಿಗೆ ಮಾನಸಿಕವಾಗಿ ಧಕ್ಕೆ ಉಂಟಾಗಿದೆ.

ಸಮಾಜದ ಸುವ್ಯವಸ್ಥೆ ಕೂಡಾ ಹಾಳಾಗಿದ್ದು, ಕ್ರಮ ಕೈಗೊಳ್ಳುವಂತೆ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಾಟ್ಸ್‌ಆಪ್, ಫೇಸ್ಬುಕ್, ಇನ್‌ಸ್ಟಾಗ್ರಾಮ್, ಟ್ವಿಟ್ಟರ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ರೀತಿಯ ಪ್ರಚೋದನಕಾರಿ, ವ್ಯಕ್ತಿ ನಿಂದನೆ, ಧಾರ್ಮಿಕ ನಿಂದನೆ, ದ್ವೇಷ ಭಾಷಣ, ದೇಶ ವಿರೋಧಿ ಪೋಸ್ಟ್‌ಗಳು, ಆಕ್ಷೇಪಾರ್ಹ ಪೋಸ್ಟ್ ಗಳನ್ನು ಹಾಕುವುದು ಮತ್ತು ಶೇರ್ ಮಾಡುವುದು ಕಾನೂನು ಬಾಹಿರವಾಗಿದ್ದು, ಅಂತ ಪೋಸ್ಟ್ ಮಾಡುವಂತಹ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ಇಲಾಖೆ ಎಚ್ಚರಿಕೆ ನೀಡಿದೆ.

## ಪದ್ಮಸಾಲಿ ಸಮಾಜದಿಂದ ಇಂದು ಶಿವರಾತ್ರಿ ಕಾರ್ಯಕ್ರಮ, ರಥೋತ್ಸವ

ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜದ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಇಂದು ಮತ್ತು ನಾಳೆ ಎರಡು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಎಸ್.ಟಿ.ಪಿ. ತಿಪ್ಪೇಶ್, ಪ್ರಧಾನ ಕಾರ್ಯದರ್ಶಿ ವಿ.ಎಸ್.ಪರಶುರಾಮ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 6.30 ರಿಂದ 7.30 ರವರೆಗೆ ಸ್ವಾಮಿಗೆ ಅಭಿಷೇಕ, ಸಂಜೆ 6.30 ರಿಂದ ವಿಶೇಷ ರುದ್ರಾಭಿಷೇಕ, ಕ್ಷೀರಾಭಿಷೇಕ, ಶಿವ ಅಷ್ಟೋತ್ತರ ನಾಮಾವಳಿ, ತಿಲಾರ್ಚನೆ, ಮಹಾಮಂಗಳಾ ರತಿ ನಡೆಯಲಿದೆ. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಸ್ಪರ್ಧೆ ನಡೆಸಲಾಗುವುದು.

ನಾಳೆ ಗುರುವಾರ ಬೆಳಿಗ್ಗೆ 9.30 ಕ್ಕೆ ಶ್ರೀ ಸ್ವಾಮಿಯ ಬೆಳ್ಳಿ ರಥೋತ್ಸವ ಜರುಗಲಿದ್ದು, ತುಮ್ಮಿನಕಟ್ಟೆಯ ಶ್ರೀ ಪ್ರಭುಲಿಂಗ ಸ್ವಾಮೀಜಿ ಪೂಜೆ ನೆರವೇರಿಸಲಿದ್ದಾರೆ. ಎಸ್‌ಕೆಪಿ ರಸ್ತೆಯಿಂದ ಪ್ರಾರಂಭವಾಗುವ ರಥೋತ್ಸವ ದೊಡ್ಡಪೇಟೆ, ಬಿ.ಎಸ್. ಚನ್ನಬಸಪ್ಪ ಬಟ್ಟೆ ಅಂಗಡಿ ರಸ್ತೆ, ಹಾಸಬಾವಿ ಸರ್ಕಲ್, ಗಡಿಯಾರ ಕಂಬದ ರಸ್ತೆ, ಕಾಯಿಪೇಟೆ, ಹೊಂಡದ ಸರ್ಕಲ್ ಮೂಲಕ ದೇವವಸ್ಥಾನ ತಲುಪಲಿದೆ. ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ನಗರದಲ್ಲಿ ಇಂದು 'ಶಿವ ಸ್ಮರಣೆ ನೃತ್ಯ ಜಾಗರಣೆ' ಕಾರ್ಯಕ್ರಮ

ದಾವಣಗೆರೆ, ಫೆ. 25- ನಗರದ ನಮನ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ನಾಳೆ ದಿನಾಂಕ 26 ರಂದು 'ಶಿವಸ್ಮರಣೆ ನೃತ್ಯ ಜಾಗರಣೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಮನ ಅಕಾಡೆಮಿಯ ಉಪಾಧ್ಯಕ್ಷರಾದ ದಿನೇಶ್ ಕೆ. ಶೆಟ್ಟಿ, ಆರ್.ಹೆಚ್.ನಾಗಭೂಷಣ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ಬುಧವಾರ ರಾತ್ರಿ 9 ರಿಂದ ಬೆಳಗಿನ ಜಾವ 3 ರವರೆಗೆ ನಾಲ್ಕು ದೇವಸ್ಥಾನಗಳಲ್ಲಿ ಒಂದರ ನಂತರ ಒಂದರಂತೆ ನೃತ್ಯ ಸೇವೆಯನ್ನು ಮಾಡುವ ಮೂಲಕ ಶಿವಸ್ಮರಣೆ ಸಮರ್ಪಿಸಲಾಗುವುದು ಎಂದರು.

ರಾತ್ರಿ 9.30ಕ್ಕೆ ರಿಂಗ್ ರಸ್ತೆಯಲ್ಲಿರುವ ಶ್ರೀ ಶಾರದಾ ಮಂದಿರದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಶಂಕರ್ ಸೇವಾ ಸಂಘದ ಅಧ್ಯಕ್ಷ ಡಾ.ಬಿ.ಟಿ ಅಚ್ಯುತ್ ಮತ್ತಿತರರು ಭಾಗವಹಿಸಲಿದ್ದಾರೆ.

ನಮನ ಅಕಾಡೆಮಿ ಗೌರವಾಧ್ಯಕ್ಷ ಡಾ.ಎ.ಎಂ. ಶಿವಕುಮಾರ್, ಉಪಾಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಆರ್.ಹೆಚ್. ನಾಗಭೂಷಣ್ ಸೇರಿದಂತೆ ಅಕಾಡೆಮಿಯ ನಿರ್ದೇಶಕರು ಭಾಗವಹಿಸಲಿದ್ದಾರೆ.

ರಾತ್ರಿ 11 ಕ್ಕೆ ಲಿಂಗೇಶ್ವರ ದೇವಸ್ಥಾನದಲ್ಲಿ, ರಾತ್ರಿ 12.30 ಕ್ಕೆ ಜಯದೇವ ವೃತ್ತದಲ್ಲಿರುವ ಶ್ರೀ ಕೂಡಲಿ ಶಂಕರ ಮಠದಲ್ಲಿ, ರಾತ್ರಿ 2 ಗಂಟೆಗೆ ವಿದ್ಯಾನಗರದ ಶಿವ ಪಾರ್ವತಿ ದೇವಸ್ಥಾನದಲ್ಲಿ ನೃತ್ಯ ಸೇವೆಯನ್ನು ಮಾಡುವುದರ ಮೂಲಕ ಶಿವನಿಗೆ ನೃತ್ಯ ಜಾಗರಣೆ ಸಮರ್ಪಿಸಲಾಗುವುದು.

ಕಾರ್ಯಕ್ರಮದಲ್ಲಿ ಅಕಾಡೆಮಿಯ ಗುರುಗಳಾದ ಡಿ.ಕೆ.ಮಾಧವಿ ಮತ್ತು ಅವರ ಶಿಷ್ಯಂದಿರಾದ ಎಸ್. ಸಿಂಚನ, ಭೂಮಿಕಾ ಶ್ಯಾಮ ಕಠಾರೆ, ಎಸ್.ರೋಹಿಣಿ, ಡಿ.ಎಸ್.ಭವಾನಿ, ಋತು ಹಿರೇಮಠ್ ಸಿ.ಜಿ. ಅಧಿತಿ, ಎಸ್.ನಿಹಾರಿಕಾ, ನಿಧಿ ಪಿ. ಧೂಳೆಹೊಳೆ, ಸಂಸ್ಕೃತಿ ಜೆ. ಆಚಾರ್, ಜಿ.ಎಂ. ಮಾನ್ವಿ ಇವರು ನೃತ್ಯ ಸಮರ್ಪಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ನಮನ ಅಕಾಡೆಮಿಯ ಕಾರ್ಯದರ್ಶಿ ಡಿ.ಕೆ.ಮಾಧವಿ, ಅಧ್ಯಕ್ಷ ಗೋಪಾಲಕೃಷ್ಣ, ಪಿ.ಸಿ. ರಾಮನಾಥ, ಅನಿಲ್ ಬಾರೆಂಗಳ್, ಡಿ.ಎಸ್.ಭವಾನಿ, ಸಂಸ್ಕೃತಿ ಜೆ. ಆಚಾರ್ ಉಪಸ್ಥಿತರಿದ್ದರು.

## ಇಂದು ಪ್ರಾಣಿ ವಧೆ, ಮಾಂಸ ಮಾರಾಟ ನಿಷೇಧ

ದಾವಣಗೆರೆ, ಫೆ.25- ಮಹಾ ಶಿವರಾತ್ರಿ ಪ್ರಯುಕ್ತ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಫೆ.26ರ ಇಂದು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದ್ದು, ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಆರೋಗ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಒಡಿಶಾದ ಪುರಿ ಬಳಿಯ ಬಂಗಾಳ ಕೊಲ್ಲಿಯಲ್ಲಿ ಭೂಕಂಪ

ಕೊಲ್ಕೊತಾ, ಫೆ.25 - ಒಡಿಶಾದ ಪುರಿ ಬಳಿಯ ಬಂಗಾಳ ಕೊಲ್ಲಿಯಲ್ಲಿ ರಿಕ್ಟರ್ ಮಾಪಕದಲ್ಲಿ 5.1 ರಷ್ಟಿದ್ದ ಭೂಕಂಪ ಸಂಭವಿಸಿದೆ. ಬಂಗಾಳಕೊಲ್ಲಿಯ 91 ಕಿಲೋಮೀಟರ್ ಆಳದಲ್ಲಿ ಭೂಕಂಪ ಕೇಂದ್ರೀಕೃತವಾಗಿತ್ತು ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# 1984ರ ಸಿಖ್ ವಿರೋಧಿ ಗಲಭೆ : ಸಜ್ಜನ್‌ಗೆ ಜೀವಾವಧಿ ಶಿಕ್ಷೆ

ನವದೆಹಲಿ, ಫೆ. 25 - 1984ರ ಸಿಖ್ ವಿರೋಧಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮಾಜಿ ಸಂಸದ ಸಜ್ಜನ್ ಕುಮಾರ್‌ಗೆ ದೆಹಲಿ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

1984ರ ನವೆಂಬರ್ 1ರಂದು ಜಸ್ವಂತ್ ಸಿಂಗ್ ಹಾಗೂ ಅವರ ಪುತ್ರ ತರುಣ್‌ದೀಪ್ ಸಿಂಗ್ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಧೀಶೆ ಕಾವೇರಿ ಬಾವೇಜ ಅವರು ಈ ತೀರ್ಪು ನೀಡಿದ್ದಾರೆ.

ಸಜ್ಜನ್ ಕುಮಾರ್‌ಗೆ ಮರಣ ದಂಡನೆ ವಿಧಿಸಬೇಕು ಎಂದು ಜಸ್ವಂತ್ ಅವರ ಪತ್ನಿ ಹಾಗೂ ಪ್ರಾಸಿಕ್ಯೂಷನ್ ಪರವಾಗಿ ಮನವಿ ದಾಖಲಿಸಲಾಗಿತ್ತು.

ಈ ಬಗ್ಗೆ ಪಂಜಾಬಿ ಬಾಗ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಂತರ ವಿಶೇಷ ತನಿಖಾ ತಂಡ ಪ್ರಕರಣದ ತನಿಖೆ ವಹಿಸಿಕೊಂಡಿತ್ತು.

ಮಾಜಿ ಪ್ರಧಾನ ಮಂತ್ರಿ ಇಂದಿರಾಗಾಂಧಿ ಅವರ ಹತ್ಯೆಯ ನಂತರ ಸಿಖ್ ಸಮುದಾಯದವರ ಮೇಲೆ ದಾಳಿ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ಹತ್ಯೆ ನಡೆಸಿ ಮನೆ ಲೂಟಿ ಮಾಡಿ ಬೆಂಕಿ ಹಚ್ಚಲಾಗಿತ್ತು ಎಂದು ಜಸ್ವಂತ್ ಅವರ ಪತ್ನಿ ದೂರು ದಾಖಲಿಸಿದ್ದರು.

ಸಜ್ಜನ್ ಕುಮಾರ್ ಎಸಗಿರುವ ಕೃತ್ಯ ಕ್ರೂರ ಹಾಗೂ ಖಂಡನೀಯವಾಗಿದೆ. ಆದರೆ, ದೋಷಿಗೆ 80 ವರ್ಷ ವಯಸ್ಸಾಗಿದೆ ಹಾಗೂ ಅನಾರೋಗ್ಯದಿಂದ ಬಳಲುತ್ತಿರುವು ದನ್ನು ಪರಿಗಣಿಸಿ ಮರಣ ದಂಡನೆಯ ಬದಲು ಕಡಿಮೆ ಶಿಕ್ಷೆ ವಿಧಿಸುತ್ತಿರುವುದಾಗಿ ನ್ಯಾಯಾಧೀಶೆ ಹೇಳಿದ್ದಾರೆ.

ಜೈಲಿನಲ್ಲಿ ಕುಮಾರ್ ವರ್ತನೆ ತೃಪ್ತಿಕರವಾಗಿರುವುದಾಗಿ ಅಧಿಕಾರಿಗಳು ವರದಿ ನೀಡಿದ್ದಾರೆ. ಸಮಾಜದಲ್ಲಿ ದೋಷಿ ಹೊಂದಿರುವ ಬೇರುಗಳು ಹಾಗೂ ಸುಧಾರಣೆ ಮತ್ತು ಪುನರ್ವಸತಿಗೆ ಲಭ್ಯವಿರುವ ಮಾಹಿತಿ ಆಧರಿಸಿ ಮರಣ ದಂಡನೆಯ ಬದಲು ಜೀವಾವಧಿ ಶಿಕ್ಷೆ ವಿಧಿಸಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸಿಖ್ ವಿರೋಧಿ ಗಲಭೆಗಳಿಗೆ ಸಂಬಂಧಿಸಿದಂತೆ ಡಿಸೆಂಬರ್ 17, 2018ರಲ್ಲಿ ದೆಹಲಿ ಹೈಕೋರ್ಟ್ ಸಜ್ಜನ್ ಕುಮಾರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ಪ್ರಕರಣ ಸಹ ಅದೇ ಘಟನೆಯ ಭಾಗವಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ. ಐದು ಜನರ ಸಾವಿಗೆ ಕಾರಣವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತ್ತು.

# ಶಿವರಾತ್ರಿಯ ಆರಾಧನೆಗೆ ಸಜ್ಜಾದ ದೇವನಗರಿ

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಶಿವರಾತ್ರಿ ಅಮಾವಾಸ್ಯೆ ಪೂಜೆ



ದಾವಣಗೆರೆ, ಫೆ.25- ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಇದೇ ದಿನಾಂಕ 28ರ ಶುಕ್ರವಾರ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯುವುದು.

ನಂತರ ಮಧ್ಯಾಹ್ನ 12.30ಕ್ಕೆ ದಾಸೋಹ ಏರ್ಪಡಿಸಲಾಗಿದೆ. ಬೇತೂರು ಬಸವರಾಜಪ್ಪ ಮತ್ತು ಮಕ್ಕಳು, ಬೇತೂರು ಮುರುಗೇಶಪ್ಪ ಮತ್ತು ಮಕ್ಕಳು, ಶ್ರೀಮತಿ ಸೌಭಾಗ್ಯ ಜಿ.ಎಂ. ಮೋಹನ್ ಮತ್ತು ಮಕ್ಕಳು ಹಾಗೂ ಶ್ರೀಮತಿ ವೀಣಾ ಎಸ್.ಕೆ. ರವಿ ಮತ್ತು ಮಕ್ಕಳು ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಹರಿಹರದಲ್ಲಿ ಶೋಭಾಯಾತ್ರೆ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಸಂಸ್ಥೆಯ ಆವರಣದಲ್ಲಿ ಶಿವರಾತ್ರಿ ಪ್ರಯುಕ್ತ ಇಂದು ಬೆಳಿಗ್ಗೆ 8 ರಿಂದ ಜ್ಯೋತಿರ್ಲಿಂಗ ಉತ್ಸವದ ಶೋಭಾಯಾತ್ರೆ ಸೇರಿದಂತೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವದೇವಿ ತಿಳಿಸಿದ್ದಾರೆ.

ದಾವಣಗೆರೆ, ಫೆ.25- ಶಿವನ ಆರಾಧನೆಯ ಶಿವರಾತ್ರಿ ಹಬ್ಬಕ್ಕೆ ಜಿಲ್ಲಾದ್ಯಂತ ಭಕ್ತಿಯ ಸಂಭ್ರಮ ಕಂಡುಬಂದಿದೆ. ಶಿವರಾತ್ರಿ ಮುನ್ನಾ ದಿನವಾದ ಮಂಗಳವಾರ ಶಿವರಾತ್ರಿಗಾಗಿ ಹಣ್ಣು, ಹೂವು, ಖರೀದಿ ಭರಾಟೆ ಜೋರಾಗಿತ್ತು. ಅದರಲ್ಲೂ ಕಲ್ಲಂಗಡಿ, ಕರಬೂಜ, ದ್ರಾಕ್ಷಿ, ಕರ್ಜೂರ್ ಹಣ್ಣುಗಳು ಮಾರಾಟ ಗರಿ ಗೆದರಿದೆ.

ನಗರದಲ್ಲಿ ಫೆಬ್ರವರಿ ಆರಂಭದಿಂದಲೇ ಬಿಸಿಲಿನ ತಾಪಮಾನ ಜನರಲ್ಲಿ ಆತಂಕ ಮೂಡಿಸಿದೆ. ಕಳೆದ ಎರಡು ವಾರಗಳಿಂದ ಬಿಸಿಲಿನ ತಾಪಕ್ಕೆ ದೇಹವನ್ನು ತಂಪಾಗಿಸುವ ಕಲ್ಲಂಗಡಿ, ದ್ರಾಕ್ಷಿ, ಕರಬೂಜ ಹಣ್ಣುಗಳ ಮಾರಾಟ ಜೋರಾಗಿಯೇ ನಡೆಯುತ್ತಿದೆ.

ಶಿವರಾತ್ರಿಯಲ್ಲಿ ಕಲ್ಲಂಗಡಿ, ದ್ರಾಕ್ಷಿ, ಕರಬೂಜ, ಹಣ್ಣುಗಳಿಗೆ ವಿಶೇಷ ಸ್ಥಾನಮಾನವಿದೆ. ಹೀಗಾಗಿ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ, ಶಾಮಿಯಾನ ಹಾಕಿಕೊಂಡು ಕಲ್ಲಂಗಡಿ, ಕರಬೂಜ ಮಾರಾಟ ನಡೆಯುತ್ತಿದೆ. ಪ್ರಮುಖವಾಗಿ ಆಂಧ್ರಪ್ರದೇಶ, ತಮಿಳುನಾಡಿನ ಹಣ್ಣುಗಳು ಮಾರುಕಟ್ಟೆಗೆ ಬಂದಿವೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಅಂದ ಹಾಗೆ ಪ್ರತಿ ವರ್ಷ ಫಾಲ್ಗುಣ ಮಾಸದ ಕೃಷ್ಣ ಪಕ್ಷದ ಚತುರ್ದಶಿ ತಿಥಿಯಂದು ಮಹಾಶಿವರಾತ್ರಿಯನ್ನು ಆಚರಿಸಲಾಗು ತ್ತದೆ. ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದಾದ ಮಹಾಶಿವರಾತ್ರಿ ದಿನ ಶಿವನ ಆರಾಧನೆಗೆ ಬಿಲ್ವ ಪತ್ರೆ ಮಹತ್ವ ಎನಿಸಿದೆ.

ಧಾರ್ಮಿಕ ನಂಬಿಕೆಗಳ ಪ್ರಕಾರ, ಭಕ್ತರು ಭಕ್ತಿಯಿಂದ ಒಂದು ಬಿಲ್ವ ಪತ್ರೆಯನ್ನು ಅರ್ಪಿಸಿದರೂ ಭಗವಾನ್



### ಹಣ್ಣು-ಹೂ ಖರೀದಿ ಜೋರು, ಸಿಂಗಾರಗೊಂಡ ಶಿವಾಲಯಗಳು

ಭೋಲೆನಾಥ ಭಕ್ತರ ಕೂಗಿಗೆ ಕಿವಿಗೊಡುತ್ತಾನೆ ಎಂದು ಹೇಳಲಾಗುತ್ತದೆ. ಹಾಗಾಗಿ, ಮಹಾಶಿವರಾತ್ರಿ ಹಬ್ಬದಲ್ಲಿ ಬಿಲ್ವಪತ್ರೆಗೆ ವಿಶೇಷ ಪ್ರಾಮುಖ್ಯತೆ ಇದೆ. ನಾಳೆ ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಮಾರುಕಟ್ಟೆಗಳಲ್ಲಿ ಬಿಲ್ವಪತ್ರೆಗೆ ಬೇಡಿಕೆ ಹೆಚ್ಚಾಗಿದೆ.

ಶಿವರಾತ್ರಿ ಹಬ್ಬದ ನಿಮಿತ್ತ ಜಿಲ್ಲೆಯ ವಿವಿಧ ದೇವಸ್ಥಾನಗಳಲ್ಲಿ ಬುಧವಾರ ವಿಶೇಷ ಪೂಜೆಗಳು ನಡೆಯಲಿವೆ. ದೇವಸ್ಥಾನಗಳಿಗೆ ಬೆಳಿಗ್ಗೆಯಿಂದಲೇ ಭಕ್ತರು ಕುಟುಂಬ ಸಮೇತ ತೆರಳಿ ಶಿವನಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

ಒಟ್ಟಾರೆ ಶಿವನಾಮ ಸ್ಮರಣೆಗೆ ಭಕ್ತರು ಉತ್ಸುಕರಾಗಿದ್ದಾರೆ. ಮನೆಗಳಲ್ಲಿ ಶಿವನಿಗೆ ಅಭಿಷೇಕ ನೆರವೇರಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ದೇಗುಲಗಳಲ್ಲಿ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳನ್ನು ನಡೆಸಲು ಸಿದ್ಧತೆಗಳು ನಡೆದಿವೆ.

## ರಾಣೇಬೆನ್ನೂರು ಲಿಂಗದಳ್ಳಿಯಲ್ಲಿ ಇಂದು ಸ್ಫಟಿಕ ಲಿಂಗ ಪ್ರತಿಷ್ಠಾಪನೆ





ಜಗತ್ ಕಲ್ಯಾಣದ ಆಶಯದಿಂದ ರಾಣೇಬೆನ್ನೂರು ತಾಲ್ಲೂಕಿನ ಲಿಂಗದಹಳ್ಳಿಯ ರಂಭಾಪುರಿ ಪೀಠದ ಶಾಖಾ ಹಿರೇಮಠದ ಪೀಠಾಧಿಪತಿ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿಯವರು ಪ್ರಪಂಚದಲ್ಲಿಯೇ ಪ್ರಪ್ರಥಮ ಎನ್ನಲಾದ 9 ಅಡಿ ಎತ್ತರದ ಸ್ಫಟಿಕ ಲಿಂಗ ಸ್ಥಾಪಿಸಿದ್ದಾರೆ. ಮಹಾ ಶಿವರಾತ್ರಿ ದಿನದಂದು ಕಾಶಿ ಜಗದ್ಗುರುಗಳಿಂದ ಸ್ಫಟಿಕ ಲಿಂಗದ ಪ್ರಾಣ ಪ್ರತಿಷ್ಠಾಪನೆ ನೆರವೇರಲಿದೆ.

ಬೇಕಾಗಿದ್ದಾರೆ

ಎರಡು ತಿಂಗಳುಗಳವರೆಗೆ
ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್
ಬೇಕಾಗಿದ್ದಾರೆ.
ಅಂಬರಕರ್ ಪಂಪಣ್ಣ
ಬಟ್ಟೆ ವ್ಯಾಪಾರಿಗಳು, ಕಾಳಿಕಾದೇವಿ ರಸ್ತೆ, ದಾವಣಗೆರೆ.
ಮೊ. : 9916231611, 9008573055

# ನಗರದಲ್ಲಿ ಇಂದು 'ಶಿವರಾತ್ರಿ ಉತ್ಸವ'

ದಾವಣಗೆರೆ, ಫೆ.25- ವಿನಾಯಕ ಎಜುಕೇಶನ್ ಟ್ರಸ್ಟ್, ಅಥಣಿ ಮತ್ತು ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಅಥಣಿ ಸ್ನಾತಕೋತ್ತರ ಕೇಂದ್ರ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ಹಾಗೂ ಚಿರಂತನ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸಂಗೀತ, ನೃತ್ಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ನಾಳೆ ದಿನಾಂಕ 26 ರ ಬುಧವಾರ ಸಂಜೆ 7.30 ರಿಂದ ರಾತ್ರಿ 11.30 ರವರೆಗೆ ಸತತವಾಗಿ ಅಥಣಿ ಕಾಲೇಜಿನ ಆವರಣದಲ್ಲಿರುವ ಅತಿ ಎತ್ತರದ ಶಿವನ ಮೂರ್ತಿಯ ಮುಂಭಾಗ ಶಿವಭಕ್ತಿ ಬಿಂಬಿಸುವ ಹಲವು ಕಲಾ ಪ್ರದರ್ಶನಗಳನ್ನು ಒಳಗೊಂಡ ಶಿವರಾತ್ರಿ ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಚಿರಂತನ ಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ದೀಪಾ ಎನ್. ರಾವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಕೈಗಾರಿಕೋದ್ಯಮಿ ಡಾ. ಅಥಣಿ ಎಸ್. ವೀರಣ್ಣ, ಹಿರಿಯ ಪತ್ರಕರ್ತ ಸಿದ್ಧಯ್ಯ ಹಿರೇಮಠ ಮತ್ತಿತರರು ಆಗಮಿಸಲಿದ್ದಾರೆ.

ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ಭಕ್ತಿ ನೃತ್ಯ, ಭರತನಾಟ್ಯ, ವೇಷಭೂಷಣ ಸ್ಪರ್ಧೆ, ಶ್ಲೋಕ, ವಚನ ಪಠಣಕ್ಕೆ ವಿವಿಧ ವಿಭಾಗಗಳಲ್ಲಿ ಆನ್‌ಲೈನ್ ಸ್ಪರ್ಧೆ ಏರ್ಪಡಿಸಲಾಗಿತ್ತು. 180 ಕ್ಕೂ ಹೆಚ್ಚು ಆಡಿಷನ್ ವಿಡಿಯೋಗಳು ಬಂದಿದ್ದವು. ಹಿರಿಯರಾದ ಡಾ.ಬಿ.ಟಿ. ಅಚ್ಯುತ್, ಡ್ಯಾನ್ಸ್ ಮಾಸ್ಟರ್ ಅಭಿಷೇಕ್ ಮಠದ್, ಮೈಸೂರಿನ ಗುರು ಸೌಮ್ಯ ರಾಣಿ ತೀರ್ಪುಗಾರರಾಗಿ 40 ಕ್ಕೂ ಹೆಚ್ಚು ಕಲಾವಿದರು ಹಾಗೂ ಕಲಾ ತಂಡಗಳನ್ನು ಆಯ್ಕೆ ಮಾಡಿದ್ದಾರೆ ಎಂದು ಹೇಳಿದರು.



### ಪ್ರತಿಭೆಗಳ ನೃತ್ಯ, ಸಂಗೀತ ಸೇವೆ

ಮೂರು ವರ್ಷದ ಮಕ್ಕಳಿಂದ ಹಿಡಿದು 74 ವರ್ಷ ವಯಸ್ಸಿನ ಕಲಾವಿದರು ತಮ್ಮ ಪ್ರತಿಭಾ ಪ್ರದರ್ಶನ ನೀಡಲಿದ್ದಾರೆ. ಉಚಿತ ಪ್ರವೇಶವಿದ್ದು, ಕಲಾಸಕ್ತರು ಆಗಮಿಸುವಂತೆ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ರಕ್ಷಾ ರಾಜಶೇಖರ್, ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಕೆ. ಷಣ್ಮುಖ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಂ.ಸಿ. ಗುರು, ಬಿ. ವೆಂಕಟೇಶ್ ಉಪಸ್ಥಿತರಿದ್ದರು.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಶಿವರಾತ್ರಿ ಅಮಾವಾಸ್ಯೆ



ದಾವಣಗೆರೆ, ಫೆ. 25 - ನಗರದ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಇದೇ ದಿನಾಂಕ 28 ರ ಶುಕ್ರವಾರ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಉಮಾದೇವಿ ಮತ್ತು ಎ.ಡಿ. ಮಂಜಪ್ಪ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

ಅಪೇಕ್ಷಾ ಮಸಾಲಾ
ಎಲ್ಲಾ ಗೃಹಿಣಿಯರ ಏಕೈಕ ಅಪೇಕ್ಷೆಯ "ಅಪೇಕ್ಷಾ" ಮಸಾಲಾ ಪುಡಿಗಳು
"ಉತ್ತಮ ಗುಣಮಟ್ಟ - ಯೋಗ್ಯ ಬೆಲೆ, ಅಮೋಘ ಸ್ವಾದ..."
ಅಗ್‌ಮಾರ್ಕ್ ಗುಣಮಟ್ಟದ ಮಸಾಲೆ ಪುಡಿಗಳು
1985ನೇ ಇಸವಿಯಲ್ಲಿ ಸ್ಥಾಪನೆಗೊಂಡಿರುವ 2025ನೇ ಇಸವಿಗೆ 41ನೇ ವರ್ಷಕ್ಕೆ ಯಾವುದೇ ಕಪ್ಪುಚುಕ್ಕೆ ಇಲ್ಲದೇ "ಅಪೇಕ್ಷಾ" ಮಸಾಲ ಪಾದಾರ್ಪಣೆ ಮಾಡುತ್ತಿದೆ. ಹಿಂದೆ ಕರ್ನಾಟಕದಲ್ಲಿರುವ ಎಲ್ಲಾ ಅಂಗನವಾಡಿಗಳಿಗೆ ಟನ್‌ಗಟ್ಟಲೆ ಸಾಂಬಾರ ಪದಾರ್ಥಗಳನ್ನು ಕೊಡುತ್ತಿದ್ದೇವೆ. ಈಗಲೂ ಸಹಾ MSPC ಯಿಂದ ಅಂಗನವಾಡಿಗಳಿಗೆ ಟನ್‌ಗಟ್ಟಲೆ ಕೊಡಲು ಸಿದ್ಧರಿದ್ದೇವೆ. * 100 ಕಿ.ಮೀ. ಒಳಗಡೆ ಇದ್ದರೆ ಉಚಿತ ಡೆಲಿವರಿ, 100 ಕಿ.ಮೀ. ಗಿಂತ ದೂರವಿದ್ದರೆ ಡೀಸೆಲ್ ಚಾರ್ಜ್ ಕೊಡಬೇಕಾಗುತ್ತದೆ. ಅದಲ್ಲದೇ ಹಾಸ್ಟೆಲ್, ಪಿಜಿ, ಆಸ್ಪತ್ರೆಗಳಿಗೂ ಸಹ ಕೊಡಲು ಸಿದ್ಧರಿದ್ದೇವೆ.



Buy one get one Free...

ಮಸಾಲಾ ಪುಡಿಗಳು :
* ವಿಧದ ಸಾಂಬಾರ್ ಪೌಡರ್
* ರಸಂ ಪೌಡರ್
* ಪುಳಿಯೋಗರೆ ಪೌಡರ್
* ವಾಂಗೀಬಾತ್ ಪೌಡರ್
* ಟೊಮ್ಯಾಟೋ ಪೌಡರ್
* ಬಿಸಿಬೇಳೆಬಾತ್ ಪೌಡರ್
* ಧನಿಯಾ ಪೌಡರ್
* ಅರಿಶಿಣ ಪೌಡರ್
* ಕಾರದ ಪೌಡರ್
* ಚನ್ನಾ ಮಸಾಲಾ
* ಚಿಕನ್ ಮಸಾಲಾ
* ಮಟನ್ ಮಸಾಲಾ
* ಬಿರಿಯಾನಿ ಮಸಾಲಾ
* ಗರಂ ಮಸಾಲಾ
* ಎಗ್‌ರೈಸ್ ಮಸಾಲಾ
* ಕಬಾಬ್ ಮಸಾಲಾ

ಉಪ್ಪಿನಕಾಯಿಗಳು :
* ಮಾವಿನಕಾಯಿ
* ಲಿಂಬು
* ಮಿಕ್ಸ್
* ಅಮಟೆಕಾಯಿ
* ಮಿಡಿ
* ಕಂಚಿಕಾಯಿ
* ಸಿಜ್‌ವಾನ್ ಮಸಾಲಾ
* ಟೊಮ್ಯಾಟೋ ಬಾತ್
* ಮಾವಿನಕಾಯಿ ಚಿತ್ರಾನ್ನ
* ಹಸಿ ಹುಣಸೆಕಾಯಿ ತೊಕ್ಕು
* ಆಮ್ಲ ಪಿಕಲ್
* ಬೆಳ್ಳುಳ್ಳಿ * ಶುಂಠಿ ಪಿಕಲ್ಸ್

ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ ಸಂಪರ್ಕಿಸಿ : 99865 38099, 99806 37571

ಹೃತ್ಪೂರ್ವಕ ಅಭಿನಂದನೆಗಳು


ಶ್ರೀ ಎನ್. ರಂಗಸ್ವಾಮಿ, ವಕೀಲರು, ಅಧ್ಯಕ್ಷರು

ಸವಿತಾ ಕ್ರೆಡಿಟ್ ಕೋ-ಆಪ್ ಸೊಸೈಟಿ ನಿಯಮಿತದ ಪದಾಧಿಕಾರಿಗಳ ಚುನಾವಣೆಯಲ್ಲಿ


ಶ್ರೀ ಜಿ.ಸಿ. ಶ್ರೀನಿವಾಸ್ ಉಪಾಧ್ಯಕ್ಷರು

ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.


ಶ್ರೀ ಸಿ. ರಾಮಾಂಜನೇಯ ನಿರ್ದೇಶಕರು


ಶ್ರೀ ಜೆ. ಮಂಜುನಾಥ್ ನಿರ್ದೇಶಕರು


ಶ್ರೀ ಎನ್. ಗೋವಿಂದರಾಜ್ ನಿರ್ದೇಶಕರು


ಶ್ರೀ ಜಿ.ಆರ್. ಪಾಂಡುರಂಗ ವಿಠ್ಠಲ ನಿರ್ದೇಶಕರು


ಶ್ರೀ ಜಿ.ಟಿ. ಮಂಜುನಾಥ ನಿರ್ದೇಶಕರು


ಶ್ರೀ ಎಂ. ಗಂಗಾಧರ ನಿರ್ದೇಶಕರು


ಶ್ರೀಮತಿ ಸುವರ್ಣ ನಿರ್ದೇಶಕರು


ಶ್ರೀಮತಿ ಸಂಜೀವಮ್ಮ ನಿರ್ದೇಶಕರು

ಶುಭಾಶಯ ಕೋರುವವರು
ಪಿ - ಕ್ಯೂಬ್ ಸೇವಾ ಸಂಸ್ಥೆ
ದಾವಣಗೆರೆ

## ಈಶ್ವರ ಪಾರ್ವತಿ ಸ್ವಾಮಿ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ, ಬಿಲ್ವಾರ್ಚನೆ



ಶ್ರೀ ಈಶ್ವರ ಪಾರ್ವತಿ ಸ್ವಾಮಿ ದೇವಸ್ಥಾನ ಟ್ರಸ್ಟ್ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಬೆಳಿಗ್ಗೆ 5ರಿಂದ ಶಿವನಿಗೆ ರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ ಪೂಜೆ, ಸಂಜೆ 6 ರಿಂದ ಶಿವನ ದರ್ಶನದ ವ್ಯವಸ್ಥೆ ಇರುತ್ತದೆ.

ಸಂಜೆ 7ಕ್ಕೆ ದೇವಸ್ಥಾನದ ಆವರಣದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ ಭರತನಾಟ್ಯ, ಭಜನಾ ಕಾರ್ಯಕ್ರಮಗಳು ಹಾಗೂ ಜಾಗರಣೆ ನಡೆಯುತ್ತದೆ.

ಕಾರ್ಯಕ್ರಮ ಉದ್ಘಾಟನೆಯನ್ನು ಬೆಳವನೂರು ನಾಗರಾಜಪ್ಪ, ಉದ್ಘಾಟನೆಯನ್ನು ಗಿರೀಶ್ ಮುದೇಗೌಡ್ರು, ಅತಿಥಿಗಳಾಗಿ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ, ಜಿ.ಡಿ. ಗುರುಸ್ವಾಮಿ ಗಂಗನಕಟ್ಟೆ, ಶಿವಕುಮಾರ ಡಿ.ಎಂ. ಹಾಜರಿರುವರು. ರಾತ್ರಿ 7 ರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ.

## ನಗರದಲ್ಲಿ ಇಂದು ಹಾಲು, ಉತ್ತರಾಣಿಕಡ್ಡಿ, ಬಿಲ್ವಪತ್ರೆ ವಿತರಣೆ

ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಬಿಲ್ವಪತ್ರೆ, ಉತ್ತರಾಣಿ ಕಡ್ಡಿ ಮತ್ತು ಅಭಿಷೇಕಕ್ಕೆ ಹಾಲನ್ನು ವಿನೋಬ ನಗರ ನಾಲ್ಕನೇ ಮುಖ್ಯರಸ್ತೆ ಪಾರ್ಕ್ ಹತ್ತಿರ ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.

ಭಕ್ತರು ಬರುವಾಗ ಹಾಲಿಗೆ ಬಾಟಲು ಅಥವಾ ಕವರ್ ತರಬೇಕೆಂದು ರೈತ ಸಂಘ ಹಸಿರು ಸೇನೆಯ ತಾಲ್ಲೂಕು ಅಧ್ಯಕ್ಷ ಮಂಡಲೂರು ವಿಶ್ವನಾಥ್ (9964241490) ತಿಳಿಸಿದ್ದಾರೆ.


PCC 1962

ಪ್ರಿಯ ಗ್ರಾಹಕರೇ,
ಜಾಗತಿಕ ಮಾರುಕಟ್ಟೆಯಲ್ಲಿ ಕಾಫಿ ಬೆಲೆ ಏರಿಕೆಯಾಗಿರುವುದರಿಂದ, ಅದು ನಮ್ಮ ಉತ್ಪನ್ನಗಳ ಮೇಲೂ ಪರಿಣಾಮ ಬೀರುತ್ತದೆ.
ಆದ್ದರಿಂದ, ನಾವು ಮಾರ್ಚ್ 1 - 2025 ರಿಂದ ನಮ್ಮ ಎಲ್ಲಾ ಕಾಫಿ ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸುತ್ತಿದ್ದೇವೆ. ದಯವಿಟ್ಟು ಸಹಕರಿಸಿ.

ANS FOODS · COFFEE LEGACY SINCE 1962
www.pcc1962.coffee




## ಆನೆಕೊಂಡದ ರೇವಕ್ಕರ ಬಸವರಾಜಪ್ಪ ನಿಧನ



ದಾವಣಗೆರೆ ವಿನಾಯಕ ಬಡಾವಣೆ ವಿದ್ಯಾನಗರ ವಾಸಿ
**ಶ್ರೀ ಎ.ಆರ್. ಬಸವರಾಜಪ್ಪ**
ಇವರು ದಿನಾಂಕ 25.02.2025ರ ಮಂಗಳವಾರ ಬೆಳಿಗ್ಗೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅವರಿಗೆ 76 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.02.2025ರ ಶುಕ್ರವಾರ ಬೆಳಿಗ್ಗೆ 11ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬದವರು : ರೇವಕ್ಕಳ ವಂಶಸ್ಥರು, ಆನೆಕೊಂಡ

## ಸುಮಾ ಸುರೇಶ್ (ಪುಷ್ಪಾ ಎಸ್.ಕೆ) ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ವಾಸಿ
ನಿಟ್ಟುವಳ್ಳಿ ಹನುಮಂತಪ್ಪ ನಿವೃತ್ತ ಪ್ರಾಧ್ಯಾಪಕ ಇವರ ಸಹೋದರ
ದಿವಂಗತ ಸುರೇಶ್ ಎನ್. ಇವರ ಧರ್ಮಪತ್ನಿ
**ಶ್ರೀಮತಿ ಸುಮಾ (ಪುಷ್ಪಾ ಎಸ್.ಕೆ.)**
ಇವರು ದಿನಾಂಕ 25.02.2025ರ ಮಂಗಳವಾರ ರಾತ್ರಿ 9.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 49 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.02.2025ರ ಬುಧವಾರ ಬೆಳಿಗ್ಗೆ 11 ಗಂಟೆಯವರೆಗೆ ನಿಜಲಿಂಗಪ್ಪ ಬಡಾವಣೆಯ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಮಧ್ಯಾಹ್ನ 2 ಗಂಟೆಗೆ ಹರಿಹರ ತಾಲ್ಲೂಕು ಬೆಳ್ಳೂಡಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬದವರು : ಮೊ. : 88671 40025, 98440 61133

## ಸವಿನೆನಪು



**ದಿ॥ಕೆ.ಬಿ. ಹನುಮಂತಪ್ಪ**
ಟಿಎಪಿಸಿಎಂಎಸ್ ಮಾಜಿ ನಿರ್ದೇಶಕರು, ಹರಿಹರ.

ನೀವು ನಮ್ಮನ್ನಗಲಿ ಐದು ವರ್ಷಗಳೇ ಉರುಳಿದರೂ
ನಿಮ್ಮ ಸವಿನೆನಪು ನಮ್ಮಲ್ಲಿ ಹಸಿರಾಗಿ,
ಉಸಿರಾಗಿ ನಮ್ಮೀ ಬದುಕಿಗೆ ದಾರಿದೀಪವಾಗಿ
ಮುನ್ನಡೆಸುತ್ತಲಿದೆ... ಭಗವಂತನು
ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ...

ಪತ್ನಿ, ಮಕ್ಕಳು, ಮೊಮ್ಮಕ್ಕಳು
ಸಹೋದರ, ಸಹೋದರಿಯರು
ಮಾವಂದಿರು, ಸಂಬಂಧಿಕರು
ಕುಟುಂಬದ ಸದಸ್ಯರು ಹಾಗೂ ಬಂಧು-ಮಿತ್ರರು
ಹೊಸಭರಂಪುರ ಬಡಾವಣೆ ಹರಿಹರ.

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas